
# ಅಪರಂಜಿ

ತಿಳಿನಗೆಯ ಕಾರಂಜಿ

ಏಪ್ರಿಲ್ 2023




ಬಿಡಿ ಪ್ರತಿ: ರೂ. 10/-

beechi

TEMPLE OF KNOWLEDGE

# ಪುಸ್ತಕವಿಲ್ಲದ ಕೋಣೆ ಆತ್ಮವಿಲ್ಲದ ದೇಹವಿದ್ದಂತೆ

ಬೀChiಯವರ ವಿಡಂಬನೆ ಹಾಸ್ಯದ ಮೂಲಕ ಮೌಲ್ಯಗಳು ಬೆಳೆಯುತ್ತದೆ ಹಾಗೂ ಬೀChi ಅವರ ಪುಸ್ತಕಗಳು ಪ್ರೇರಣೆ, ಸ್ಫೂರ್ತಿ ಮತ್ತು ಮನರಂಜನೆಯಿಂದ ತುಂಬಿವೆ ಸಕಾರಾತ್ಮಕ ಪರಿಣಾಮ ಬೀರುತ್ತದೆ.

**50 ಪುಸ್ತಕಗಳ ಪ್ಯಾಕ್**

ನಿಮಗಾಗಿ ಮತ್ತು ಇತರರಿಗೆ ಉಡುಗೊರೆಯಾಗಿ ನೀಡಲು ಈ ಅದ್ಭುತ ಪುಸ್ತಕಗಳ ಸಂಗ್ರಹವನ್ನು ಖರೀದಿಸಿ ಆಸಕ್ತ ಓದುಗರು, ಶಾಲೆಗಳು, ಕಾಲೇಜುಗಳು, ಕಾರ್ಪೊರೇಟ್‌ಗಳು, ವಿಶ್ವವಿದ್ಯಾನಿಲಯಗಳು ಮತ್ತು ಓದಲು ಆಸಕ್ತಿ ಹೊಂದಿರುವ ಇತರ ಸಂಸ್ಥೆಗಳಿಗೆ ಇದನ್ನು ಹಂಚಿಕೊಳ್ಳಿ. ಪುಸ್ತಕಗಳು ನಿಮ್ಮ ಮನೆ ಸೇರಲಿ ಹಾಗೂ ಬಂಧುಗಳಿಗೆ, ಸ್ನೇಹಿತರಿಗೆ ಕಾಣಿಕೆಯಾಗಿ ಎಲ್ಲಾ ಸಮಾರಂಭಕ್ಕೂ ಪುಸ್ತಕಗಳು ಉಡುಗೊರೆಯಾಗಿ ಕೊಡಬಹುದು.

**ಬೆಲೆ ರೂ7592 after discount ರೂ 6799 ಪ್ರತಿಗಳನ್ನು ಪಡೆಯಲು ಸಂಪರ್ಕಿಸಿ**


Pay 9845264304

ಆಸಕ್ತರು ಸಂಪರ್ಕಿಸಿ : 080–29731414 ಮೊ : 9035302302

---

# BEECHI PRAKASHANA

# ಬೀchi ಪ್ರಕಾಶನ,



## BOOKS AVAILABLE

- Kannada Books
- Banking Exam Books
- Biographies
- Business & Economics
- Children & Young Adult Books
- Comics
- Competitive Exam Books
- Engineering Entrance Exam
- Fiction & Non-Fiction Books
- Office Stationery
- ಕನ್ನಡ ಪುಸ್ತಕಗಳು
- Health & Family
- Humour
- Law
- Literature
- Medical Entrance
- Politics
- Reference Books
- Religion & Spirituality
- Romance
- Other Books

Email : admin@beechi.in | www.beechi.in | 9845264304

# Ravi Graphics
OFFSET PRINTERS

*Bringing colours alive*

***What we specialize into :***

- Books
- Brochures
- Catelogues
- Boxes
- Mono Cartons



53/8, 2nd Main Road, Industrial Town, Rajajinagar, Bangalore - 560 010
Tel: 4088 9999/55, Fax : 4088 9944 website : www.ravigraphics.com



Bag is everything

# bag factory
bagfactory.co.in

## Our Promise

- 100% recyclable paper bags & pouches
- Pan-India delivery
- Premium customisation for high-street brands




Reach us for your paper bag requirements

**+91 89719 95599 | sales@bagfactory.co.in | bagfactory.co.in**

www.mallige.com

Certificate No.: MC-2068




Established in 1978 we are a multi-speciality, tertiary care hospital.

# CARING AND HEALING

| 126 | 60+ | 25+ |
|---|---|---|
| BEDS | LEADING SPECIALISTS | SPECIALTIES |

An institution of heritage in the heart of Bengaluru.




MALLIGE HOSPITAL
PERSONALISED COMPLETE HEALTHCARE

MALLIGE LABS

**Mallige Medical Centre Pvt. Ltd.**

31 & 32 Crescent Road, Bangalore 560001, India.

+91.80.67165555 +91.80.45577099 +91.80.22203333

Email: info@mallige.com

**ಸಂಪಾದಕ ಮಂಡಳಿ**

ಸಂಪಾದಕರು

ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು

ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು

ಶ್ರೀ ಎಚ್. ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

ಆಡಳಿತ ಮಂಡಳಿ

ಮ್ಯಾನೇಜಿಂಗ್ ಟ್ರಸ್ಟಿ

ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

ಶ್ರೀ ವಿ. ಆರ್. ಭರತ್


ಚಂದಾ ವಿವರ :

ಬಿಡಿ ಪ್ರತಿ : ರೂ. 10/-

ವಾರ್ಷಿಕ ಚಂದಾ : ರೂ. 100/-

ಹತ್ತು ವರ್ಷದ ಚಂದಾ: ರೂ. 750/-

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ: ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.



# ಅಪರಂಜಿ

ತಿಳಿನಗೆಯ ಕಾರಂಜಿ


ಸಂಪುಟ 40

ಸಂಚಿಕೆ – 7

ಏಪ್ರಿಲ್–2023


## ಈ ಸಂಚಿಕೆಯಲ್ಲಿ...


| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ನಮ್ಮನಿಮ್ಮಲ್ಲಿ | ಶಿವಕುಮಾರ್ | 3 |
| ದೃಷ್ಟಿ ದಾನ | ಶಿವಕುಮಾರ್ | 4 |
| ಲೇ ಆಫ್ | ಸಿ.ಆರ್. ಸತ್ಯ | 7 |
| ನಮ್ಮುಡ್ಗ ಮೆಡಿಕಲ್ | ಆರ್.ರಾಮಚಂದ್ರನ್ | 10 |
| ನಾನಂತು ಕರ್ಣ | ಮಂಗಳ ಎಂ ನಾಡಿಗ್ | 13 |
| ಕಚ್ಚಿತು | ಉಷಾ ರಮೇಶ್ | 14 |
| ಅಡುಗೆ ಅರಮನೆಯೆಂಬ | ಎಸ್.ಕೆ. ಸೋಮೇಶ್ವರ | 15 |
| ಶುಭೋದಯ | ನಾ.ವಿಲಾಸ ಹುದ್ದಾರ | 17 |
| ಕಿರು ಪ್ರಸಂಗಗಳು | ವಿ.ವಿಜಯೇಂದ್ರ ರಾವ್ | 18 |
| ತುಂತುರು | ದಂನಆ | 21 |
| ಬಾಂಬೆ ಮಾಮ | ಅರವಿಂದ ಜೋಶಿ | 22 |
| ವಿವಿ ಕೊಟ್ಟರೂ | ಡಾ.ಗಣೇಶ್ ಹೆಗಡೆ | 24 |
| ದೀಪ | ವಾಣಿ ಭಂಡಾರಿ | 29 |
| ಅಕ್ಕಪಕ್ಕ ನೆರೆಹೊರೆ | ಆನಂದ | 31 |
| ಥೈಲಾಂಡ್ ಪ್ರವಾಸ | ಆರತಿ ಘಟಕಾರ್ | 32 |
| ಮರೆಯಬಾರದ್ದು | ಪ್ರಭಾ | 34 |
| ಹೆಸರೇನ ನಾ ಹೇಳಲಿ | ಮೂರ್ತಿ ಬಿ.ಎಲ್.ಆರ್ | 36 |


**ವ್ಯಂಗ್ಯ ಚಿತ್ರಗಳು:**

**ಹೊರ ಪುಟ–ನಾಗನಾಥ್ ಗೌರೀಪುರ**

**ಒಳ ಪುಟ–ಆದರ್ಶ ಪೈ**


*ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ ಮಲ್ಲೇಶ್ವರಂ,*

*ಬೆಂಗಳೂರು – 560 003,* email: koravanjiaparanji@gmail.com ಮೊಬೈಲ್:9845264304



ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ. ನೋ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು–560 068. ದೂರವಾಣಿ: 080–26688488. email:belururamamurthy@gmail.com


**For Online payment of ubscription:** Name : KORAVANJI APARANJI TRUST

Current Account No.: 109804180000056, IFS Code : SVCB0000098

SVC Co-operative Bank Ltd., Branch: Malleshwaram

Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com


*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಶ್ರೀ ಬಾಲಾಜಿ ಪ್ರಿಂಟರ್ಸ್, (ರವಿ) ಸಹಕಾರನಗರ*



## ಅಪರಂಜಿ ಕಿಡಿ

● ಪ್ರಕಾಶ್

ಶಾಸಕ ಮಾಡಾಳ್ ಅವರಿಗೆ ವೈಭವದಿಂದ ಮೆರವಣಿಗೆ

ದಿನಪತ್ರಿಕೆ.....

ಅಪರಂಜಿ ಬೆಚ್ಚಿಬಿದ್ದಳಂತೆ !!

***

ಇನ್ನುಮುಂದೆ ಆಸ್ತಿತೆರಿಗೆ ಹತ್ತು ನಿಮಿಷದಲ್ಲಿ !!

ದಿನಪತ್ರಿಕೆ.....

ಸರ್ವರ್ ಡೌನ್ ಆಗಿದೆ ಅಂತ ಹೇಳದಿದ್ದರೆ ಸಾಕು !!

***

ಹೊರಗೆ ಕುಸ್ತಿ; ವೇದಿಕೆಯಲ್ಲಿ ದೋಸ್ತಿ

ಶೀರ್ಷಿಕೆ.....

ಆಹಾ !! ಹೀಗಿರಬೇಕು ಶೀರ್ಷಿಕೆಗಳು !

***

ವನಿತೆಯರ ಕ್ರಿಕೆಟ್ ಸಂಭ್ರಮ ನೋಡಿ ಅಪರಂಜಿ ಪ್ರಸನ್ನಳಾದಳಂತೆ !

***

ಸಾಬೂನು ಹಗರಣ; ಟಿ ಎನ್ ಸೀತಾರಾಮ್ ಅವರಿಗೆ ಬೇಸರ

ಪತ್ರಿಕೆ.....

ಹಿಂದೆ ಮೈಸೂರು ಸ್ಕ್ಯಾಂಡಲ್ ಸಾಬೂನು ಅಂತ ಕಿಡಿ ಹಾರಿಸಿದ್ದು ನೆನಪಿಗೆ ಬರುತ್ತೆ !

****

ಸಂಚಾರ ನಿಯಮ ಉಲ್ಲಂಘನೆ; ಒಂದೇ ದಿನದಲ್ಲಿ 72. ಲಕ್ಷ ದಂಡ ವಸೂಲು.

ಸುದ್ದಿ.....

ಅದರ ಸದುಪಯೋಗ ಹೇಗೆ ಮಾಡುತ್ತಾರೋ, ನೋಡಬೇಕು !!

***

■

# ನಮ್ಮ ನಿಮ್ಮಲ್ಲಿ

**ಶಿವಕುಮಾರ್**

ಶೋಭಕೃತ್ ನಾಮ ಸಂವತ್ಸರದಲ್ಲಿ ನಮ್ಮ ಎಲ್ಲ ಓದುಗ ಬಂಧುಗಳೂ ಆಯುರಾರೋಗ್ಯವಂತರಾಗಿ ನೆಮ್ಮದಿಯಿಂದ ಇರುವಂತಾಗಲಿ ಎಂಬ ಅಪರಂಜಿ ಭಗವಂತನಲ್ಲಿ ಪ್ರಾರ್ಥಿಸುತ್ತಾಳೆ. ಸೆಪ್ಟೆಂಬರ್ 2023ರಕ್ಕೆ ಅಪರಂಜಿ ನಾಲ್ಕು ದಶಕಗಳ ಯಾತ್ರೆಯನ್ನು ಪೂರ್ಣಗೊಳಿಸುತ್ತಾಳೆ. ಸಹಜವಾಗಿಯೇ ನಮಗೆಲ್ಲಾ ಇದೊಂದು ಹೆಮ್ಮೆಯ ವಿಷಯ.

ಕನ್ನಡ ಮಾಸಪತ್ರಿಕೆಯೊಂದು ಇಷ್ಟು ಕಾಲ ನಿರಂತರವಾಗಿ ಸಾಹಿತ್ಯ ಸೇವೆಯಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗಿರುವುದು, ಓದುಗ ಬಳಗದ ನಿಮ್ಮೆಲ್ಲರ ಪ್ರೋತ್ಸಾಹ ಸಹಕಾರಗಳಿಂದ ಮಾತ್ರ ಎಂದು ನಮ್ರತೆಯಿಂದ ತಿಳಿಸಬಯಸುವೆ.

ಈ ವಿಶಿಷ್ಟ ಕಾಲಘಟ್ಟದ ಸಂತಸದ ಆಚರಣೆಯ ಸಂದರ್ಭದಲ್ಲಿ ಅಕ್ಟೋಬರ್ 2023ರ ಸಂಚಿಕೆಯನ್ನ "**ನಲವತ್ತರ ಸಂಭ್ರಮ**" ದ ವಿಶೇಷಾಂಕವನ್ನಾಗಿ ಹೊರತರುತ್ತಿದ್ದೇವೆ. ನಮ್ಮ ಎಲ್ಲ ಲೇಖಕ ಲೇಖಕಿಯರೂ ಈ ಸಂಚಿಕೆಗೆ ತಮ್ಮ ಬರಹಗಳನ್ನು ಕಳಿಸಲು ಸಿದ್ಧರಾಗಿರೆಂದು ಸವಿನಯ ಬಿನ್ನಹ.

ಬಹು ಹಿಂದೆ 1983ರ ಅಕ್ಟೋಬರ್ ತಿಂಗಳಲ್ಲಿ ನಾವೆಲ್ಲಾ ಸೇರಿ (ಆಗ ನನ್ನೊಂದಿಗೆ ಅ.ರಾ.ಸೇ, ಶೇಷಗಿರಿ ಹಾಗೂ ಶಿವಮೊಗ್ಗ ಸುಬ್ಬಣ್ಣ ಇದ್ದರು) ಚಿತ್ರದುರ್ಗದಲ್ಲಿ ಅಪರಂಜಿಯ ಪ್ರಥಮ ಸಂಚಿಕೆಯನ್ನು ಬಿಡುಗಡೆ ಮಾಡಿದಾಗ, ಆಗ ತೆರವು ಮಾಡಿದ ಹಾಸ್ಯದ ಹೊನಲು, ಇಷ್ಟು ದೂರ ಕ್ರಮಿಸುವ ಮಹತ್ತರ ಗುರಿಯನ್ನು ಖಂಡಿತ ನೆನೆಸಿರಲಿಲ್ಲ. ಈಗ ಯುವ ಪೀಳಿಗೆಯ ಸಾರಥ್ಯದಲ್ಲಿ ಅಪರಂಜಿಯು, ಕ್ಷಿತಿಜದಲ್ಲಿನ ಇನ್ನೂ ಅನೇಕ ಶಿಖರಗಳನ್ನು ಏರುವ ಉತ್ಸಾಹದಲ್ಲಿದ್ದಾಳೆ.

ಅಕ್ಟೋಬರ್ ನಲ್ಲಿ ವಿಶೇಷ ಸಂಚಿಕೆ ಹೊರಬರುತ್ತಿರುವುದರಿಂದ ಈ ಬಾರಿಯ ಯುಗಾದಿ ವಿಶೇಷ ಸಂಚಿಕೆಯನ್ನು ಹೊರತರುತ್ತಿಲ್ಲ. ಏಪ್ರಿಲ್ ತಿಂಗಳ ಸಂಚಿಕೆ ಎಂದಿನಂತೆ ಹೊರಬರುತ್ತಿದೆ.

**ಮತ್ತೊಮ್ಮೆ ಎಲ್ಲರಿಗೂ ಹಬ್ಬದ ಶುಭಾಶಯಗಳು.**

**ಅಪರಂಜಿ 2023 ವಿಶೇಷಾಂಕ**

– ನಮ್ಮ ಲೇಖಕರಿಗೆ ಮನವಿ

ಅಕ್ಟೋಬರ್ 2023 ಅಪರಂಜಿ ವಿಶೇಷಾಂಕ್ಕಾಗಿ ತಿಳಿಹಾಸ್ಯ/ಪ್ರಬಂಧ ಪ್ರಾಕಾರಗಳ ಲೇಖನಗಳನ್ನು ಕಳಿಸಿ. ನುಡಿ 01 ತತ್ರಾಂಶದಲ್ಲಿ ಟೈಪ್ ಮಾಡಿ ಮೈಲ್‌ಗೆ ಅಟ್ಯಾಚ್ ಮಾಡಿ ಕಳಿಸಿದ ಲೇಖನಗಳನ್ನು ಮಾತ್ರ ಪರಿಗಣಿಸಲಾಗುವುದು. ದಯಮಾಡಿ ಗಮನಿಸಿ – ಹಸ್ತಪ್ರತಿಗಳನ್ನು ಸ್ವೀಕರಿಸುವುದನ್ನು ನಿಲ್ಲಿಸಲಾಗಿದೆ. ನಿಮ್ಮ ಲೇಖನಗಳು ನಮಗೆ ಅಪರಂಜಿಯಲ್ಲಿರುವ ಮಿಂಚಂಚೆಗೆ ಆಗಸ್ಟ್ 30ರೊಳಗೆ ತಲುಪಬೇಕು.

# ದೃಷ್ಟಿದಾನ

✍ ಶಿವಕುಮಾರ್

ಇಂದು ಬೆಳಗ್ಗೆ ಎಂದಿನಂತೆ ವಾಟ್ಸಪ್ ತೆರೆದಾಗ ಈ ವಿಡಿಯೋ ಕ್ಲಿಪ್ ಕಣ್ಣಿಗೆ ಬಿತ್ತು. ನವನೀತ ಗಲಗಲಿ ಎಂಬ ತರುಣ ತಾತ್ಪರ್ಯ ಸಮೇತ ಹಾಡಿದ ಈ ತುಣುಕನ್ನು ಕೇಳಿದ ತಕ್ಷಣ ಇದನ್ನು ನಿಮ್ಮೊಂದಿಗೆ ಹಂಚಿಕೊಳ್ಳಲೇ ಬೇಕು ಅನ್ನಿಸಿದ್ದರಿಂದ ಇಲ್ಲಿ ಅದನ್ನು ನೀಡಿರುವೆ.

ಇದೊಂದು ಗೊರಖ್‌ನಾಥ ಪಂಥದ ಜಾನಪದ ಗೀತೆ. ನವನೀತನ ತಾತ ಮಾನ್ಯ ಪಂಡರಿನಾಥಾಚಾರ್ಯ ಗಲಗಲಿ ಅವರು ಇದನ್ನ ಕನ್ನಡದಲ್ಲಿ ರಚಿಸಿದ್ದಾರೆ. ಬೈರಾಗಿಯೊಬ್ಬ ಪ್ರತಿದಿನ ಶ್ರೀಮಂತರ ಮನೆಗಳಿಗೆ ಭಿಕ್ಷಾಟನೆಗೆ ಹೋಗುತ್ತಿದ್ದ. ಮನೆಯ ಮುಂದೆ ನಿಂತು " ಅಲಕ್ ನಿರಂಜನ್, ಅಲಕ್ ನಿರಂಜನ್ " ಎಂದು ಭಗವನ್ನಾಮವನ್ನು ತಾರಕ ಸ್ವರದಲ್ಲಿ ಉಚ್ಚರಿಸುತ್ತಿದ್ದಂತೆ ಮನೆಯವರು ಅವನಿಗೆ ಭಿಕ್ಷೆಯನ್ನು ತಂದು ಅವನ ಭಿಕ್ಷಾಪಾತ್ರೆಯನ್ನು ತುಂಬಿಸುವುದು ಅಲ್ಲಿನ ಪರಿಪಾಠ.

**ಅಲಕ್ ನಿರಂಜನ ಘಿಲ್ ಘಿಲ್ ಗುಂಜನ**
**ಭವಭಯ ಭಂಜನ ಬೈರಾಗಿ**
**ದಢದಢ ಬಂದನು ದ್ವಾರದಿ ನಿಂದನು**
**ಭಿಕ್ಷೆಯು ಎಂದನು ಆ ಜೋಗಿ**

ಎಂದಿನಂತೆ ಆ ದಿನವೂ ಅವನು ಬಾಗಿಲಿಗೆ ಬಂದು ಭಿಕ್ಷೆ ಬೇಡಿದನು. ಚಂದನ ಭಸ್ಮಗಳಿಂದ ಲೇಪಿತನಾಗಿದ್ದ ಆ ಸುಂದರ ಸನ್ಯಾಸಿ ಬಂದುದನ್ನು ಕಂಡು ಒಳಗಿದ್ದ ಮನೆಯೊಡತಿ ಸೇವಕಿಯ ಮೂಲಕ ಭಿಕ್ಷೆಯನ್ನು ಕಳಿಸಿ , ತೆರೆಯ ಮರೆಯಿಂದ ಅವನನ್ನು ನೋಡಿದಳು. ಭಿಕ್ಷೆ ಸ್ವೀಕರಿಸಲು ಆ ಸನ್ಯಾಸಿ ತಲೆಯೆತ್ತಿದಾಗ ಅವನ ಕಣ್ಣುಗಳ ಕಾಂತಿಯನ್ನು ಕಂಡು ಮನೆಯೊಡತಿ ಮರುಳಾದಳು.

**ಚಂದನ ಚರ್ಚಿತ ಭಸ್ಮೋದ್ವರ್ಚಿತ**
**ಬಂಧುರ ಸುಂದರ ಸನ್ಯಾಸಿ**
**ಎದೆ ಝಲ್ ಎಂದಿತು ಮೈ ಝುಮ್ ಎಂದಿತು**
**ಸಂಯಮ ಪಾಶವು ಸಡಿಲಿತ್ತು**

ಅವಳ ಶಾಂತ ಮನಕ್ಕೆ ಸಿಡಿಲೆರಗಿದಂತಾಯ್ತು .ಆಕೆಯ ಎದೆ ಝಲ್ ಎಂದು, ಮೈ ಝುಮ್ ಎಂದು ಕೆನ್ನೆಗಳು ಕಂಪೇರಿದವು. ಛೇ, ನಾನೇನು ಮಾಡುತ್ತಿದ್ದೇನೆ. ನನಗೇಕೆ ಹೀಗಾಗುತ್ತಿದೆ. ನಾಳೆ ಖಂಡಿತ ಅವನನ್ನು ನೋಡುವುದೇ ಇಲ್ಲ ಎಂದುಕೊಂಡಳು ಮನೆಯೊಡತಿ.

**ಕಂಗಳ ಮಂಗಳ ಕಾಂತಿಯ ಶಾಂತಿಯ**
**ಕಡಲಿನ ಒಡಲಲಿ ಸಿಡಿದಿತ್ತು.**
**ನಾಚಿಕೆ ನಲ್ಲೆಯ ಗಲ್ಲ ಗುಲಾಬಿಗೆ**
**ಮೆಲ್ಲನೆ ಗುಲ್ಲನು ಕೊಟ್ಟಿತ್ತು**
**ಅಲಕ್ ನಿರಂಜನ ಅಲಕ್ ನಿರಂಜನ**
**ಕಂಚಿನ ಕಂಠವು ಮೊಳಗಿತ್ತು**
**ಹೆಣ್ಣಿನ ಕಣ್ಣಿಗೆ ಹಬ್ಬವ ಹಬ್ಬಿಸಿ**
**ಮಿಂಚಿನ ಮೂರುತಿ ಬೆಳಗಿತ್ತು.**

ಮಾರನೆಯ ದಿನ  ಬೈರಾಗಿ ಮತ್ತೆ ಭಿಕ್ಷೆಗೆ ಬಂದು ಕಂಚಿನ ಕಂಠದಲ್ಲಿ ಅಲಖ್ ನಿರಂಜನ್ ಎಂದು ಕೂಗಿದಾಗ ಆಕೆಗೆ ತನ್ನ ಶಪಥ ಮರೆಯಿತು  ಮದನನ ಚಾಪದ ಟಂಕಾರದ  ಸೆಳೆತಕ್ಕೆ ಸಿಲುಕಿ ಯಾಂತ್ರಿಕವಾಗಿ ಆಕೆ ಸನ್ಯಾಸಿಯತ್ತ ತೆರಳಿದಳು.

**ಶಪಥವು ಮರೆಯಿತು ಕುಪಸವು ತೆರೆಯಿತು**
**ಕರೆಯಿತು ಕಿಂಕಿಣಿ ಝೇಂಕಾರ**
**ಕರಣವ ಎಳೆಯಿತು ಹರಣವ ಸೆಳೆಯಿತು**
**ಹೂಂಕರಿಸುವ ಸ್ಮರ ಟಂಕಾರ**

ಸನ್ಯಾಸಿಗೆ ಭಿಕ್ಷವನ್ನು ನೀಡಿದ ಬಳಿಕ ಸನ್ಯಾಸಿಯನ್ನು ಕುರಿತು, ' ನಿನ್ನ ಕಣ್ಣುಗಳಲ್ಲಿ ಅದೆಂತಹ ಕಾಂತಿ. ಸೂರ್ಯ, ಚಂದ್ರ ನೈದಿಲೆಗಳೂ ನಾಚುವಂತಿದೆ" ಎಂದು ಅಕ್ಕರೆಯಿಂದ ಉಲಿದಳು. ಸನ್ಯಾಸಿಯು ಮರು ಮಾತಿಲ್ಲದೆ ಅಲಕ್ ನಿರಂಜನ್ ಎನ್ನುತ್ತಾ ತನ್ನ ದಾರಿ ಹಿಡಿದ.

**ನಿಲ್ಲದ ಮೇಲುದ ಮೆಲ್ಲನೆ ತೀಡುತ**
**ಸರಿದಳು ಪ್ರಣಯದ ರಂಗೇರಿ**
**ನಿಲ್ಲೆಲೆ ಜೋಗಿಯೆ ನಿನ್ನಯ ಕಣ್ಣಲಿ**
**ಎಂತಹ ಕಾಂತಿಯು ಕುಣಿಯುತಿದೆ**
**ತೇಜಃ ಪುಂಜದ ಕಾಂತಿವಿಲಾಸಕೆ ರವಿ**
**ಶಶಿ ನೈದಿಲೆ ಮಣಿಯುತಿವೆ.**

ಮರುದಿನ ಸನ್ಯಾಸಿ ಬಂದಾಗ ಮನೆಯೊಡತಿ ಕಾತರದಿಂದ ಅವನ ಬಳಿ ಬಂದಳು. ಹಿಂದಿನ ದಿನ ತಾನು ಹೇಳಿದ ಮಾತುಗಳಿಗೆ ಸನ್ಯಾಸಿಯ ಪ್ರತಿಕ್ರಿಯೆಯನ್ನು ತಿಳಿಯುವ ಕುತೂಹಲ ಅವಳಿಗೆ

**ಅಲಕ್ ನಿರಂಜನ ಅಲಕ್  ನಿರಂಜನ**
**ಮರುದಿನ ಬಂದನು ಆ ಜೋಗಿ**
**ಉಕ್ಕಿನ ಬಾಗಿಲು ಗಕ್ಕನೆ ತೆರೆಯಿತು**
**ಮುಂತೆರೆ ಸರಿಯಿತು ಮರೆಯಲ್ಲಿ**

ಸನ್ಯಾಸಿಯು ಈ ಬಾರಿ ಭಿಕ್ಷೆ ಬೇಡಲಿಲ್ಲ. ತನ್ನ ಕೈಲಿದ್ದ ಭಿಕ್ಷಾಪಾತ್ರೆಯನ್ನು ಮನೆಯೊಡತಿಗೆ ನೀಡಿದ. ಅದರ ತಳದಲ್ಲಿ ಎರಡು ಹೊಳೆಯುವ ಕಣ್ಣುಗಳು.

**ತಾಯಿಯೆ ತೆಗೆದುಕೊ ಎನ್ನುತ ಜೋಗಿಯು**
**ನೀರೆಗೆ ಥಾಲಿಯ ಕೊಟ್ಟಿದ್ದ**
**ಥಾಲಿಯ ತಳದಲಿ ಥಳಥಳ  ಹೊಳೆಯುವ**
**ಕಣ್ಣುಗಳೆರಡನು ಇಟ್ಟಿದ್ದ.**

ಬೈರಾಗಿ ಆಕೆಯನ್ನು ತಾಯಿ ಎಂದು ಕರೆದು ಆಕೆಗೆ ತೀರ ಅನಿರೀಕ್ಷಿತವಾದ ಉಡುಗೊರೆಯೊಂದನ್ನು ಕೊಡುತ್ತಾನೆ.

**ತಾಯಿಯೆ ನಿನ್ನೆಯ ದಿನ ನೀನೆನ್ನಯ**
**ಕಣ್ಣಿನ ಬಣ್ಣನೆ ಮಾಡಿದ್ದಿ**
**ಗರತಿಯ ಗೋರಿಯ ಕಟ್ಟಿದ ತೊಗಲಿನ**
**ಆ  ಕಣ್  ಕಿತ್ತಿದೋ ತಂದಿಹೆನು**
**ಅಲಕ್ ನಿರಂಜನ ಅಲಕ್  ನಿರಂಜನ**

**ನಡೆದನು ನಿರ್ವ್ಯಥೆ ಆ ಜೋಗಿ**
**ತೊಗಲಿನ ಕಣ್ಬಲಿ ಯಿಂದಲಿ ಜ್ಞಾನದ**
**ಒಳಗಣ್ ತೆರೆಯಿಸಿ ಕುರುಡಾಗಿ**

ಇಂತಹ ಸೊಗಸಾದ ಅರ್ಥಗರ್ಭಿತವಾದ ಜಾನಪದ ಗೀತೆಯನ್ನು ಕನ್ನಡೀಕರಿಸಿರುವ ಮಾನ್ಯ ಪಂಡರಿನಾಥಾಚಾರ್ಯ ಗಲಗಲಿ ಅವರಿಗೆ ಸಾವಿರ ನಮನಗಳು.

■

**ಲಕ್ಷ್ಮಣ ಕೊರವಂಜಿ**

ನಲವತ್ತರ ದಶಕದಲ್ಲಿ ಯುವ ಕನ್ನಡಿಗ ಆರ್.ಕೆ. ಲಕ್ಷ್ಮಣ್ ಕೊರವಂಜಿಗಾಗಿ ರಚಿಸಿ ಕೊಟ್ಟ ವ್ಯಂಗ್ಯಚಿತ್ರಗಳು ಹಲವು.
ಅವುಗಳಲ್ಲಿ ಇದೂ ಒಂದು – ನಿಮಗಾಗಿ.



"ಪಕ್ಕದ ಮನೆಯವರನ್ನ ಬೈತೀರಲ್ಲಾ ; ನೋಡಿ, ಅವರೇ ಡಾಕ್ಟರ್ರಿಗೆ ಹೇಳಿ ಕಳಿಸಿದಾರಂತೆ, ಬೆಳಿಗ್ಗೆ. ರಾತ್ರಿಯೆಲ್ಲಾ ನಿಮಗೆ ಬಹಳ ಕೆಮ್ಮುಂತ, ಪಾಪ.

# ಲೇ ಆಫ್!

✍ ಸಿ.ಆರ್.ಸತ್ಯ

ಮೊನ್ನೆ ಬೆಳಿಗ್ಗೆ ಕಾಫಿ ಕುಡಿಯುತ್ತಾ ಪೇಪರ್‌ನಲ್ಲಿ ಅಮೇರಿಕಾದ, ನಮ್ಮ ದೇಶದ, ಇನ್ನೂ ಕೆಲವು ಕಂಪೆನಿಗಳು ಸಾವಿರಾರು ಜನರನ್ನು ಕೇವಲ ಒಂದು ಇ-ಮೇಲ್ ಮೂಲಕ ಕೆಲಸಗಳಿಂದ ಕಿತ್ತು ಒಗೆದವು ಎಂಬ ಸುದ್ದಿ ಓದಿ ಮನಸ್ಸಿಗೆ ಬೇಜಾರಾಯಿತು. ಬೇಜಾರನ್ನು ಹೋಗಿಸ್ಕೊಳ್ಳೋಕ್ಕೆ 'ಇನ್ನೊಂದು ಕಪ್ ಕಾಫಿ ಕೊಡುತ್ತೀಯಾ?' ಅಂತ ನನ್ನ ಹೆಂಡತಿನ ಕೇಳಿದೆ. ಅದಕ್ಕೆ ಅವಳು 'ಕಾಫಿ ಸಧ್ಯಕ್ಕೆ ಬೇಡ. ನಿಮ್ಮ ಇ-ಮೇಲ್ ಚೆಕ್ ಮಾಡಿ' ಅಂದಳು. ನನ್ನ ಮೇಲ್ ಓಪನ್ ಮಾಡಿದೆ. ಮೇಲ್ ಬಂದಿದ್ದು ನನ್ನ ಹೆಂಡತಿಯಿಂದಲೇ! 'ನಿಮ್ಮನ್ನು ಈ ಕ್ಷಣದಿಂದ ನಾನು ಲೇ ಆಫ್ ಮಾಡಿದೀನಿ.

ಸುಮ್ಮನೆ ಗಲಾಟೆ ಮಾಡದೆ ಇರಿ' ಅಂತ ಬರೆದಿದ್ದಳು. ಯಾವುದಾದರೂ ಗಂಡ ಅನ್ನಿಸಿಕೊಂಡವನಿಗೆ ಈ ತರಹ ಇ-ಮೇಲ್ ಬಂದರೆ, ಅದೂ ಹೆಂಡತಿ ಇಂದ, ಶಾಕ್ ಆಗದೇ ಇರುತ್ಯೆ?

"ಮಹಾರಾಯ್ತೀ, ನೀನು ನನ್ನ ಎಂಪ್ಲಾಯರ್ ಅಲ್ಲಾ ಕಣೇ. ರಿಟೈರ್ಡ್ ಆಗಿ ತೆಪ್ಪಗೆ  ಕೂತಿರೋ ನನ್ನನ್ನು ಲೇ ಆಫ್ ಮಾಡಿದ್ದೀಯ ಅಂದರೆ ಏನು ಅರ್ಥ?. ನನಗೇನಾದರೂ ಸಂಬಳ ಕೊಡ್ತಿದ್ಯಾ? ಅದೂ ಇಲ್ಲ!" ಅಂತ ಉದ್ಗರಿಸಿದೆ.

"ಸಂಬಳ ಅಂತಲೇ ಕೊಡದಿದ್ದರೆ ಏನಂತೆ? ನಿಮ್ಮ ಇಸ್ಪೀಟ್ ಆಟಕ್ಕೆ ತಿಂಗಳಿಗೆ ಐನೂರು ರೂಪಾಯಿ, ನಿಮ್ಮ ದರ್ಶಿನಿ ಕಾಫಿ ಖರ್ಚಿಗೆ ಅಂತ ತಿಂಗಳಿಗೆ ಐನೂರು ರೂಪಾಯಿ, ನಿಮ್ಮ ಚಪ್ಪಲಿ, ಕನ್ನಡಕ ರಿಪೇರಿಗೆ ಅಂತ ತಿಂಗಳಿಗೆ ಇನ್ನೂರು

ರೂಪಾಯಿ, ಅದೆಲ್ಲೆಲ್ಲೋ ಅಲೆಯೋಕ್ಕೆ ಅಂತ ಆಟೋ ಚಾರ್ಜ್ ಅಂತ ಕೊಡ್ತೀನಲ್ಲ ಇನ್ನೂರು ರೂಪಾಯಿ, ಎರಡು ತಿಂಗಳಿಗೆ ಒಂದು ಸಲ ನಿಮ್ಮ ಹೇರ್ ಕಟ್‌ಗೆ ಅಂತ ಇನ್ನೂರು ರೂಪಾಯಿ-ಇವೆಲ್ಲಾ ಸಂಬಳಕ್ಕೆ ಸಮಾನವೇ ಇನ್ನು ಮೇಲೆ ಇದೆಲ್ಲ ನಿಮಗೆ ರದ್ದು. ಇದೂ ಒಂದು ರೀತಿ 'ಲೇundefined ಆಫ್' ಅಂತಾನೆ ಅಂದುಕೊಳ್ಳಿ" ಅಂತ ಅಂದಳು.

"ನನಗೆ ಅರ್ಥ ಆಗ್ತಿಲ್ಲ" ಅಂದೆ. "ಇದರಲ್ಲಿ ಅರ್ಥ ಆಗೋದು ಏನಿದೆ? ಮನೆ ಖರ್ಚು ಜಾಸ್ತಿ ಆಗ್ತಿದೆ. ನೀರು, ಗ್ಯಾಸ್, ಕರೆಂಟ್ ಚಾರ್ಜ್‌ಗಳು, ಕಾಫಿ ಪುಡಿ, ಹಾಲೂ-ಇವೆಲ್ಲ ಆಕಾಶಕ್ಕೆ ಏರಿವೆ. ನೀವು ಕಾಫಿ ಕೊಡೇ, ಕಾಫಿ ಕೊಡೇ ಅಂತ ದಿನಕ್ಕೆ ಹತ್ತು ಸಲ ಕೇಳುತ್ತಿದ್ದರೆ, ದುಡ್ಡು ಹೇಗೆ ಕರಗಿ ಹೋಗ್ತಿದೆ ಅಂತ ನಿಮಗೇನಾದರೂ ಐಡಿಯಾ ಇದ್ಯೆ?" ಅಂತ ಕೇಳಿದಳು.

"ಇಲ್ಲ" ಅಂದೆ." ಅದಕ್ಕೆ ನಿಮ್ಮನ್ನ ಲೇಆಫ್ ಮಾಡಿ ದುಡ್ಡು ಉಳಿಸೋಣ ಅಂತ ನಾನು ನಿಮಗೆ ಇ-ಮೇಲ್ ಕಳಿಸಿದ್ದು"ಅಂತ ಅಂದಳು.

ನನಗೆ ತಡೆದುಕೊಳ್ಳೋಕ್ಕೆ ಆಗಲಿಲ್ಲ. ಯಾವನಾದರೂ ಇಸ್ಪೀಟು, ದರ್ಶಿನಿ ಕಾಫೀ ಇಲ್ಲದೇ, ಹರಿದು ಹೋಗಿರೋ ಚಪ್ಪಲಿ ಹಾಕಿಕೊಂಡು ಜೀವನ ನಡೆಸೋದನ್ನು ನೋಡಿದ್ದೀರಾ?. ಹೊಟ್ಟೆಗಿಲ್ಲದಿದ್ದರೂ ಹೇರ್ ಕಟ್ ಇಲ್ಲದಿದ್ದರೆ ಏನು ಗತಿ ? ನಾವು ಬೇಡಾ ಅಂದರೂ ತಲೆ ಕೂದಲು, ಗಡ್ಡ, ಮೀಸೆ ಬೆಳೆಯೋದೇ ಇಲ್ಲವೆ? "ಇದು

ಬಹಳ ಅನ್ಯಾಯ ಕಣೆ" ಅಂತ ಅಂದೆ.

" ಅನ್ಯಾಯ ಏನು ಬಂತು ರೀ? ಸಾವಿರಾರು ಜನ ಅಮೇರಿಕಾದಲ್ಲಿ ಸಂಬಳ ಇಲ್ಲದೆ, ಕಾರ್ ಲೋನ್, ಮನೆ ಲೋನ್, ಸಂಸಾರದ ಖರ್ಚು ತೂಗಿಸೋಕ್ಕೆ ಆಗದೆ ಪರದಾಟ್ತಿಲ್ಲವೆ? ಮನೇಲೆ ಕೂತುಕೊಂಡು ಪೇಪರ್ ಓದ್ಕೊಂಡು ತೆಪ್ಪಗೆ ಇರೋದಕ್ಕೆ ನಿಮಗೇನು ಕಷ್ಟ ಅಂತೀನಿ?" ಅಂತ ಸವಾಲೆಸೆದಳು.

"ಹಾಗಲ್ಲಮ್ಮ, ಬೆಳಗಿನಿಂದ ರಾತ್ರಿ ತನಕ ಬರೀ ಪೇಪರ್ ಓದಿಕೊಂಡು ಇರೋಕ್ಕೆ ಆಗುತ್ಯೆ?" ಅಂತ ಕೇಳಿದೆ."ಆಗದೇ ಏನು.

ನಮ್ಮ ಮನೆ ಪೇಪರ್ ಓದಿ ಮುಗಿಸಿದ ಮೇಲೆ, ಪಕ್ಕದ ಮನೆಯಿಂದ 'ಹಿಂದೂ' ಪೇಪರ್ ಎರವಲು ಪಡೆದುಕೊಂಡು ಬನ್ನಿ.

ಅದನ್ನು ಒಂದು ದಿನ ಪೂರ್ತಿ ಓದುತ್ತಾನೇ ಇರಬಹುದು" ಅಂತ ಸಲಹೆ ಕೊಟ್ಟಳು. "ಅಮೇರಿಕಾದಲ್ಲಿ ಲೇ ಆಫ್ ಮಾಡಿದ ಮೇಲೂ, ಕೆಲವು ಸಿ.ಇ.ಓಗಳು ಕೆಲಸದಿಂದ ಕಿತ್ತು ಹಾಕಿದ್ರೂ, ಮೂರು ತಿಂಗಳು ಸಂಬಳ, ಮೆಡಿಕಲ್ ಇನ್ ಶ್ಯೂರೆನ್ಸ್ ಅಂತ ಕೊಟ್ಟಿದಾರೆ, ಗೊತ್ತಾ?" ಅಂತ ನಾನೂ ಸವಾಲೆಸೆದೆ.

"ಗೊತ್ತು, ಗೊತ್ತು. ಮೂರು ತಿಂಗಳು ಸಂಬಳ ಕೊಡೋದಕ್ಕೆ ನಾನೇನು ಮೆಟಾ, ಅಮೆಜಾನ್ ಕಂಪೆನಿಗಳ ಸಿ.ಇ.ಓ ಅಲ್ಲ. ಹೋಗಲಿ, ನಿಮಗೆ ಮೆಡಿಕಲ್ ಇನ್ ಶ್ಯೂರೆನ್ಸ್ ಕೊಡ್ತೀನಿ. ನೆಗಡಿ, ಕೆಮ್ಮು ಆದರೆ ನನಗೆ ಬಿಲ್ಲುಗಳನ್ನು ಪಾವತಿ ಮಾಡಿ. ಅವಕ್ಕೆ ಆದ ಖರ್ಚಿಗೆ ದುಡ್ಡು ಕೊಡ್ತೀನಿ-ಬಿಲ್ ತೋರಿಸಿದ್ರೆ" ಅಂತ ಕಂಡಿಶನ್ ಹಾಕಿದ್ಳು. ಒಂದು ಕ್ಷಣದಲ್ಲಿ ಜೀವನ ಹೇಗೆ ಉಲ್ಟಾ ಹೊಡೆಯುತ್ತೆ ನೋಡಿ. ಆದರೂ ಹೇಗೋ ಪರಿಹಾರ ಹುಡುಕಿಕೊಂಡೆ. ನನ್ನ ಆಪ್ತ ಸ್ನೇಹಿತ ನಮ್ಮ ಬಡಾವಣೆಯಲ್ಲಿ ಮೆಡಿಕಲ್ ಶಾಪ್ ಇಟ್ಟಿದ್ದಾನೆ.

ಅವನ ಹತ್ತಿರ ಹೋಗಿ ಆವಾಗಾವಾಗ ನಕಲಿ ಬಿಲ್‌ಗಳನ್ನು ತೊಗೋತೀನಿ. ಒಂದು ಸಲ ಕೆಮ್ಮಿನ ಔಷಧಿ ಅಂತ ನೂರೈವತ್ತು ರೂಪಾಯಿ ಬರೀತಾನೆ. ಇನ್ನೊಂದು ಸಲ ನನಗೆ ಅಲರ್ಜಿ ಅಂತ ಇನ್ನೂರು ರೂಪಾಯಿಗೆ ಬರೀತಾನೆ. ಒಂದೊಂದು ಸಲ ಮಂಡಿ ನೋವಿಗೆ ಅಂತ ನೂರು ರೂಪಾಯಿಗೆ ಬಿಲ್ ಕೊಡ್ತಾನೆ. ಇವೆಲ್ಲಾ ನನ್ನ ಹೆಂಡತಿಗೆ ಸಬ್ಮಿಟ್ ಮಾಡಿದ ಮೇಲೆ ಅವಳು ಅವನ್ನೆಲ್ಲಾ ಚೆಕ್ ಮಾಡ್ತಾಳೆ. ನಾನೂನು ಮಂಡಿ ನೋವು, ನೆಗಡಿ, ಕೆಮ್ಮು ಅಂತ ನಾಟಕ ಆಡ್ತೀನಿ. ಇದುವರೆಗೂ ಏನೋ ಪಾಪ, ವಯಸ್ಸಾದ ಗಂಡ, ಇಂತಹ ಖಾಯಿಲೆಗಳು ಇದ್ದೇ ಇರುತ್ವೆ ಅಂತ ದುಡ್ಡು ಕೊಡ್ತಿದಾಳೆ. ಎಷ್ಟು ದಿನಗಳು ಇಂತಹ ಜೀವನ ಸಾಗಿಸಬೇಕೋ ಗೊತ್ತಿಲ್ಲ, ನೆನ್ನೆಯ ದಿನ ನನ್ನ ಪಕ್ಕದ ಮನೆಯ ಸ್ನೇಹಿತ ಶಂಕರ್ ರಾವ್ನಿಂದ ಫೋನ್ ಬಂತು. " ಏನು ರಾವ್, ಏನು ಸಮಾಚಾರ?" ಅಂತ ಕೇಳಿದೆ. ರಾವ್ ಅವರು ಗದ್ಗದ ಕಂಠದಿಂದ" ನನ್ನ ಹೆಂಡತಿ ಇವತ್ತು ಬೆಳಗ್ಗೆಯಿಂದಲೇ ನನ್ನನ್ನು 'ಲೇ ಆಫ್' ಮಾಡಿದೀನಿ ಅಂತ ಹೇಳಿದಳು. ಅದೇನು ಅಂತ ನನಗೆ ಅರ್ಥಾನೇ ಆಗ್ತಿಲ್ಲ" ಅಂತ ಹೇಳಿದರು. "ಅದೇನು ಅಂತ ನನಗೆ ಗೊತ್ತು. ತಿಳಿಸ್ತೀನಿ. ಬನ್ನಿ ಪಾರ್ಕ್‌ಗೆ ಹೋಗೋಣ. ಅಲ್ಲಿ ಮಾತಾಡೋಣ" ಅಂದೆ.

ನಮ್ಮ ಮನೆಯ ಪಕ್ಕದಲ್ಲಿರೋ ಪಾರ್ಕ್‌ಗೆ ಹೋದ್ವಿ. ಅಲ್ಲಿ ನಮ್ಮ ತರಹಾನೇ ಪೆಚ್ಚಾಗಿ ನನ್ನ ವಾಕಿಂಗ್ ಸ್ನೇಹಿತರೂ ಇದ್ದರು.

"ಏನು ಸಮಾಚಾರ?" ಅಂತ ಕೇಳಿದೆ. ಅವರೂನೂ 'ಲೇ ಆಫ್" ಅಂತ ಅನ್ನಬೇಕೆ? " ನಾವೆಲ್ಲಾ ಸೇರಿಕೊಂಡು ಲೇ ಆಫ್ ಸಂತ್ರಸ್ತರ ಒಕ್ಕೂಟ ಅಂತ ಒಂದು ಸಂಘಟನೆ ಶುರು ಮಾಡ್ತಾ ಇದೀವಿ. ನೀವೂ ಸೇರ್ಕೋತೀರಾ?" ಅಂತ ಒಬ್ಬ ಪೆಚ್ಚು ಮುಖದವರು ಕೇಳಿದರು.

ನಾನು ಹುಷಾರಾದೆ." ಮೆಂಬರ್ ಶಿಪ್ ಅಂತ ಏನೂ ದುಡ್ಡು ಕೋಡೋದಿಲ್ಲ ತಾನೆ?" ಅಂತ ಕೇಳಿದೆ.

"ಅಯ್ಯೋ, ಅದಕ್ಕೆಲ್ಲ ನಾವೆಲ್ಲಿಂದ ದುಡ್ಡು ತರೋಕ್ಕೆ ಅಗುತ್ತೆ ಸ್ವಾಮಿ..? ನಮ್ಮ ಸಿ.ಇ.ಓಗಳು ಒಪ್ಪಬೇಕಲ್ಲಾ? ಬನ್ನಿ, ಬನ್ನಿ, ಸೇರ್ಕೊಳ್ಳಿ" ಅಂತ ಅಂದರು. ಇತ್ತೀಚೆಗೆ ನಾನು ನಮ್ಮ ಮನೆ ಪೇಪರ್ ಮತ್ತು ಪಕ್ಕದ ಮನೆ ಹಿಂದೂ ಪೇಪರ್ ಓದಿ ಮುಗಿಸಿದ ಮೇಲೆ ಪಾರ್ಕ್‌ಗೆ ಹೋಗಿ ಇವರುಗಳ ಜೊತೆ ಕೂತಿರ್ತೀನಿ. ಇನ್ನೇನು ಮಾಡಲಿ?

■



**ಚುನಾವಣೆ ಚಿಂತೆಯಲ್ಲಿ ಸ್ವಲ್ಪ ಬುದ್ಧಿ ಭ್ರಮಣೆ ಆಗಿದೆ! ಚುನಾವಣೆ ಮುಗಿದ. ಕೂಡಲೇ ಸರಿ ಹೋಗುತ್ತಾರೆ....!!?**

# ನಮ್ಮುಡ್ಗ ಮೆಡಿಕಲ್ ಮಾಡ್ಸವ್ನೆ

✍ ಇ.ಆರ್. ರಾಮಚಂದ್ರನ್

'ಐ... ನೀನ್ ಮಗ್ನ ಮನೆಗೆ ಬೆಂಗ್ಳೂರ್ಗೆ ಓಗಿದ್ಯಲ್ಲ.. ಸೋಫ್ಟ್ ವೇರ್ ಫೋರೆನ್ ನಿಂದ ಬಂದನ್ನಲ್ಲ ನಿನ್ನುಡ್ಗ.. ಹ್ಯಾಗಿತ್ತು ಹೇಳಪಾ..'

'ನಿನ್ಗೆ ಯಾವಾಗ್ನೋಡು ಆತ್ರ...ವಸೀ ತಡ್ಕೋ.... ನಾನು ಇಲ್ನಿಂದ ಬೆಳಿಗ್ಗೆ ಬಸ್ನಲ್ ವೊಂಟ್ನಾ.. ಕೆಂಪು ಬಸ್ನಮೇಲೆ ಟಾಪ್ನಲ್ಲಿ ಕುಂತಿದ್ದೆ..'

'ನಿನ್ನ ಮಗ ಸೋಫ್ಟ್ವೇರ್ ಅಂತವ್ರೇ.. ನೀನ್ ಟಾಪ್ನಲ್ ಕುಂತ್ಕೋಡು ಓದ್ಯ.. ಮಗಾ ಫೊರೆನ್ ನಿಂದ ಬಂದವ್ನೆ.. ನೀನ್ ಆಫ್ ಟಿಕಟ್ ಮಾಡಿ ಟಾಪ್ನಲ್ ಕುಂತ್ಯ?'

'ಅವ್ನ ಕಥೆ ಬೇರೆ, ನಮ್ ಕಥೆನೇ ಬೇರೆ ಕಂಡ್ಲಾ..'

'ಸರಿಬಿಡು ನಿನ್ ಕಥೆ.. ಬೆಂಗ್ಳೂರ್ನಾಗೆ ಏನ್ ಮಾಡ್ದೆ..ಅದ್ ಏಳು..'

'ನಮ್ ಉಡ್ಗ ಕಲಾಸ್ಪಾಳ್ಯ  ಬಸ್ ಸ್ಟ್ಯಾಂಡ್‌ಗೆ ಬಂದಿದ್ದ.....ಕೈ ಬೀಸಿ ಕರ್ದ... ಅವ್ನ ನೋಡ್ತಾ ಏಣೀಲಿ  ಇಳೀಲಿಕ್ಕೆ ಒಂಟೆ.. ಕಾಲ್ ಎಲ್ಲೋ ಇಟ್ಬಿಟ್ಟು ತಿರುಕ್ಕೊಂಡ್ತು..'

'ಅಯೋ ಅಪಾ..'

'ಉಡ್ಗ ಓಡ್ಬಂದ್ ಇಡ್ಕೊಂಡ.. ಇಲ್ಲದಿದ್ರೆ ತಲೆ ಒಡ್ಕೊಳ್ತಿದ್ದೆ..ಉಡ್ಗ ಕೆಂಪ್ಗಾಗವ್ನೆ.. ಫೊರೆನ್ ಗಾಳಿ... ಅಮ್ಮ ಎಲ್ಲಿ ಅಂದ'?

'ಕರ್ಕೊಂಡೋಗ್ಲಿಲ್ವಾ?'

'ಇಲ್ಲಿ ಅಸ್ಗಳ್ನಾ ಯಾರ್ ನೋಡ್ಕೋಳ್ಳೋವ್ರು..ಅವಕ್ಕೆ ಎಸರು ತಿನ್ಸ್‌ಬೇಕಲ್ವಾ? ಅವ್ಳಿದ್ದರೆ ಟಾಪ್ನಲ್ಲಿ ಓಗ್ತಿದ್ನಾ?'

'ಅದ್ಸರಿ ..'

'ಬಸ್ ಉದ್ದ ಐತೆ ಅವ್ನ ಕಾರು.. ಭರ್ ಅಂತ ಡ್ರೈವರ್ ಓಡಿಸ್ದ.. ಮೆತ್ಗೆ ಓಡ್ಸೋ.. ಕಾರ್ ಬೇಗ ಸವೀತದೆ ಅಂದೆ.. ಉಡ್ಗ ಏನು ಆಗಲ್ಲ ಎಲೆಕ್ಟ್ರಿಕ್ನಾಗೆ ಓಡ್ತದೆ ಸೈ ಅಂದ.. ನಂಗ್ ಯಾಕೊ ಸರಿ ಬೀಳ್ಲಿಲ್ಲ..ಮನ್ಯಾಗೆ ಕುಂತ್ರೆ ನಿಂತ್ರೆ ಆಳ್ಗೋಳು.. ಕಸ ಮುಸ್ರೆಗೆ ಒಬ್ಳು, ಅಡ್ಗೆಗೆ ಒಬ್ಳು, ಡ್ರೈವರ್ ಒಬ್ಬ... 30 ನೇ ಮಳಿಗೇಲಿ ಇದಾನೆ..ಮಗ'

'ಫೋರೆನ್ ಬಂದವ್ನ್ ಅಲ್ವಾ....ನಾಷ್ಟ ಮಾಡ್ದ್ಯಾ? ಅಡ್ಗೇವ್ಳು ಏನ್ ಕೊಟ್ಲು?'

'ಐ... ಮಾವಿನ ಅಣ್ಣುಜ್ಯೂಸು, ಆಲ್ನಲ್ಲಿ ಆಕಿದ್ ಬಣ್ಬಣ್ದ್ ಗೋಧಿ ಪೀಸಗೊಳು..ಸೆರಲ್ ಏನೋ ಅಂದ. ಅದ್ನ ಚಮಚ್ದಲ್ಲಿ ತಿಂದೊ..ನನ್ಗೆ ಇಡಸ್ಲಿಲ್ಲ.. ನಮ್ ಜ್ವಾಳದ್ ರೊಟ್ಟಿ ಚಂದ..'

'ಅವನು ವಿಲಾಯ್ತೀಲಿ ಕಲಿತ್ ಬಂದವನೆ..ಅವ್ನು ಮುದ್ದೆ ಗಿದ್ದೆ ತಿನ್ತಾನಾ?'

'ತಿನ್ತಾನೆ.. ಚಮ್ಚ ಕತ್ತಿ ಇಟ್ಕೊಂಡೇ ಅವ್ನ್ ಊಟ... ನನ್ಗೆ ಕಾಲ್ ಬಾತ್ಕೊಂಡು ಬೊಬ್ಬೆ ಒಡಿಯೋಹಂಗಿತ್ತು ಉಣ್ಣಕ್ಕ ಆಗ್ಲಿಲ್ಲ.'

'ಅದ್ಕೇನ್ ಮಾಡ್ದಿ?'

'ಉಣ್ಣಿದ್ ಮ್ಯಾಲೆ ಅವ್ನು ಆಫಿಸ್ಗೆ ಓದ. ನಿನ್ನ ಡಾಕ್ಟರ್ ಅತ್ರ ಕರ್ಕೊಂಡ್ ಓಗೋಕೆ ಒಬ್ಬ ಉಡುಗನ್ನ ಕಳಿಸಸ್ತೀನಿ ರೆಡಿಯಾಗು ಎಂದೇಳಿ ಓದ'.

'ಒಳ್ಳೆದ್ ಮಾಡ್ದ..ನಿನ್ ಆರೋಗ್ಯ ನೋಡ್ಕೊಳ್ತಾನೆ ಬಿಡು'.

'ಅಸಿಸ್ಟೆನ್ಟು ಉಡ್ಗ ಕಾರ್ನಾಗ ಬಂದು ದೊಡ್ಡ ಆಸ್ಪತ್ರೆಗೆ ಕರ್ಕೊಂಡು ಓದ. ಅಲ್ಲಿ ಕೂಡ್ಸಿ ನನ್ನೆಸ್ರು, ನಮ್ಮಪ್ಪನ ಎಸ್ರು, ಇಳಾಸ, ನನ್ನ ವಯ್ಸು ಎಲ್ಲಾ ಕಂಪೂಟರನಲ್ಲಿ ಉಡ್ಗ ಬರೆಸ್ದ. ನಂಗೆ ಏನೂ ಅಚ್ಲಿಲ್ಲ..ನೋವಿಂದ ನಾನು ಬಡ್ಕೋತಿದ್ದೆ.. ಆದಾರ್ ಕಾರ್ಡ ಕೇಳ್ದರು.'

'ಅದಯಾಕ್ ಆಣ್ಣ'.

'ಆದ್ ಇಲ್ದೆ ಕಂಪೂಟರ್ ಕೆಲ್ಸ ಮಾಡಲ್ವಂತೆ'.

'ಸರಿ ಬಿಡು'.

''ಕೈಗೆ ಸೂಜಿ ಒಡ್ದು ರಕ್ತ ಎಳಕೊಂಡ.. ಉಚ್ಚೆ ಕೊಡು ಅಂತ ನರ್ಸಕೇಳಿ ಒಂದು ಸಣ್ ಕುಡ್ಕೆ ಸೈಜ್ ಪಾತ್ರೆಕೊಟ್ಲು.. ನಾಚ್ಕೆ ಆಯ್ತು..'

'ಛೀ'

'ರಕ್ತ ಮಡ್ಕೆ ಕೊಟ್ ಮ್ಯಾಲೆ ಬ್ಯಾರೆ ರೂಮಗೆ ಓಗಿ ಒಂದ್ ಮಶೀನ್ ಮ್ಯಾಗೆ ಮಲಗ್ಸಿ ಅದ್ನ ಒಳಗ್ ಕಳಿಸಿದ್ದರು..ನಾನೂ ಒಳಕ್ಕೆ ಓದೆ.'

'ಮಶೀನ್ ಒಳ್ಕಾ'?

'ಔದು ಕಣ್ಲ... ಅಲ್ಲಿ ತಲೆ, ಮುಂದೆ, ಹಿಂದೆ, ಅಕ್ಕ, ಪಕ್ಕೆ ಎಲ್ಲಾ ಕಡೆ ನನ್ನ ತಿರಿಗಿಸಿದ್ರು...ಮಶೀನು ಫೋಟೊ ಇಡಿಯುತ್ತೆ ಅಂದ್ರು. ನಾನು ತಲೇನೂ ಸರಿಯಾಗ್ ಬಾಚಿರ್ಲಿಲ್ಲ..ಗಡ್ಡ ಮಾಡಿರ್ಲಿಲ್ಲ.. ಅಲ್ಲೇ ಮಾಡ್ಕೊಂಡ್ ಬರ್ತಿನಿ ಅಂದೆ..ಸುಮ್ನೆ ಮಲ್ಕೊ ಅಂದ್ರು'.

'ಕಾಲ್ಗೆ ಏನ್ ಹಚ್ಚಿದ್ರು'?

'ಮಶಿನ್ ನಿಂದ ಫೋಟೋ ನೋಡ್ಬಿಟ್ಟು ಆದಮೇಲೆ ಅಂದ್ರು'.

'ಅಯ್ಯೊ!'

'ಸಾಯಂಕಾಲ ನಮ್ ಉಡ್ಗ ದೊಡ್ಡ ಪ್ಲಾಸ್ಟಿಕ್ ಚೀಲ ಇಡ್ಕೊಂಡ್ ಬಂದ. ನನ್ಗೆ ನನ್ನ ಎಂಡ್ತಿಗೆ ಜಿಪ್ಪಿ ತಂದ ಅಂತ ಬ್ಯಾಗನೇ ನೋಡ್ತಿದ್ದೆ. ಇದು ನಿನ್ದೇ ಅಂತ ಕೈ ಗೆ ಕೊಟ್ಟ.'

'ಏನು ತಂದಿದ್ದ?'

'ಅದು ನನ್ನ ರಿಪೋರ್ಟ ಕಂಡ್ಲಾ.. ಪುಸ್ತಕದ್ ಜೊತೆಗೆ ನನ್ನ ತಲೆ, ಕೈ ಕಾಲು, ಸೊಂಟದ್ ಚಿತ್ರಗಳು..ನಾಳೆ ಮತ್ತೆ ಕರೆದವ್ರೆ ಎಂದ. ಬೆಳಿಗ್ಗೆ ತಿಂಡಿ ತಿನ್ನದೆ ಓಗ್ಬೇಕೂ ಅಂದ'.

ಅಯ್ಯೋ ಶಿವನೆ'!

'ಪಾಯ್ಖಾನೆ ಸ್ಯಾಂಪಲ್ ಕುಡ್ಕೇಲಿ ತೊಗೊಂಡು ಓಗ್ಬೇಕೂ' ನಂಗೆ ತಲೆ ತಿರ್‍ಗಿ ಬಿದ್ನಾ ಆಂತ ಚೆಕ್ ಮಾಡತ್ವೆ ಅದ್ಕೆ ಈ ಟೆಸ್ಟ್ ಮಾಡ್ಬೇಕೂ ಅಂದ ಮಗ'.

'ರಾತ್ರಿ ಏನ್ ತಿಂದೆ?'

'ಕೋಳಿ ಸಾರ್ ಮಾಡ್ಸಿದ್ದ. ಅದನ್ ದೊಡ್ ಪಾತ್ರೇಲಿ ಹಾಕ್ಕೊಂಡ್ ಚಮ್ಚಹಾಕಿ ಇಷ್ಟಿಷ್ಟೆ ಕುಡ್ದ್ವಿ. ಮುದ್ದೆನ ಚಮ್ಚ, ಕತ್ತಿಲಿ ತಿಂದ್ವಿ. ರಾತ್ರಿ 'ನಾನು ಊರ್ಗೆ ಓಗ್ತಿನಿ ಅಂದೆ' ಆಗ್ಲಿ ಬೆಳಿಗ್ಗೆ ನೋಡುವಾ ಅಂದ.'

'ಬೆಳಗ್ಗೆ ರಕ್ತ, ಪಾಯ್ಖಾನೆ ಕೊಟ್ಬಿಟ್ಟು ನಾನೂ ಅಸಿಸ್ಟೆನ್ಟು ಓಟಲ್ಗೆ ಓಗಿ ಇಡ್ಲಿ ತಿಂದೊ ಮತ್ತೆ ರಕ್ತ ಕಿತ್ಕೊಂಡ್ರು.. ಆಮೇಲೆ  ಬಾಯಿಂದ ಒಳಗಡೆ ಪೈಪು ಹಾಕಿ ಒಂದೆರೆಡು ಆಳು ಉದ್ದ ಪೈಪನ್ನು ಬಿಟ್ಟು ಅಲ್ಲಿ ದೀಪ ಹಾಕಿ ಏನಾಗಿದೆ ನೋಡ್ತಿವಿ ಅಂದ್ರು. ಆದು ಆಕ್ದೇನೆ ನಾನ್ ಏಳ್ತಿನಿ ನಂಗೆ ಏನು ಆಗಿಲ್ಲ ಆಂದೆ.'

'ಸರಿ ಬಿಡು.'

'ನನ್ನ ಇಬ್ರು ಇಟ್ಕೊಂಡು ಪೈಪು ಒಳ್ಗೆ ತುರ್ಕಿದ್ರು.. ಆದನ್ನ ಫೊಟೊ ಟವಿಲಿ ಹಿಡಿದ್ರು..ಎಲ್ಲಾದಕ್ಕೂ ಫೋಟೊ ಹೊಡಿತಾರೆ..'

'ಎಟು ಹೊತ್ತು ಅಲ್ಲಿದ್ದೆ'.

'ಪೊತ್ತಾರೆ ಓದವ್ನು ಮದ್ಯಾನ ಬಂದು ಊಟ  ಮಾಡ್ದೆ. ಬಿರಿಯಾನಿ ಮಾಡ್ಸಿದ್ದ. ಅದು ಮಿಕ್ಕಿದ್ದು ಕೋಳಿಸಾರು ತಿಂದೆ'.

'ಕಾಲು ನೋವು ಏನಾಯ್ತು'.

'ಅದು ಹಾಗೇ ಇತ್ತು... ಸಂಜೆ ಮಗ ಇನ್ನೊಂದು ಫೈಲು ಹಿಡ್ಕೊಂಡು ಬಂದ.. ಬೆಳಿಗ್ಗೆದ ಟೆಸ್ಟ್ ರಿಸಲ್ಟು ಅಂದ. ನಿಂಗೇ ಏನೂ ಆಗಿಲ್ಲ ಅಂದ. ನಂಗೆ ಗೊತ್ತು ನಾನು ಅದನ್ನೇ ಅವರ್ಗೆ ಏಳ್ದೆ. ನನ್ ಮಾತು ಕೇಳ್ದೆ ಒಳಗೆ ಪೈಪು ತಳ್ಳಿದ್ರು ಅಂದೆ'.

'ಸರಿ ಬಿಡು'.

'ನಾನು ಏಳ್ದೆ. ಬೆಳಿಗೆ ಕಾಫಿ ಕುಡಕೊಂಡು  ನಾನು ಊರ್ಕಡೆ ವಾಪಸ್ಸು ಹೊಂಟೆ. ನಿನ್ನಮ್ಮ, ಅಸ್ಗೊಳು ಏನಾಗಿದ್ಯೋ ಯೋಚನೆ ನಂಗೆ.'

'ಮತ್ತೆ ಅವ್ವನ್ನೂ ಕರ್ಕೊಂಡ್ ಬಾ. ಸರಿಯಾಗಿ ಫುಲ್-ಬಾಡಿ ಟೆಸ್ಟ್ ಮಾಡಿಸ್ತೀನಿ ಅಂದ.'

'ಟೆಸ್ಟ್ ಫೈಲ್ ಹೊತ್ಕೊಂಡ್ ಆಗ್ಲಪ್ಪಾ ಅಂತ ಹೊರ್ಟೆ'.

'ಕಾಲು ನೋವು ಈಗ  ಯಾಗೈತೆ?'

'ನಿನ್ನೆ ರಾತ್ರಿ ಹುಣ್ಸೇ ಹಣ್ ಕುದಿಸ್ಬಿಟ್ಟು ಕಾಲಿಗೆ ಹಾಕಿ ಬಿಗಿದ್ ಕಟ್ಟಿದ್ಲು.  ಊತ ಕಡಿಮೆ ಆಗೈತೆ.  ನಡೆಯೋಕ್ಕೆ ಆಗುತ್ತೆ. ಈವತ್ತು ರಾತ್ರಿ ಆಕಿದ್ರೆ ನಾಳೆ ಸರಿಯಾಗ್ತೈತೆ. ನಾಳೆ ಗದ್ದೆ ಕಡೆ ಕೆಲ್ಸಕ್ ಓಗ್ಬೇಕು.. ಅಸುಗಳಗೂ ನೋಡ್ಬೇಕು. ನಾಲ್ಕು ದಿವ್ಸ ಆಯ್ತು.'

'ಆ ಡಾಕ್ಟರ‍್ಗಳು ಕೊಟ್ಟ ರಿಪೋರ್ಟ ಏನ್ ಮಾಡ್ತಿ?'

'ತಂದೀವ್ನಿ. ಛಳಿಗಾಲಕ್ಕೆ ಬರುತ್ತೆ. ದಿನಾ ಒಂದಿಷ್ಟು ಹರ್ದು ಒಲೆಗಾಕ್ತಿನಿ'.

■

# ನಾನಂತು ಕಾರ್ಣ ಅಲ್ಲಪ್ಪ

✍ ಮಂಗಳ ಎಂ ನಾಡಿಗ್

ಜೀರಾ ಪೌಡರ್ ಹೊಸ ಪ್ಯಾಕ್ ಓಪನ್ ಮಾಡಿ ಬೇಕಾದಷ್ಟು ಬಳಸಿ ನಂತರ ಚೆನ್ನಾಗಿ ಮಡಿಸಿ, ಗಾಳಿ ಹೋಗದಂತೆ ಫ್ರಿಡ್ಜ್‌ನಲ್ಲಿ ಇಟ್ಟಿದ್ದೆ. ದಿನಕ್ ಒಂದ್ಹತ್ ಸಲನಾದ್ರು ಫ್ರಿಡ್ಜ್ ಓಪನ್ ಮಾಡ್ಲೇಬೇಕಲ್ಲ. ಈ ಸಮ್ಮರ್ ಅಲ್ಲಂತೂ ಇನ್ನೂ ಜಾಸ್ತೀನೇ. ಯಾಕಂದ್ರೆ ಫ್ರಿಡ್ಜ್ ಲ್ಲಿರೋ ತರತರದ ಐಸ್ಕ್ರೀಮು ಆಗಾಗ ಮನ್ಯೌರೆಲ್ಲರ್ ಮನಸ್ಸೊಳ್ಗಡೆ ಬಂದು ಕರೀತಾನೆ ಇರುತ್ತೆ.

ಈ ಜೀರಾ ಪೌಡರ್‌ಗೆ ನೆಲ ಹೆಂಗಿದೆ ನೋಡುವಾ ಅಂತ ಆಸೆ ಆಗಿ ಒಂದ್ಸಲ ಫ್ರಿಡ್ಜ್ ಓಪನ್ ಮಾಡ್ದಾಗ ಕೆಳ್ಗಡೆ ಬಿತ್ತು. ಹೋಗ್ಲಿ ಅಂತ ಎತ್ತಿಟ್ಟೆ. ಮತ್ತೊಂದ್ಸಲ ಬಿತ್ತು. ಆಗ್ಲು ಎತ್ತಿಡ್ಲಿ. ಎಷ್ಟ್ಸಲ ಅಂತ ನಾನು ಮಡ್ಸಿಡ್ಲಿ. ನಂಗು ಅರ್ಜೆಂಟ್ ಬೇರೆ ಕೆಲ್ಸ ಇರುತ್ತಲ್ವ. ಮನೇಲಿರೋ ಎಲ್ಲಾ ವಸ್ತೂನು ನಾನೆ ಗಮನಿಸ್ಕೊಳ್ಬೇಕು. ನಂಗೇನ್ ಬರೀ ಅದುನ್ನೆತ್ತಿಡೋದೆ ಕೆಲ್ಸನ. ಅದು ಅದ್ಕೆಲ್ಲಿ ಅರ್ಥ ಆಗುತ್ತೆ. ಆ ಕಡೆ ನೋಡಿದ್ರೆ ಸ್ಟೋವ್ ಮೇಲಿಟ್ಟಿದ್ ಅಡ್ಗೆ ನೀನ್ ಬಂದ್ ಗೊಟಾಯಿಸ್ದೆ ಇದ್ರೆ ನಾನ್ ಸೀದ್ಹೋಗ್ತೀನಿ ಅಂತ ಹೆದ್ರುಸ್ತಾ ಇತ್ತು. ಇಷ್ಟೆಲ್ಲ ಆಗ್ತಿದ್ರು ಇದ್ರುದ್ದು ಒಂದೇ ಹಠ. ನಾನ್ ಹೊರ್ಗಡೆ ಪ್ರಪಂಚ ನೋಡ್ಬೇಕು ಅಂತ. ಪಾಪ, ಆ ಜೀರ್ಗೆಗೆ ಪುಡಿ ಆದ್ಮೇಲೆ ಪ್ಯಾಕ್ ಒಳ್ಗಡೇನೆ ಇದ್ದೂ ಇದ್ದು ಉಸ್ರು ಕಟ್ಟಿತ್ತು ಅನ್ಸುತ್ತೆ. ಮೊದ್ಲೇ ಹುರ್ದು, ರುಬ್ಬಿದ್ರಲ. ಹಾಗಾಗಿ ಫ್ರಿಡ್ಜ್ ಓಪನ್ ಮಾಡ್ದಾಗೆಲ್ಲ ಕಾಣ್ತಿದ್ದಿದ್ನೆಲ ಅದ್ಕೆ ಭಾಳ ಇಷ್ಟ ಆಗಿತ್ತು ಅನ್ಸುತ್ತೆ. ಈ ಸಲ ಫ್ರಿಡ್ಜ್ ಓಪನ್ ಮಾಡದುನ್ನೆ ಕಾದ್ಕೊಂಡು ಜೋರಾಗಿ ದೂಡ್ಕೊಂಡೆ ಬಂದು ಕೆಳ್ಗಡೆ ಬಿತ್ತು. ಅದೂ ನೆಲದ್ಮೇಲೆಲ್ಲಾ ತನ್ನ ಇರುವನ್ನು ತೋರುಸ್ಕೊಳ್ತಾ. ನಂಗೋ ಎಲ್ಲಿಲ್ಲದ್ ಸಿಟ್ಟು. ಬೈದ್ರೆ ಅದ್ಕೇನ್ ಅರ್ಥಾಗುತ್ತಾ. ಏನಾದ್ರು ನಾನೇ ಕ್ಲೀನ್ ಮಾಡ್ಬೇಕಲ. ಹೆಂಗೋ ನಾನೇ ಸಮಾಧಾನ ಮಾಡ್ಕೊಂಡೆ. ನಿಂಜೊತೆ ನಾನಿರದು ಅದ್ಕಿಷ್ಟ ಆಗ್ತಿಲ್ಲ. ಇರು ಅದುನ್ನ ಆಚೆ ಕಳುಸ್ಬತೀರ್ನಿ ಅಂತ ಅಡ್ಗೆಗೆ ಹೇಳಿ, ಸ್ಟೋವ್ ಆಫ್ ಮಾಡಿ, ಅಮೇಲ್ ಸಿಗಣ ಅಂತ್ಹೇಳಿ, ಒಂದ್ ಬಟ್ಟೆ ಒದ್ದೆ ಮಾಡಿ ಹಿಂಡ್ಕೊಂಡ್ಹೋಗಿ ಎಲ್ಲ ಒರುಸ್ದೆ. ಅದೂ ಅಲ್ಲಲ್ ಉಳಿತಾ ಬಿಡು ನನ್ನುನ್ನ, ಬಿಡು ನನ್ನನ್ನ ಅಂತ ಕೊಸರಾಡ್ತಿದ್ಹಂಗೆ ಅನ್ನುಸ್ತು. ಆದ್ರೂ ನಾನ್ ಬಿಡ್ತೀನಾ? ಬೀಳ್ಬೆಡ, ಬೀಳ್ಬೆಡ ಅಂತ ಎಷ್ಟ್ಸಲ ಹೇಳಿದ್ದೆ. ನಿಂಗು ಕಾಸ್ಕೊಟ್ಟೆ ತಂದಿರದು. ಆದ್ರು ನನ್ ಮಾತಿಗ್ ಮೂರ್ಕಾಸಿನ್ ಬೆಲೆ ಕೊಡ್ದೆ ಬಿದ್ದಿದ್ಯ. ಇರು, ಇನ್ನು ನೀನಂಗ್ಬೇಡ ಅಂತ್ಹೇಳಿ ನಲ್ಲಿ ನೀರಲ್ಲಿ ಬಟ್ಟೆ ಹಿಂಡ್ಕೊಂಡ್ ಬಂದು ಮತ್ತೂ ಎರಡ್ಸಲ ಒರ್ಸಿ ಕ್ಲೀನ್ ಮಾಡ್ದೆ. ಹೇಳ್ದೆ ಕೇಳ್ದೆ ತನ್ಮೇಲೆ ಬಿದ್ದಿದ್ದುಕ್ಕೋ ಅಥ್ವಾ ಅದ್ರು ಘಾಟು ತಡ್ಯಕಾಗ್ದೆನೊ ಮುಖ ಒಂಥರಾ ಮಾಡ್ಕೊಂಡಿದ್ನೆಲ ಈಗ ಹೊಳೀತಾ ನನ್ನುನ್ನೋಡಿ ಒಂದ್ಸಲ ನಗ್ತು. ನೆಲ ನೋಡ್ಬೇಕು ಅಂತಿದ್ದಿದ್ ಜೀರಾ ಪೌಡ್ರು ಈಗ ಮೋರೀನು ನೋಡ್ತಿದೆ. ಇದ್ಕೆಲ್ಲ ನಾನಂತು ಖಂಡಿತಾ ಕಾರಣ ಅಲ್ಲಪ್ಪ. ಅರ್ಧಂಬರ್ಧ ಆಗಿದ್ ಅದ್ರು ಬದ್ಕುನ್ನ ಅಡ್ಗೆ ಮಾಡಿ ತಿಂದು ಬಾಯ್ಚಪಲ ತೀರುಸ್ಕೊಂಡು ಮುಕ್ತಿ ಕಾಣ್ಸೋದು ನನ್ ಜವಾಬ್ದಾರಿ ಆಗಿತ್ತು. ಪಾಪ, ಈ ಜೀರ್ಗೆನ ಯಾರೋ ಚೆನ್ನಾಗೆ ಉರ್ಸಿದಾರೆ, ಈಗಂತೂ ಸೆಖೆ ಬೇರೆ, ನಮ್ಮನೇಲ್ ಇರೋ ಅಷ್ಟೂನನಾದ್ರು ಈ ಸೆಖೇಲಿ ತಣ್ಣಗ್ ಫ್ರಿಡ್ಜ್ ಒಳ್ಗಡೆ ಇರು ಅಂದ್ರೆ , ಇಲ್ಲ ಅಂತ ಆಗಾಗ ಇಣ್ಕಿ, ಇಣ್ಕಿ ನೋಡೋ ಕೆಟ್ಟ ಕುತೂಹಲ ಯಾಕ್ಬೇಕಿತ್ತು ಅಂತೀನಿ. ಇದೇ ತರನೋ, ಬೇರೆ ತರನೋ, ನೀವು ಅಚ್ಚಗ್ಟಾಗಿ ಜೋಪಾನ ಮಾಡಿಟ್ಟಿದ್ ಯಾವ್ದಾದ್ರು ವಸ್ತು ಅದ್ರು ಹಠದಿಂದಾಗಿ ನಿಮ್ಮನೇಲು ಮೋರಿ ಸೇರಿರ್ಬೋದಲ್ವಾ... ಆದ್ರೂ ಮತ್ತೊಂದ್ಸಲ ಹೇಳ್ತಿದಿನಿ, ಜೀರಾ ಪೌಡರ್ ಮೋರಿ ಸೇರಕೆ ನಾನಂತು ಕಾರ್ಣ ಅಲ್ವೇ ಅಲ್ಲ. ■

# ಕಣಜ ಕಚ್ಚಿತೂಊಊಊ

✍ ಉಷಾ ರಮೇಶ್

ಭೀಮನಮಾವಾಸ್ಯೆಯ ಬೆಳಿಗ್ಗೆ ಆರೂಮುಕ್ಕಾಲಿಗೆ ನನ್ನ ಕೈಗೆ ಕಣಜ ಕಚ್ಚಿತು. ಬೀದಿ ಬಾಗಿಲಿಗೆ ನೀರು ಹಾಕಿ ರಂಗೋಲಿಯಿಡಲು ಹೊರಟವಳು ಕಿರುಚಿ ಪೊರಕೆ ಬಿಸಾಕಿ ಒಳಗೋಡಿದೆ. ಅಸಾಧ್ಯ ನೋವು. ಕೈ ಅಯ್ಯಂಗಾರ್ ಬೇಕರಿ ಬನ್ನಂತೆ ಉಬ್ಬಿತು.

ಇಂಟರ್ನೆಟ್ನಲ್ಲಿ ನೋಡಿದರೆ, ನೋವು ಹಾಗೂ ಊತ ವಾರಗಟ್ಟಲೆ ಇರುವ ಸಾಧ್ಯತೆಯ ಮಾಹಿತಿ ಸಿಕ್ಕಿತು.

ಡಾಕ್ಟ್ರ ಹತ್ರ ಹೋದ್ರೆ–ಈ ಬೆಂಗಳೂರು ಪೇಟೇಲಿ ಕಣಜಾನ ಎಲ್ಲಿ ಹುಡುಕ್ಕೊಂಡ್ಹೋದ್ರಿ–ಅಂತ ನಕ್ಕರು. ನಾನು ಕೊಡೋ ಔಷಧಿ ತೊಗೊಂಡ್ರೆ ನಾಳೆ ಕೆಲಸಕ್ಕೆ ಹೋಗಕ್ಕಾಗಲ್ಲ ಡ್ರೌಸಿನೆಸ್ಸ್ ಇರುತ್ತೆ ಅಂತ ಹೇಳಿದರು. ಡಾಕ್ಟ್ರ ಮಾತು ಮೀರೋದುಂಟೆ ಲಕ್ಷಣವಾಗಿ ರಜದ ಮಜ ಅನುಭವಿಸಿದೆ–ಇಡೀ ದಿನ ನಿದ್ದೆ ಮಾಡಿ.ಕೈ ನೋವು ಅಂತ ಪಾಪ ಯಜಮಾನರೇ ಅಡುಗೆ ಮಾಡಿದ್ದರು. ಕೈನೋವು ಇಲ್ಲದಿದ್ದರೆ ಇನ್ನೂ ಚೆನ್ನಾಗಿರ್ತಿತ್ತು ಅನ್ನಿಸ್ತು. ಆದರೆ ಕೈ ನೋವಿಗಾಗಿ ತಾನೆ ರಜ ಸಿಕ್ಕಿದ್ದು ಎಂದು ನೆನಪಾಗಿ ನಗು ಬಂತು.

ವಠಾರದವರಿಗೆಲ್ಲಾ ನನ್ನ ಕೈ ಪ್ರದರ್ಶನದ ವಸ್ತುವಾಯಿತು. ಒಬ್ಬೊಬ್ಬರೇ ಬಂದರು.ಮನೆಗೆ ಬಂದ ಪರಿಚಯದವರನ್ನು ಸಹಾ ಕರೆ ತಂದರು. ಕೊನೆಗೆ ಟಿಕೆಟ್ಟಾದರೂ ಇಟ್ಟಿದ್ದರೆ ಒಳ್ಳೆ ಕಲೆಕ್ಷನ್ ಆಗ್ತಿತ್ತು ಅಂದರು ಯಜಮಾನರು.

ಪಕ್ಕದ ಮನೆಯವರ ಉವಾಚ–ಕಚ್ಚಿದ ತಕ್ಷಣ ಕೆಮ್ಮಣ್ಣು ಹಚ್ಚಿದ್ದರೆ ಇಷ್ಟೊತ್ತಿಗೆ ಊತ ಎಲ್ಲಾ ಇಳಿದು ಹೋಗಿ, ಆರಾಮಾಗಿರ್ಬಹುದಿತ್ತು.

ಮೈದುನನ ಉವಾಚ–ಇದಕ್ಕೆಲ್ಲಾ ಡಾಕ್ಟ್ರ ಹತ್ರ ಹೋದ್ರೆ ಏನೂ ಉಪಯೋಗವಿಲ್ಲಾ, ಕಚ್ಚಿದ ತಕ್ಷಣ ಸುಣ್ಣ ಹಚ್ಚಬೇಕು.

ಕೆಲಸದವಳ ಉವಾಚ–ಇದಕ್ಕೆಸರಿಯಾದ ಮದ್ದೆಂದರೆ ಸಿಂಬಳನೇ.

(ಕಚ್ಚಿಸಿಕೊಂಡವರದ್ದೇನಾ ಅಥವಾ ಬೇರೆಯವರದ್ದೂ ಆಗುತ್ತಾ?

Fresh ಆಗಿರಬೇಕಾ ಅಥವಾ ಸಂಗ್ರಹಿಸಿದ್ದು ಆಗುತ್ತಾ?

ಬ್ಲಡ್ ಬ್ಯಾಂಕ್ ತರಹ ಸಿಂಬಳದ ಬ್ಯಾಂಕ್ ಏನಾದರೂ ಇದೆಯಾ

ಕಚ್ಚಿದ ತಕ್ಷಣ ತಾನಾಗಿ ಸಿಂಬಳ ಬರುತ್ತಾ ?

ಈ ಅತ್ಯಮೂಲ್ಯ ಔಷಧಿಗೆ ಪೇಟೆಂಟ್ ಸಿಗಬಹುದಾ ನಿಮ್ಮ ಮನದಲ್ಲಿ ಮೂಡುವ ಇಂತಹ ಪ್ರಶ್ನೆಗಳಿಗೆ ನನ್ನಲ್ಲಿ ಖಂಡಿತಾ ಉತ್ತರವಿಲ್ಲ.)

ಅಯ್ಯೋ ಗೊತ್ತೇ ಇರ್ಲಿಲ್ವೇ ಅನ್ಯಾಯವಾಗಿ ಡಾಕ್ಟ್ರ ಹತ್ರ ಹೋಗಿ 500ರೂ ಚೌರ ಮಾಡಿಸಿಕೊಂಡೆನಲ್ಲಾ ಅಂತ ಹೊಟ್ಟೇಲಿ ಉರಿ ಶುರುವಾಯಿತು.

ನೋವು ಕಮ್ಮಿಯಾಗಿ ಕೆಲಸಕ್ಕೆ ಹೋದರೆ,

ಅಯ್ಯೋ ನಿಮಗೆ ಕಣಜ ಕಚ್ತಾ ತುಂಬಾ ಒಳ್ಳೇದೂರೀ. ಕಣಜ ಲಕ್ಷ್ಮಿ ಸ್ವರೂಪ. ಅದೂ ಎಡಭಾಗಕ್ಕೆ ಕಚ್ಚಿದರೆ, ಮನೇಲಿ ಗೂಡು ಕಟ್ಟಿದರೆ ಶುಭ. ನಿಮಗೆ ಲಕ್ಷ್ಮಿ ಒಲಿದಿದಾಳೆ.–ಸಹೋದ್ಯೋಗಿ ಉವಾಚ.

ತುಂಬಾ ಒಳ್ಳೇದು ಮೇಡಂ ಚುರುಕುತನ ಬರುತ್ತೆ.–ಕಸಗುಡಿಸುವವಳ ಉವಾಚ.

ಹಣ, ಚುರುಕುತನ ಎರಡೂ ನನಗೆ ಅತ್ಯಗತ್ಯವಾದ ಸರಕುಗಳು. ಕಣಜದ ಕೈಲಿ ಕಚ್ಚಿಸಿ ಎಂಟ್ರಿ ಕೊಡುತ್ತಿರುವ ಮಹಾಲಕ್ಷ್ಮಿಗೆ ಸ್ವಾಗತ ಹಾಗೂ ನಮೋನ್ನಮಹ.

■

# ಅಡುಗೆ ಅರಮನೆಯೆಂಬ ದೇವರ ಗುಡಿ

**✍ ಎಸ್ ಕೆ. ಸೋಮೇಶ್ವರ**

ಮಾಗಿಕಾಲ ಸಾಯಂಕಾಲ ಹಾಡು ಹಾಡ ಹಾಡುತ್ತ ಪರದೆ ಹಿಂದೆ ಸರಿಯುತ್ತಿದೆ. ಅಂದರೆ, ಚುಮು ಚುಮು ಚಳಿಯೂ ಚಂ ಚಂ ಎಂದು ಹಾರಿ ಹೋಗಿ ವಸಂತ ಬರುತ್ತಾನೆ/ಳೆ. ಆದರೇನು, ಬೆಳಗಿನ ಆಸ್ವಾದನೆಗೆ ಕರಾಗ್ರೇ ವಸತೇ ಹೇಳಲೇ ಬೇಕಲ್ಲವೇ!

'ಕರಾಗ್ರೇ ವಸತೇ ಕಪ್ಪು, ಅಧರ ಮೂಲೇ ಹಬೆ ಕಾಫಿ'; ಶುಭ ದಿನಂ, ದಿನಂ ಪ್ರತಿ ಕಾಫಿಯಾಯೈ ನಮಃ; ಓಂ ನಮೋ ಕಾಫಿಯಾಯೈ ನಮಃ. ನಮೋ ಅಮೃತ ಸದ ಕಾಫಿಃ. ಇದಕಿಂತ ಬೇರೆ ದೇವರಿಲ್ಲ. ಇದು ದೇವ ದಾನವರಿಗೆ ತಿಳಿಯದ ಭೂಲೋಕದ ಅಮೃತ. ಬಂದರೆ, ಅವರಿಗೂ ಕೊಡಬಹುದು. ಎಲ್ಲ? ಕಾಫಿ ಡೇ, ಸ್ಟಾರ್ ಬಕ್ಸ್, ಥರ್ಡ ವೇವ್, ಬಕ್ಸ್ ಅವರೇ ತರಬೇಕು ಇಲ್ಲದಿದ್ದರೆ ಅಲ್ಲಿ ವೇವ್ ಎದ್ದೇಳತ್ತೆ.

ಇಂತಹ ಸುಮುಹೂರ್ತದಲ್ಲಿ ನಮಗೆ ಕಣ್ಣಿಗೆ ಕಾಣುವ ಗುಡಿಯೇ ಪಾಕಶಾಲೆ. ಅಲ್ಲಿರುವ ಎಲ್ಲ ವಸ್ತುಗಳು ನಾವೆ ಪ್ರತಿಷ್ಠಾಪಿಸಿದ ದೈವಾನುಸಂಭೂತ ವಿಗ್ರಹಗಳು. ಎಲ್ಲಿ ಯಾವಾಗಬೇಕಾದರೂ ನಮಗೆ ಬೇಡಿದ ವರವನು ಕರುಣಿಸುವ ಮಹಾ ಕರುಣಾಮಯಿಗಳು.

ಮೊದಲಿಗೆ ನಮಗೆ ಅಮೃತ ಉಣಿಸುವ ಕಾಫಿ ಫಿಲ್ಟರ್‌ಗಳು. ಇದನ್ನು ಪ್ರತಿಷ್ಠಾಪಿಸುವ ಮೊದಲಿಗೆ ಈ ನಮ್ಮ ಗುಡಿಯಲ್ಲಿ ತೆಳುಬಟ್ಟೆಯಲ್ಲಿ ಶೋಧಿಸಿ ಚರಟವೆಂಬ ವಿಷವನ್ನು ತೆಗೆದು ಡಿಕಾಕ್ಷನ್ ಎಂಬ ಅಮೃತ ಹಬೆಯಾಡುತ್ತಿರುತ್ತಿತ್ತು. ಈಗ ನಾವೇ ಕಂಡು ಕೊಂಡ ಫಿಲ್ಟರುಗಳು. ಇವುಗಳಲ್ಲಿ ಹಲವು ಮಾದರಿಗಳಿವೆ. ದೇವನನ್ನು ನೆನೆಯುವುದು ಭಕುತನ ಮನದಿಚ್ಛೆಯಂತಲ್ಲವೇ. ಕೆಲವು ಓಲ್ಡ್ ಮಾಡೆಲ್‌ಗಳಾದರೆ ಸುಲಭ. ಏಕೆಂದರೆ, ನಮ್ಮ ಸಿನಿಮ ಮತ್ತು ಧಾರಾವಾಹಿಗಳಂತೆ, ಗಳಗಳನೆ ಧಾರಾಕಾರ ಕಣ್ಣೀರು ಸುರಿಸಿ ತೆಪ್ಪಗಾಗಿ ಬಿಡುತ್ತವೆ. ಇನ್ನು ಈಗಿನವು ಕೆಲವು ಎಳಸು ಚೇಷ್ಟೆ ಜಾಸ್ತಿ. ಚಿಟಿಕೆ ಕಾಫಿ ಪುಡಿ ಇಲ್ಲ ಹನಿ ನೀರು ಹೆಚ್ಚಾದರೂ ಹಠ ಮಾಡಿ ನಿಂತು ಬಿಡುತ್ತವೆ. ತಲೆ ಸವರಿ ಮುದ್ದು ಮಾಡಿದರೂ ನಸು ಕೋಪ. ನಿಮಗೆ ಪ್ರಸಾದ ಭಾಗ್ಯವಿಲ್ಲ. ಏನು ಮಾಡುವುದು ನಾವೇ ಕಂಡುಕೊಂಡ ದೈವಗಳಲ್ಲವೇ. ಇನ್ನು ನಮ್ಮ ಹೊಟ್ಟೆ ಪಾಡಿಗಾಗಿ ದುಡಿಯುತ್ತಿದ್ದ ಹಲ ಬಗೆಯ ಒಲೆಗಳು ಓಬೀರಾಯನವಾಗಿ ಮರೆಯಾಗಿವೆ. ಅದರ ಬದಲಿಗೆ ನಾವು ಪೂಜಿಸಲೆಂದು ತಂದಿರುವುದು ಕುಕರ್‌ಗಳು. ಇದು ಮೊದ ಮೊದಲು ಹಾಲು ಕಾಯಿಸಲೂ ಬರುತ್ತಿದ್ದವು. ಈ ಕುಕರ್‌ಗಳೇನು ಸಾಮಾನ್ಯದವಲ್ಲ. ನಾನಿರುವುದು ನಿನಗಾಗಿ ಎಂದು ಶಿಳ್ಳೇ ಹೊಡೆಯುತ್ತಾ ಮೇಲಿನ ತೂಕದ ಸೀಟಿ ನಟ ಭೈರವನಾಗಿ ಬಿಡುತ್ತದೆ. ಇದು ಹಾಡಿ ಪಾಡಲು ಕೆಳಗೆ ಕಣ್ಣಿಗೆ ಕಾಣದ ದೇವರು 'ಗ್ಯಾಸ್' ಎಂಬ ಪರೋಪಕಾರಿ ಇರಲೇ ಬೇಕು. ಕೆಲವೊಮ್ಮೆ ಅವುಗಳ ತಲೆ ಮೇಲೆ ಮೊಟಕಲೇ ಬೇಕು. ಇಲ್ಲದಿದ್ದರೆ, ಅದು ತಂಗಾಳಿಯಲ್ಲಿ ತೇಲಿ ಬಂದ ಅಂತ ಏನೇನೋ ಹಾಡುತ್ತ ನಿಮಗೆ ಕಲ್ಲು ಪಾಕವನ್ನೆ ಕೊಡುತ್ತದೆ.

ಇದರ ಸಮ ಸಮಕ್ಕೆ ಕೆಲಸ ಮಾಡುವುದು ಇಂಡಕ್ಷನ್ ಒಲೆಗಳು. ಇದು ಸಮಯಾಧಾರಿತ ವಿದ್ಯುತ್ ಜೀವಿ. ಅದಿಲ್ಲದಿದ್ದರೆ ಇದು ಕೈಲಾಗದು ಎಂದು ಕೈ ಕಟ್ಟಿ ಕುಳಿತು ಬಿಡುತ್ತವೆ. ಇದಕ್ಕೆ ಮೊದಲು ಬಹಳ ಜಂಭ ವಿತ್ತು. ಸಮತಲ ವಿರುವ ಸ್ಟೀಲ್ ಹರಿವಾಣಗಳನ್ನಷ್ಟೇ ಇದು ಸ್ವಾಗತಿಸಿ ಅವುಗಳ ತಳ ಕಾಯಿಸುತ್ತಿದ್ದವು. ಇದು ಸಮಯಧಾರಿತ ಎಂದೆನಲ್ಲವೇ! ನಿಗದಿತ ಸಮಯ ಕೊಡ ಮಾಡಿದೊಡನೆ ಅರಂಭಿಸಿ ಮುಗಿದಂತೆ ಮಂಗಳ ಹಾಡಿ ತೆಪ್ಪಗಾಗಿ ಬಿಡುತ್ತವೆ. ಈಗಿನವಕ್ಕೆ ಸ್ವಲ್ಪ ಬುದ್ಧಿ

ಬಲಿತಿದೆ. ಯಾರನ್ನು ಬೇಕಾದರೂ ತನ್ನ ತಲೆಯ ಮೇಲಿರಿಸಿ ಕೊಂಡು ಕಾಯಿಸಿ ಸಂತಸ ಅರಳುವ ಸಮಯ ಅಂತ ಹಾಡಿ ನಲಿಯುತ್ತವೆ.

ಇವುಗಳ ಜುಗಲ್ ಬಂದಿ ಸಾಲದೆಂಬಂತೆ ಮೈಕ್ರೋವೇವ್ ಒಲೆಗಳು ತ್ರಿಬಲ್ ಬಂದಿಗಳಾಗಿ ನಮ್ಮಗಳ ಅಡುಗೆ ಅರಮನೆಯಲ್ಲಿ ಸೇರಿ ಒಂದಿಷ್ಟು ಬಂದಿಷ್ ಪಾಡುತ್ತವೆ. ಇವೇನು ಕಡಿಮೆಯಿಲ್ಲ. ನಾವೇ ಕಂಡು ಕೊಂಡಿರುವುದಲ್ಲವೇ. ತಿರುಗು ಬಾಣ ನಮಗೇ ತಾನೇ. ಮೊದಲಿಗೆ ಇವು ಬೊರೊಸಿಲ್ ಎಂಬ ದುಬಾರಿ ಗಾಜಿನ ನೈವೇದ್ಯ ಪಾತ್ರೆಯನ್ನಷ್ಟೇ ಸ್ವೀಕರಿಸುತ್ತಿತ್ತು. ಆದರೇನು? ಇದರ ಸೃಷ್ಟಿಕರ್ತರು ನಾವೇ ಆಗಿರುವಾಗ ಓಲ್ಡ್ ಮಾಡೆಲ್ ಅಷ್ಟೇ ಇಟ್ಟಿರಲು ನಾವೇನು ಆ ಬೊಮ್ಮನಲ್ಲವಲ್ಲ. ನಾವು ನವ ಬೊಮ್ಮರುಗಳು. ಅದಕ್ಕೇ ಹಗುರವಾದ ಪ್ಲಾಸ್ಟಿಕ್ ಪರಾತಗಳನ್ನೇ ತಯಾರು ಮಾಡಿ ಬಿಟ್ಟಿದ್ದೇವೆ. ಅದು ಒಳ ಪ್ರವೇಶ ಮಾಡಿದೊಡನೆಯೇ ಇದು ಕಛೇರಿ ಆರಂಭಿಸಲೇ ಬೇಕು. ಇಲ್ಲಿ ಸಣ್ಣಪುಟ್ಟ ಗಿಂಡಿಗಳೂ ಓಕೆ. ಅದೇನು ಸುಮ್ಮನಿರಲ್ಲ. ತನ್ನ ಸಮಯ ಮುಗಿದ ನಂತರ 'ಎಚ್ಚರ ಅಣ್ಣ ಎಚ್ಚರ, ಎಚ್ಚರ ತಂಗಿ ಎಚ್ಚರ' ಅಂತ ಮೆಲ್ಲಗೆ ಕಿವಿಯಲ್ಲಿ ಉಸುರಿ ನಿಸೂರಾಗಿ ಬಿಡುತ್ತದೆ.

ಅಡುಗೆ ಮನೆಗೆ ಇನ್ನೊಂದು ದೊಡ್ಡ ಆಭರಣವೆಂದರೆ ತಂಗಳು ಪೆಟ್ಟಿಗೆ. ಇದು ಬಿಡಿ, ಏನೇನೋ ಆಗಿ ಬಂದು ನಿಂತಿವೆ. ಇದಿಲ್ಲದಿದ್ದರೆ ನಮ್ಮ ಪಾಕಶಾಲೆಯ ಪೂಜೆ ಅಪೂರ್ಣ ಎನಿಸಿಬಿಡುತ್ತದೆ. ಏಕೆಂದರೆ, ಇದು ನಾವು ಮಾಡಿ, ಕಬಳಿಸಿ, ಉಳಿಸಿದ ವನ್ನು ತನ್ನ ಗರ್ಭದಲ್ಲಿ ಜೋಪಾನವಾಗಿರಿಸಿಕೊಂಡು ನಮಗೆ ಬೇಕಾದಾಗ 'ವಿವಾಹ ಭೋಜನವಿದು, ವಿಚಿತ್ರ ಭೋಜನವಿದು' ಎಂದು ಮಾಯ ಬಜಾರು ಮಾಡುತ್ತದೆ. ಇದೆಲ್ಲ ಸರಿಯೇ, ಇಲ್ಲಿ ಇನ್ನೊಬ್ಬ ದೇವತೆ ಇರಲೇಬೇಕು. ಈ ಎಲ್ಲ ಕೆಲಸಗಳಿಗೆ ಉಪಶಾಂತಿ ಆಗಬೇಕಲ್ಲವೇ. ನಮ್ಮ ಟಿವಿಯಲ್ಲಿ ಒಂದು ಜಾಹೀರಾತು ಬರುತ್ತಿರುತ್ತದೆ. ಅದರಲ್ಲಿ ಒಬ್ಬ ಬಲಿ ಪಶು– ಗಂಡು ತನ್ನ ಪ್ರಿಯೆಗೆ ನಮ್ಮ ಮದುವೆಯ ನಂತರ ನಾನು ನಿನಗೆ ಅಡುಗೆ ಮಾಡಲು ಸಹಾಯ ಮಾಡುತ್ತೇನೆ ಎನ್ನುತ್ತಾನೆ. ಅವನಿಗೇನು ಗೊತ್ತು ಅಡುಗೆ ಅರಮನೆಯ ಒಳಗಣ್ಣು. ಆ ಘಾಟಿ ಪ್ರಿಯತಮೆ ತಕ್ಷಣ ನಾನು ನಿನಗೆ ಪಾತ್ರೆ ತೊಳೆಯಲು ಸಹಾಯ ಮಾಡುತ್ತೇನೆ ಎಂದು ಅವನನ್ನು ನಿಬ್ಬೆರಗು ಮಾಡುತ್ತಾಳೆ. ಎರಡು ಕೈ ಸೇರಿದರೆ ಚಪ್ಪಾಳೆ ಎಂಬ ಗಾದೆ ಮಾತಿದೆ. ಅದೇ ರಿತಿ ಇಂತಹ ಗುಡಿಯಲ್ಲಿ ಎರಡು ಕೈ ಸೇರಿದರೆ ಚಟ್ನಿಯಾಗಿ ಅಪ್ಪಚ್ಚಿ ಯಾಗುವ ಸಾಧ್ಯತೆಯೇ ಹೆಚ್ಚಾಗಿರುತ್ತದೆ. ಇದಕ್ಕೆಂದೇ ಉದ್ಭವಿಸಿದ್ದಾನೆ ಉದ್ದಾಮ ಪುರುಷ ಡಿಷ್ ವಾಷರ್. ಇದನ್ನು ಕಂಡು ಹಿಡಿದಿದ್ದು ಪುರುಷನಲ್ಲ. ಅವನೆಷ್ಟಾದರೂ ಪರಜೀವಿಯಲ್ಲವೇ. ಅದರ ಉದ್ಭವಿ ಒಬ್ಬ ಶ್ರೀಮಂತ ಮಹಿಳೆ. ಅವಳು ಪಾತ್ರೆ ತೊಳೆಯುವುದಿರಲಿ ಅಡುಗೆ ಮಾಡುವುದೇ 'ಶೂನ್ಯ' ವಾಗಿತ್ತು. ತನ್ನ ಮುಂದಿನ ಜನಾಂಗಕ್ಕೆ ಕೈ ಜೋಡಿಸುವಂತೆ ಇದನ್ನು ಭೂಲೋಕದಲ್ಲಿ ಲ್ಯಾಂಡ್ ಮಾಡಿಸಿದಳು. ಈ ದೇವತೆಯ ನಾಮ– ಜೋಸಫೀನ್ ಕೊಕ್ರೇನ್ ಎಂಬ ಅಮೆರಿಕದ ಮಹಿಳೆ. ಇದರ ಕೆಲಸ ಏನಿಲ್ಲ. ಥಂಡಿಯಾಗಿ ನೀರು, ವಿದ್ಯುತ್ ಮತ್ತು ಇಟ್ಟ ಪಾತ್ರೆಗಳನ್ನು ತೊಳೆದು ಹಬೆಯಾಡುವಂತೆ ಮಾಡುವುದು .

ಇಷ್ಟು ಸಾಕೆ ಅಥವ ಇನ್ನೇನಾದರು ಇದೆಯೇ. ಯಾರು ಹೇಳಬೇಕು ? ಆ ನಳ ಮಹಾರಾಜನೋ ಇಲ್ಲ ವಲಲನೋ ಹೇಳಬೇಕು. ಭೀಮಸೇನ ನಳ ಮಹರಾಜ ಗಂಡಸರಲ್ಲವೇ!!. ನಮ್ಮ ಯಾವುದೇ ಪುರಾಣದಲ್ಲೂ ಮಹಿಳೆಯರು ಪಾಕ ಪ್ರವೀಣೆಯರಾಗಿ ಮಿಂಚಿದ ಪ್ರಸಂಗ ಹೇಳಿಲ್ಲ. ಆ ದ್ರೌಪದಿ ತನ್ನ ಕೈ ಸೌಟಿನ ಪ್ರಭಾವ ತೋರ ಹೋಗಿ ಕೈ ಸುಟ್ಟುಕೊಂಡ ಅನುಭವವೇ ಪ್ರಚಲಿತ. ಆಗ, ಅವಳಿಗೆ ರಕ್ಷಕನಾಗಿ ಯಥಾಪ್ರಕಾರ ಶ್ರೀ ಕೃಷ್ಣನೇ ಬಂದು ಅಕ್ಷಯ ಪಾತ್ರೆಯಲ್ಲಿ ಮೊಗೆ ಮೊಗೆದು ಕೊಟ್ಟನೇ ಹೊರತು ಪಂಚ ಪಾಂಡವರಲ್ಲ. ■

# ಶುಭೋದಯ

✍ಸಿ.ಎ.ವಿಲಾಸ ನಾ ಹುದ್ದಾರ

ನನ್ನ ಸ್ನೇಹಿತ ಬಳವಂತ ಕಾನೂನು ವಿದ್ಯಾಭ್ಯಾಸ ಮುಗಿಸಿ ಒಂದು ಪ್ರಸಿದ್ಧ ಕಾನೂನಿನ ಸಂಸ್ಥೆಯನ್ನು ತರಬೇತಿಗಾಗಿ ಸೇರಿಕೊಂಡ. ಆ ಸಂಸ್ಥೆಯ ಕಿರಿಯ ಪಾಲುದಾರರಾದ ಸುಬ್ರಹ್ಮಣ್ಯ ಸರ್ ಬೇಗ ಬಂದು ಮುಂದಿನ ಕೋಣೆಯಲ್ಲಿ 10.00 ಗಂಟೆಯವರೆಗೆ ಕುಳಿತು ಅಂದಿನ ವ್ಯಾಜ್ಯಗಳ ಕಡತಗಳನ್ನು ಅಭ್ಯಸಿಸುತ್ತ ಯಾರು ಸರಿಯಾದ ಸಮಯಕ್ಕೆ ಬರುತ್ತಾರೆಂದು ಗಮನಿಸುತ್ತಿದ್ದರು. ಅಲ್ಲದೇ ಬಂದವರಿಗೆಲ್ಲ ಸ್ವಚ್ಛ ಕನ್ನಡದಲ್ಲಿ ಶುಭೋದಯ ಕೋರುತ್ತಿದ್ದರು. ಇಂಗ್ಲೀಷನ್ನು ವ್ಯವಹಾರಕ್ಕೆ ಎಷ್ಟು ಬೇಕೋ ಅಷ್ಟನ್ನೇ ಉಪಯೋಗಿಸುತ್ತಿದ್ದರು. ಬಳವಂತ ಸೇರಿ ಸರಿಸುಮಾರು ಆರು ತಿಂಗಳು ಉರುಳಿದ್ದವು. ಹೀಗಾಗಿ ಈ ಸಂಸ್ಥೆಯ ನಡುವಳಿಕೆಗಳೆಲ್ಲಾ ಗೊತ್ತಾಗಿದ್ದವು.

ಎರಡು ವಾರಗಳಿಂದ ನಳಿನಿ ಎಂಬ ಕನ್ಯೆ ತರಬೇತಿಗಾಗಿ ಸೇರಿಕೊಂಡಿದ್ದಳು. ಅವಳು ಈ ಊರಿನ ಪ್ರತಿಷ್ಠಿತ ಮನೆತನದ ಹುಡುಗಿ ಮತ್ತು ವಿದ್ಯಾಭ್ಯಾಸ ಎಲ್ಲಾ ಕಾನ್ವೆಂಟನಲ್ಲಿ ಇಂಗ್ಲೀಷ ಮೀಡೀಯಮ್‌ನಲ್ಲಿ ಆಗಿತ್ತು. ತುಂಬಾ ಸಂಭಾವಿತ ಹುಡುಗಿ. ಅವಳು 10.30 ಗಂಟೆಗೆ ಕಛೇರಿಗೆ ಬರುತ್ತಿರುವದರಿಂದ ಅವಳ ಮತ್ತು ಸುಬ್ರಹ್ಮಣ್ಯ ಸರ್ ಅವರ ಮುಖಾ ಮುಖಿ ಭೇಟಿ ಆಗಿರಲಿಲ್ಲ. ಅವಳು ಬಳವಂತನಿಗೆ ಸಹಾಯಕಳಾಗಿ ಕೆಲಸ ನಿರ್ವಹಿಸುತ್ತಿದ್ದಳು. ಇಂದು ಹೆಚ್ಚಿಗೆ ಕೆಲಸವಿದ್ದಿದ್ದರಿಂದ ಅವಳಿಗೆ ಅವನು ಬೇಗ ಬರಲು ಹೇಳಿದ್ದ.

ನಳಿನಿ ಕಛೇರಿ ಒಳಗೆ ಕಾಲಿಡುತ್ತಿದ್ದಂತೆಯೇ ಸುಬ್ರಹ್ಮಣ್ಯ ಸರ್ ಅವಳಿಗೆ, " ಶುಭೋದಯ..." ಎಂದರು. ಅದಕ್ಕೆ ಅವಳು,

"ವ್ಹೆರಿಗುಡ್ ಮೊರ್ನಿಂಗ್...." ಪ್ರತಿಯಾಗಿ ಹೇಳಿದಳು.

"ಬನ್ನಿ ಇಲ್ಲಿ..." ಅವಳನ್ನು ಕರೆದು ತಮ್ಮ ಎದುರಿನ ಕುರ್ಚಿಯಲ್ಲಿ ಕೂಡಿಸಿ, "ಏನ್ರೀ, ನನಗೆ ನೀವು ಅಪಮಾನ ಮಾಡುತ್ತೀರಾ?" ಎಂದು ಅವರು ಅಸಮಾಧಾನದಿಂದ ಕೇಳಿದಾಗ ನಳಿನಿ ತಬ್ಬಿಬ್ಬಾದಳು. ತಾನು ಏನು ತಪ್ಪು ಮಾಡಿದೆ ಎಂದು ಗೊತ್ತಾಗದೇ ಅವಳು,

"ಏನಾಯ್ತು, ಸರ್?" ಎಂದು ಕೇಳಿಯೇ ಬಿಟ್ಟಳು ಆ ಕಾನ್ವೆಂಟ್ ಹುಡುಗಿ. ಇದರಿಂದ ಮತ್ತಿಷ್ಟು ಕೆರಳಿದ ಸುಬ್ರಹ್ಮಣ್ಯ ಸರ್,

"ಏನ್ರೀ, ನನ್ನಜೊತೆ ವಾದ ಮಾಡ್ತೀರಾ? ಎಷ್ಟು ನಿಮಗೆ ಧೈರ್ಯ?".

ಮೊದಲೇ ಅಭಿಮಾನದ ಪ್ರತಿಷ್ಠಿತ ಮನೆತನದವಳು, ಇನ್ನೂ ಏನು ಅನ್ನುವಳೋ ಎಂದು ದಿಗಿಲಾಗಿ ಅವಳಿಗೆ ಮೂಕಸನ್ನೆ ಮಾಡಿ ಜಾಸ್ತಿ ಮಾತನಾಡದೇ ಅಳುಮುಖ ಮಾಡಲು ಒಳಗಿನಿಂದಲೇ ಸೂಚನೆ ಇತ್ತ. ಅವನಿಗೆ ಚೆನ್ನಾಗಿಗೊತ್ತಿತ್ತು ಸುಬ್ರಹ್ಮಣ್ಯ ಸರ್ ಎಷ್ಟು ಬೇಗ ಕೋಪಗೊಳ್ಳುತ್ತಾರೋ ಅಷ್ಟೇ ಬೇಗ ಕೋಪ ಇಳಿಯುತ್ತದೆ. ಅಲ್ಲದೇ ಯಾರಾದರೂ ಅಳು ಮೋರೆ ಮಾಡಿದರಂತೂಕರಗಿಯೇ ಬಿಡುತ್ತಾರೆ. ನಳಿನಿಯ ಅಳು ಮುಖ ನೋಡುತ್ತಿದ್ದಂತೇ ಅವರ ಕೋಪ ಇಳಿಯಿತು. ಅದೇ ಸಮಯ ಸಾಧಿಸಿ ಬಳವಂತ ಹೊರಗೆ ಬಂದು ಅವಳಿಗೆ ಸ್ವಲ್ಪ ತುರ್ತು ಕೆಲಸವಿದೆ ಎಂದು ಒಳಗೆ ಕಳಿಸಿದ.

ಸುಬ್ರಹ್ಮಣ್ಯ ಸರ್ ಅವನಿಗೆ ಕೂಡಲು ಹೇಳಿದಾಗ, ಅವನು, "ಸರ್.. ಕಾನ್ವೆಂಟ್ ಪದ್ಧತಿಯೊಳಗೆ ಗುಡ್ ಮೊರ್ನಿಂಗ್ ಅಂದಾಗ ಅದಕ್ಕ ಪ್ರತಿಯಾಗಿ ವ್ಹೆರಿಗುಡ್ ಮೊರ್ನಿಂಗ್ ಎಂದು ಅನ್ನುತ್ತಾರೆ... ಅವಳು ಕಾನ್ವೆಂಟ್‌ನಲ್ಲಿ ಕಲಿತಿರುವದರಿಂದ ಆ ತರಹ ಹೇಳಿದ್ದಾಳೆ... ನಿಮ್ಮ ವಿಷಯವಾಗಿ ತುಂಬಾ ಅಭಿಮಾನ ಅವಳಿಗೆ.."

" ಹೀಗಾ... ಅಯ್ಯೊ ಸುಮ್ಮನೆ ಬೈದೆನಲ್ಲಾ..." ಹೇಳುತ್ತ ಅವಳನ್ನು ಕರೆದು" ತಪ್ಪಾಯಿತು... ನಿನಗೆ ಸುಮ್ಮನೆ ಬೈದೆ....". ಅದನ್ನು ಕೇಳಿ ಅವಳು ಸುಮ್ಮನೇ ಹೋಗದೇ," ಇಟ್ಸಆಲ್‌ರೈಟ್...." ಎಂದು ಅನ್ನಬೇಕಾ.

"ಏನ್ರೀ ಬಳವಂತ.... ಅವಳು ಮತ್ತೇನೋ ಅನ್ನುತ್ತ ಹೋದಳು..." ಮುಖ ಗಂಟಿಕ್ಕಿದರು.

ಕುರ್ಚಿಯಿಂದ ಏಳುತ್ತಿದ್ದ ಬಳವಂತ ಮತ್ತೆ ಕುಳಿತ ಅವರಿಗೆ ಸಮಾಧಾನ ಮಾಡಲು.

**ಶ್ರೀ ಕೃಷ್ಣಾರ್ಪಣಮಸ್ತು**

## ಕಿರು ಪ್ರಸಂಗಗಳು

**ಎ.ವಿಜಯೇಂದ್ರ ರಾವ್**

"**ವಿದೇಶಿ ವ್ಯಾಮೋಹ....!** "

ನಮ್ಮ ಕಾಡಿನ ರಾಜನಾದ ಸಿಂಹಕ್ಕೂ, ನಮ್ಮ ಈಗಿನ ಯುವಜನಾಂಗದ ತರಹ ಅಮೇರಿಕಕ್ಕೆ ಹೋಗೋ ಹುಚ್ಚು ಹಿಡಿಯಿತು. ಯಾರು ಎಷ್ಟು ಹೇಳಿದರೂ ಕೇಳಲಿಲ್ಲ. ಹೇಗೋ ಅಂತೂ ಅಮೆರಿಕನ್ ಕಾನ್ಸುಲೇಟ್ ನಲ್ಲಿ ಒಬ್ಬರನ್ನು ಹಿಡಿದು ವೀಸಾ ಗಿಟ್ಟಿಸಿ, ಸಂಭ್ರಮದಿಂದ ಅಮೇರಿಕಕ್ಕೆ ಹೋಯಿತು.

ಅಲ್ಲಿ ಒಂದು ಪ್ರಸಿದ್ದ ಮೃಗಾಲಯದಲ್ಲಿ ಕೆಲಸ ಸಿಕ್ಕಿದ ಮೇಲಂತೂ ಅದನ್ನು ಹಿಡಿಯುವವರು ಯಾರೂ ಇರಲಿಲ್ಲ. ಸಂತೋಷದಿಂದ ತೇಲಾಡುತ್ತಾ ಇತ್ತು.

ಆದರೆ, ಅದಕ್ಕೆ ಒಂದೇ ವ್ಯಥೆ ಆಗಿದ್ದೆಂದರೆ, ಅದಕ್ಕೆ ತಿನ್ನಲು ಯಥೇಚ್ಛವಾಗಿ ಬಾಳೆಹಣ್ಣನ್ನು ಮಾತ್ರ ಕೊಡುತ್ತಿದ್ದರು. ಒಂದೆರಡು ದಿನ ನೋಡಿತು, ಬೇರೆ ಏನಾದರೂ ಕೊಡುತ್ತಾರೇನೋ ಅಂತ. ಆದರೆ, ಹೀಗೆ ಒಂದು ವಾರ ಕಳೆದರೂ ಅದಕ್ಕೆ ಬರೀ ಬಾಳೆಹಣ್ಣನ್ನು ಮಾತ್ರ ಕೊಟ್ಟಿದ್ದಕ್ಕೆ ತುಂಬಾ ಸಿಟ್ಟು ಮಾಡಿಕೊಂಡು ಗುರ್ ಗುಟ್ಟುತ್ತಿತ್ತು....

ಇನ್ನು ತಡೆಯಲು ಆಗಲ್ಲವೆಂದು ಅದರ ಹಿರಿಯ ಅಧಿಕಾರಿ ಬಳಿಗೆ ಹೋಗಿ– ನನ್ನನ್ನು ಏನು ಅಂದುಕೊಂಡಿದ್ದೀರಾ. ನಾನು ಸಿಂಹ, ಭಾರತದಲ್ಲಿ ಕಾಡಿನ ರಾಜನಾಗಿ ಮೆರೀತಿದ್ದೆ. ಅಲ್ಲಿ ನನಗೆ ದಿನಾಲೂ ತಿನ್ನುವುದಕ್ಕೆ ಆಡು, ಜಿಂಕೆ, ಮುಂತಾದ ಪ್ರಾಣಿಗಳ ಮಾಂಸ ಸಿಗುತ್ತಿತ್ತು. ಇಲ್ಲಿ ನೋಡಿದರೆ ನನಗೆ ದಿನಾಲು ಕೋತಿಗಳಿಗೆ ಕೊಡುವ ಹಾಗೆ ಬಾಳೆಹಣ್ಣನ್ನು ಮಾತ್ರ ಕೊಡುತ್ತಿದ್ದೀರಾ ಎಂದು ಸಿಟ್ಟಿನಿಂದ ಕೇಳಿದಾಗ, ಆ ಅಧಿಕಾರಿಯು ಸಂಯಮದಿಂದ – ಹೌದು, ನೀನು ಹೇಳಿದ್ದು ಸರಿ, ನಿನಗೆ ದಿನಾ ನಾವು ಕೋತಿಗಳಿಗೆ ಕೊಡುವ ಬಾಳೆಹಣ್ಣನ್ನೇ ಕೊಡುತ್ತಿದ್ದೇವೆ. ಯಾಕೆಂದರೆ......, ನೀನು ನಮ್ಮ ದೇಶಕ್ಕೆ ಬಂದಿರುವುದೇ ಕೋತಿಗೆ ಮೀಸಲಿದ್ದ ವೀಸಾದಲ್ಲಿ. ಅದರಿಂದ, ನಾವು ಬೇರೇನೂ ಕೊಡಲು ಸಾಧ್ಯವಿಲ್ಲ ಎಂದು ಖಡಾಖಂಡಿತವಾಗಿ ಹೇಳಿದಾಗ, ಅಯ್ಯೋ... ದುರ್ವಿಧಿಯೇ ಎಂದು ಜೋರಾಗಿ ಗರ್ಜಿಸಿ ಸುಮ್ಮನಾಯಿತು.....!

"**ನಾನು ಜವಾಬ್ದಾರನಲ್ಲ....!** "

ಒಮ್ಮೆ ಅಗಸನೊಬ್ಬ ತನ್ನ ಕತ್ತೆಯ ಮೇಲೆ ಅಪಾರ ಹೊರೆಯನ್ನು ಹೊರಿಸಿ ರಸ್ತೆಯಲ್ಲಿ ನಡೆದು ಹೋಗುತ್ತಿದ್ದನು. ಆಗ ಅವನಿಗೆ ಹಸಿವು, ಬಾಯಾರಿಕೆಯಾಗಿದ್ದರಿಂದ, ಅವನು ಕತ್ತೆಯನ್ನು ಒಂದು ಬದಿಗೆ ನಿಲ್ಲಿಸಿ, ತಾನು ಮಾತ್ರ ಪಕ್ಕದಲ್ಲಿದ್ದ ಹೋಟೆಲ್‌ಗೆ ತಿನ್ನಲು ಹೋದನು. ಇದನ್ನು ಗಮನಿಸುತ್ತಿದ್ದ ಓರ್ವನು, ಆ ಕತ್ತೆಯ ಬಳಿ ಬಂದು –ನಿನ್ನನ್ನು ನೋಡಿದರೆ ಅಯ್ಯೋ ಪಾಪ ಅನ್ಸುತ್ತೆ, ನಾನು ಸಹ ಪಕ್ಕದ ಊರಿನ ಅಗಸ. ನೀನು ನನ್ನ ಜೊತೆಗೆ ಬರುತ್ತೀಯಾ ? ನಿನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತೀನಿ ಎಂದಾಗ, ಆ ಕತ್ತೆಯು ಕ್ಷಣ ಕಾಲ ಯೋಚಿಸಿ, ಆನಂತರ – ಇಲ್ಲಪ್ಪ ನಾನೇನು ನಿನ್ನ ಜೊತೆಗೆ ಬರುವುದಿಲ್ಲ, ನೀವೇನು ನನ್ನನ್ನು ಸಿಂಹಾಸನದ ಮೇಲೆ ಕೂರಿಸುತ್ತೀರಾ? ಇಲ್ಲವಲ್ಲ, ಇದೇ ಹೊರೆ ಹೊರುವ ಚಾಕರಿಗೆ ತಾನೇ ನನ್ನನ್ನು ಬಳಸುತ್ತೀರಾ ಎಂದಾಗ, ಅವನು ನಿರ್ವಾಹವಿಲ್ಲದೆ –"ನಿನ್ನ ಹಣೆಬರಹ" ಎಂದು ಹೇಳಿ ಅಲ್ಲಿಂದ ನಿರ್ಗಮಿಸಿದನು.

ಈಗ ಹೇಳಿ ಕೇಳಿ ಚುನಾವಣೆ ಹತ್ತಿರವಾಗುತ್ತಿರುವ ಸಮಯ. ಇಲ್ಲಿ ನಿಮಗೆ

ಅಗಸ ಎಂದರೆ " ಸರ್ಕಾರ ", ಕತ್ತೆ ಎಂದರೆ " ಮತದಾರ ", ಹೊರೆ ಎಂದರೆ " ಏರುತ್ತಿರುವ ಅಗತ್ಯ ವಸ್ತುಗಳ ದರಗಳು, ತೆರಿಗೆಗಳು, ಇತ್ಯಾದಿ.." ಎನಿಸಿದರೆ ನಾನು ಜವಾಬ್ದಾರನಲ್ಲ.....!

"**ಅಯ್ಯೋ...ಹೀಗಾಗ್ಬಿಟ್ರೆ**..? "

ನ್ಯಾಯಾಧೀಶರು ಕಳ್ಳನ ಹತ್ತಿರ-(ಎದುರಿನಲ್ಲಿ ಹ್ಯಾಪ್ ಮೋರೆ ಹಾಕಿ ನಿಂತಿದ್ದವನನ್ನು ತೋರಿಸಿ) ನೀನು ಅವರ ಮನೆಯಲ್ಲಿ 5 ಲಕ್ಷ ರೂಪಾಯಿ ಮತ್ತು 50 ಪೌನು ಚಿನ್ನಾಭರಣವನ್ನು ಕದ್ದದ್ದೀಯಾ ಅಂತ ಈಗ ಒಪ್ಪಿಕೊಳ್ತೀಯಾ? ಎಂದು ಕೇಳಿದಾಗ...

ಕಳ್ಳನು – ಒಪ್ಪಿಕೊಳ್ತೀನಿ ಸ್ವಾಮಿ ಎಂದು ವಿನಮ್ರದಿಂದ ಹೇಳಿದ.

ನ್ಯಾಯಾಧೀಶರು – ಇದಕ್ಕೆ ದಂಡನೆ ಏನು ಅಂತ ಗೊತ್ತಿದ್ಯಾ ? ಎಂದು ಕೇಳಿದಾಗ....

ಕಳ್ಳನು – ಗೊತ್ತು ಸ್ವಾಮಿ, ಆದರೆ ಅದಕ್ಕೆ ಮುಂಚೆ ನಾನು ನಮ್ಮ ಆರ್ಥಿಕ ಸಚಿವರ ಹತ್ತಿರ ಕೆಲವು ಪ್ರಶ್ನೆಗಳನ್ನು ಕೇಳಬೇಕಿದೆ ಎಂದಾಗ,

ನ್ಯಾಯಾಧೀಶರು (ಕುಳಿತಲ್ಲೇ ಹೌಹಾರಿ)-ಏನು ನಮ್ಮ ಫೈನಾನ್ಸ್ ಮಿನಿಸ್ಟರ್ ಹತ್ತಿರಾನ ? ಎಂದು ಕೇಳಿ, ಸರಿ ಅದೇನು ಕೇಳಬೇಕು ಅಂತ ಇದ್ದೀಯಾ ಎಂದು ಕೇಳಿದಾಗ ಕಳ್ಳನು-ಏನಿಲ್ಲಾ ಸಾರ್, ಅದೇ ಕ್ರಿಪ್ಟೋ ಕರೆನ್ಸಿ ಒಂದು ಮೋಸದ ಹಗರಣ, ಅದು ಇದು ಅಂತ ಹೇಳಿ, ಈಗ ಅದರಿಂದ ಬರುವ ಹಣಕ್ಕೆ 30% ಜಿ.ಎಸ್.ಟಿ ಕಟ್ಟಿದ್ರೆ ಸಾಕು ಅಂತ ಹೇಳ್ತಿದ್ದಾರೆ.

ಮತ್ತು ಆನ್ ಲೈನ್ ರಮ್ಮಿ, ಡ್ರಿಮ್ 11 ಮುಂತಾದ ಜೂಜಿನ ತರಹದ ಆಟದಿಂದ ಬರುವ ಹಣಕ್ಕೆ ಜಿ.ಎಸ್. ಟಿ ಕಟ್ಟಿಬಿಟ್ರೆ ಸಾಕು, ಅದು ಜೂಜಲ್ಲ ಅಂತ ಹೇಳ್ತಾರಲ್ಲ, ಹಾಗೆ ಅದೇ ತರಹ, ನಾವುಗಳು ಕದಿಯೋ ಹಣಕ್ಕೆ, ಆಭರಣಗಳಿಗೆ ಎಷ್ಟು ಜಿ.ಎಸ್. ಟಿ ಎಂದು ನಿಗದಿ ಪಡಿಸಲಿ, ಅದನ್ನು ನಾವು ಸಹ ಕಟ್ಟಿಟ್ಟು ಹೊರಗೆ ಬಂದು ಬಿಡುತ್ತೀವಿ ಅಗ ಈ ಕೋರ್ಟ್, ದಂಡನೆ ಅದ್ಯಾವುದು ಬೇಕಾಗಲ್ಲ ಅಲ್ವೇ ಸಾರ್.. ಎಂದಾಗ ನ್ಯಾಯಾಧೀಶರು ಇದನ್ನು ಕೇಳುತ್ತಲೇ ಸುಸ್ತಾಗಿ, ನಂತರ ಇವನು ಹೇಳೋದರಲ್ಲೂ ಅರ್ಥವಿದೆ ಎಂದು ಒಂದು ಕ್ಷಣ ಅನಿಸಿದರೂ...ಅಯ್ಯಯ್ಯೋ, ಹೀಗೆಲ್ಲಾ ಆಗ್ಬಿಟ್ರೆ ಈ ದೇಶದ ಗತಿ ಏನು ಎಂದು ಸೀರಿಯಸ್ಸಾಗಿ ಚಿಂತಿಸ ತೊಡಗಿದರು.

"**ಸೊಳ್ಳೆ (ಮುದ್ದಣ್ಣ– ಮನೋರಮೆಯ) ಸಲ್ಲಾಪ**"

ತನ್ನ ಮನದನ್ನೆಯನ್ನು ಆದಷ್ಟು ಬೇಗ ನೋಡಬೇಕೆಂದು ಉತ್ಸಾಹದಿಂದ ಮನೆಗೆ ಬಂದು – ಏ ನನ್ನ ಮನದರಸಿಯೇ, ನೀನು ಇವತ್ತು ಎಷ್ಟು ಚೆನ್ನಾಗಿ ಕಾಣುತ್ತಿದ್ದೀಯಾ, ನಾನು ನಿನಗಾಗಿ ಸಿಂಹವನ್ನು ಕೊಂದು ನಿನ್ನ ಕಾಲಡಿಯಲ್ಲಿ ಇರಿಸಲೆ ಎಂದು ಗಂಡು ಸೊಳ್ಳೆಯು ಕೇಳಿದಾಗ,

ಹೆಣ್ಣು ಸೊಳ್ಳೆಯು–ಈಗಾಗಲೇ ಹೊತ್ತಾಗಿದೆ, ಬೇಗ ಹೋಗಿ ಮಲಗು ಎಂದಿತು, ಮತ್ತೆ ಆ ಗಂಡು ಸೊಳ್ಳೆಯು–ಅದು ಬೇಡವೆಂದರೆ, ಸೊಕ್ಕಿದ ಆನೆಯನ್ನು ಹೊಸಕಿ ನಿನ್ನ ಮುಂದೆ ನಿಲ್ಲಿಸಲೇ..! ಎಂದು ಕೇಳಿದಾಗ...

ಆ ಹೆಣ್ಣು ಸೊಳ್ಳೆಯು–ಆಗಲೇ ಹೇಳಿದನ್ನಲ್ಲಾ ಹೋಗಿ ಮಲಗಿಕೊ ಎಂದಿತು.

ಆಗ ಆ ಗಂಡು ಸೊಳ್ಳೆಯು–ನಿನ್ನನ್ನು ಹೊಸ ಮರ್ಸಿಡಿಸ್ ಬೆನ್ಜ಼್ ಕಾರಿನಲ್ಲಿ ಕೂರಿಸಿ ಇಡೀ ನಗರವನ್ನೆಲ್ಲಾ ಸುತ್ತಾಡಿಸಲಾ ಎಂದು ಕೇಳಿದಾಗ...

ಆ ಹೆಣ್ಣು ಸೊಳ್ಳೆಯು–ಎಷ್ಟು ಸರ್ತಿ ನಿನಗೆ ಹೇಳಬೇಕು ಸುಮ್ಮನೆ ಹೋಗಿ ಮಲಗಿಕೊ, ಬೆಳಿಗ್ಗೆ ಮಾತಾಡೋಣ ಎಂದಾಗಲೂ, ಆ ಗಂಡು ಸೊಳ್ಳೆಯು–ಚಿನ್ನಾ, ನಿನಗೆ ವಜ್ರದ ಕಂಠೀಹಾರವನ್ನು ತಂದು ಕೊಡಲೇ ಎಂದು ಮತ್ತೆ ಕೇಳಿದಾಗ.... ಆ ಹೆಣ್ಣು ಸೊಳ್ಳೆಯು–ನನ್ನ ತಾಳ್ಮೆಗೂ ಮಿತಿಯಿದೆ, ಕೊನೆಯ ಬಾರಿ ಹೇಳ್ತಿದ್ದೇನೆ, ಹೋಗಿ ಮಲಕ್ಕೊ ಎಂದಾಗಲೂ, ಆ ಗಂಡು ಸೊಳ್ಳೆಯು–ಅದು ಇಷ್ಟವಾಗದಿದ್ದರೆ, ಬಂಗಾರದ ನೆಕ್ಲೇಸ್, ಬಂಗಾರದ ಬಳೆಗಳು, ಅಷ್ಟೇ ಯಾಕೆ ಬಂಗಾರದ ತೆಳು ಸೀರೆಯನ್ನೇ ತಂದು ಕೊಡುವೆ ಎಂದಾಗ ಮಾತ್ರ.....

ಆ ಹೆಣ್ಣು ಸೊಳ್ಳೆಯು ತಾಳ್ಮೆಗೆಟ್ಟು ಜೋರಾಗಿ ಆ ಗಂಡು ಸೊಳ್ಳೆಯ ಕೆನ್ನೆಗೆ ಬಾರಿಸಿ – ನಾನು ನಿನಗೆ ಎಷ್ಟು ಸರ್ತಿ ಹೇಳಿದ್ದೇನೆ, ಆ ಬೊಗಳೆ, ಬರೀ ಸುಳ್ಳು ಆಶ್ವಾಸನೆ ಕೊಡುವ ಮಂತ್ರಿಯನ್ನು ಕಚ್ಚಿ ಅವನ ರಕ್ತ ಹೀರಿದ ಮೇಲೆ ಹೀಗೆಲ್ಲಾ ನನ್ನ ಮುಂದೆ ಅವನು ಆ ಅಮಾಯಕ ಜನರ ಮುಂದೆ ಹೇಳುವ ಹಾಗೆ ನನ್ನ ಮುಂದೆ ಹೇಳಬೇಡ ಎಂದು ಹೇಳಿಲ್ವಾ ? ಎಂದಾಗ, ಆ ಗಂಡು ಸೊಳ್ಳೆಯು ಬಾಲ ಮುದುರಿಕೊಳ್ಳುವಂತೆ, ತನ್ನ ರೆಕ್ಕೆ ಮುದುರಿಕೊಂಡು ಬೆಡ್ ರೂಮ್ ಕಡೆ ಕೆನ್ನೆ ಸವರಿಕೊಳ್ಳುತ್ತಾ ಹೋಯಿತು....!

■



**ಅಳಿಯಂದ್ರೇ..! ಚುನಾವಣೆ ಪ್ರಚಾರದಲ್ಲಿ ಯಾವುದೂ ಕಡಿಮೆ ಆಗಬಾರದು.! ನೀವು ಆ ಕ್ಷೇತ್ರದಿಂದ ಸೋತರೂ ಪರವಾಗಿಲ್ಲ, ತಿಳೀತಾ !?**

# ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

✍ದಂನಆ

- ✓ ನನಗೆ ಯಾರೂ ಬೇಡ ಎನ್ನುವದಾದರೆ ಅದು ನಿಮ್ಮ ಅಹಂ ತೋರಿಸುತ್ತದೆ. ನನ್ನ ಅಗತ್ಯ ಎಲ್ಲರಿಗೂ ಇದೆ ಎಂದು ಭಾವಿಸಿದರೆ ಅದು ನಿಮ್ಮ ಭ್ರಮೆಯನ್ನು ತೋರಿಸುತ್ತದೆ.
- ✓ ಟುಮಾರೊ ಈಸ್ ಪ್ರಾಮಿಸ್ಡ್ ಟು ನೊಒನ್.
- ✓ ಹಣ್ಣು ನಮಗೆ ಕಾಣುತ್ತದೆ. ಆದರೆ ಅದಕ್ಕೆ ಕಾರಣವಾದ ಬೇರು ನಮಗೆ ಕಾಣಿಸುವುದೇ ಇಲ್ಲ.
- ✓ ನಿಮ್ಮ ಕಲಹಗಳ ಬಗ್ಗೆ ಎಚ್ಚರವಿರಲಿ. ಎಲ್ಲ ಸಮಸ್ಯೆಗಳನ್ನೂ ಕಲಹಗಳನ್ನಾಗಿ ಮಾಡಿಕೊಳ್ಳದಿರಿ.
- ✓ ಎಂಬ್ರೇಸ್ ದಿ ಮೆಸ್. ವಿ ಆರ್ ಆಲ್ ಅಂಡರ್ ಕನ್‌ಸ್ಟ್ರಕ್ಷನ್.
- ✓ ಯಾವ ಮದುವೆಯೂ ಹೊರಗಿನ ಪ್ರಪಂಚಕ್ಕೆ ಅರ್ಥವಾಗುವುದಿಲ್ಲ. ಏಕೆಂದರೆ ಪ್ರತಿ ಮದುವೆಯೂ ಒಂದು ಪ್ರಪಂಚ.
- ✓ ಸ್ಟೆ ವೇರ್ ಯುವರ್ ಪ್ರೆಸೆನ್ಸ್ ಈಸ್ ವಾಲ್ಯೂಡ್ ಅಂಡ್ ಆ್ಯಬ್ಸೆನ್ಸ್ ನೋಟೀಸ್ಡ್.
- ✓ ಜನಸಂದಣಿಯ ಜತೆ ನಡೆಯುವವನು ಅದು ಹೋದಷ್ಟು ದೂರ ಮಾತ್ರ ನಡೆಯುತ್ತಾನೆ. ಒಬ್ಬನೇ ನಡೆಯುವವನು ಇತರರು ನೋಡಿಲ್ಲದ ಜಾಗಗಳಿಗೆ ಹೋಗಲು ಸಾಧ್ಯವಾಗುತ್ತದೆ.
- ✓ ಜನಗಳು ಪುಸ್ತಕಗಳಂತೆ. ಕೆಲವರು ರಕ್ಷಾಪುಟದಿಂದ ಮೋಸ ಮಾಡುತ್ತಾರೆ. ಕೆಲವರು ಒಳಅಂಶದಿಂದ ಚಕಿತಗೊಳಿಸುತ್ತಾರೆ.
- ✓ ವಿ ಆಲ್ ಹ್ಯಾವ್ ಟು ಲೈವ್ಸ್. ದಿ ಸೆಕೆಂಡ್ ಬಿಗಿನ್ಸ್ ವೆನ್ ವಿ ರೀಯಲೈಸ್ ವಿ ಹ್ಯಾವ್ ಓನ್ಲಿ ಒನ್.
- ✓ ನಿಮ್ಮ ವೃತ್ತಿ ನಿಮಗೆ ಖುಷಿ ಕೊಡಬೇಕೆಂದಿದ್ದರೆ ಅದಕ್ಕಿಂತಲೂ ಕೆಟ್ಟದಾಗಿರುವ ಹವ್ಯಾಸವನ್ನು ಆರಿಸಿಕೊಳ್ಳಿ.
- ✓ ನಾನು ಯಶಸ್ಸಿನ ಬಗ್ಗೆ ಕನಸು ಕಾಣಲಿಲ್ಲ. ಅದಕ್ಕಾಗಿ ದುಡಿದೆ.
- ✓ ದಿ ಬೆಸ್ಟ್ ಟೀಚರ್ಸ್ ಆರ್ ದೋಸ್ ಹು ಶೊ ಯು ವೇರ್ ಟು ಲುಕ್ ಬಟ್ ಡೋಂಟ್ ಟೆಲ್ ಯು ವಾಟ್ ಟು ಸೀ.
- ✓ ಬೇಲಿಯನ್ನು ಯಾಕೆ ಹಾಕಿದ್ದರು ಎಂಬುದನ್ನು ಅರ್ಥಮಾಡಿಕೊಳ್ಳದೇ ಅದನ್ನು ಕೆಡವಲು ಹೋಗದಿರಿ.
- ✓ ದಾನ ಮಾಡಿ ಯಾರೂ ಬಡವರಾಗಿಲ್ಲ.
- ✓ ವಾಟ್ ಈಸ್ ದಿ ಕಲರ್ ಆಫ್ ಬ್ಯೂಟಿ?

■

# "ಬಾಂಬೆ –ಮಾಮಾ"

**✍ಅರವಿಂದ. ಜಿ. ಜೋಷಿ**

ಬೆಳಗಿನ ಸ್ನಾನಾದಿ ಪೂರೈಸಿ, ನೀಟಾಗಿ ಡ್ರೆಸ್ ಮಾಡಿಕೊಂಡು ಉಪಹಾರ ಸೇವಿಸಲು ಡೈನಿಂಗ್ ಟೇಬಲ್ ಬಳಿ ಪರಮೇಶಿ ಬರುವಷ್ಟರಲ್ಲಿ ಆತನ ಸೆಲ್ ಫೋನ್ ರಿಂಗಣಿಸಿತು. ಅಲ್ಲಿಯೇ ಇದ್ದ ಆತನ ಅರ್ಧಾಂಗಿ ಪಮ್ಮೀ, ತೆಗೆದು ನೋಡಿದಳು ಪರಮೇಶ್‌ನ ಬಾಸ್‌ನಿಂದ ಕಾಲ್ ಬಂದಿತ್ತು. "ಯಾರ ಫೋನ್.. ಎನ್ನುತ್ತ ಅಲ್ಲಿಗೆ ಬಂದವನಿಗೆ "ನಿಮ್ಮ ಬಾಸ್.." ಎಂದು ಪಿಸುಗುಡುತ್ತ ಆತನ ಕೈಗೆ ಫೋನ್ ಕೊಟ್ಟಳು. ಅದನ್ನು ಕಿವಿಗೆ ಮೆತ್ತಿಕೊಂಡ ಪರಮೇಶಿ "ಗುಡ್ ಮಾರ್ನಿಂಗ್ ಸಾರ್.." ಎಂದ. ಆ ಬದಿಯಿಂದ ಆತನ ಬಾಸ್ –"ಗುಡ್ ಮಾರ್ನಿಂಗ್ ಕಣ್ರೀ... ಏನಿಲ್ಲಾ ನಾವು ಹೊಸಾ ಪ್ರಾಜೆಕ್ಟ್ ಇಂಪ್ಲಿಮೆಂಟ್ ಮಾಡಬೇಕೆಂದಿದ್ದೆವಲ್ಲ ಅದರ ಬಗ್ಗೆ ಡಿಸ್ಕಶನ್ ಮಾಡೋಕೆ ಹೆಡ್ ಆಫೀಸ್‌ನಿಂದ ಟೀಮ್, ಇನ್ನೇನು ಹನ್ನೊಂದು ಗಂಟೆ ಬರೊ ಫ್ಲೇನ್‌ನಲ್ಲಿ ಬರ್ತಿದ್ದಾರೆ., ನೀವು ಸೀದಾ ಏರ್ಪೋರ್ಟ್‌ಗೆ ಹೋಗಿ ಅವರನ್ನು ರಿಸೀವ್ ಮಾಡಿ ಒಳ್ಳೆ ಹೊಟೇಲ್ ಗೆ ಕಕೊರ್ಂಡು ಬಂದು ಚೆನ್ನಾಗಿ ನೋಡ್ಕೊಳ್ಳಿ. ಅವರು ಇಂದು ಇಲ್ಲೇ ಸ್ಟೇ ಮಾಡಿ ನಾಳೆ ರಿಟರ್ನ್ ಆಗ್ತಾರೆ..ಅರ್ಥ ಆಯ್ತಲ್ಲ" ಎಂಬ ಸೂಚನೆ ಬರುತ್ತಿದ್ದಂತೆ ಪರಮೇಶಿ ಆಯ್ತು ಸಾರ್, ಓ ಕೆ ಸಾರ್ ಎಂದು ಉತ್ತರಿಸಿ ಕಾಲ್ ಕಟ್ ಮಾಡಿ ಒಮ್ಮೆ ಗಡಿಯಾರದತ್ತ ದೃಷ್ಟಿ ಹಾಯಿಸಿದವ "ಓ ಮೈ ಗಾಡ್..! ಹತ್ತು ಗಂಟೆ ಆಗ್ತಾ ಬಂದು" ಎಂದು ಅಂದು ಕೊಳ್ಳುತ್ತ ಬಾಸ್ ನಿಂದ ಬಂದ ಸಂದೇಶ ಸಂಕ್ಷೇಪವಾಗಿ ಪಮ್ಮೀಗೆ ತಿಳಿಸಿ, ಆಕೆ ತಂದಿಟ್ಟ ಉಪ್ಪಿಟ್ಟನ್ನು ಅರ್ಧ ಮರ್ಧ ತಿಂದು ಹೊರಟು ನಿಂತಾಗ, ಆಕೆ ಕೈಯಲ್ಲಿ ಲಂಚ ಬಾಕ್ಸನೊಂದಿಗೆ ಬಂದು "ರೀ. ಇದು.."ಎಂದಾಗ ಗಡಿಬಿಡಿಯಲ್ಲಿದ್ದಾತ "ಏನೂ ಬೇಡಾ ಕಣೆ ನೀನೇ ಮಧ್ಯಾಹ್ನ ಕ್ಕೆ ತಿನ್ಕೊ"ಎಂದಷ್ಟೇ ಹೇಳಿ ಕಾರು ಏರಿ ಹೊರಟು ಹೋದ.

ಪೂರ್ವ ಯೋಜನೆಯಂತೆ ,ಹೆಡ್ ಆಫೀಸ್ ನಿಂದ ಬಂದ ಟೀಂ ನವರನ್ನು ಏರ್ಪೋರ್ಟ್‌ನಿಂದ ಕರೆತಂದು ನಗರದ ಪ್ರತಿಷ್ಠಿತ ಹೋಟೆಲ್‌ಗೆ ಕರೆದೊಯ್ದು ಅವರ ಸ್ನಾನ, ಉಪಹಾರ ದ ನಂತರ ಕಂಪನಿ ಕಚೇರಿಗೆ ಕರೆತಂದ.ಅಲ್ಲಿ ವಿಷಯಕ್ಕೆ ಸಂಬಂಧಿಸಿದ ಸಿಬ್ಬಂದಿ ಪರಿಚಯದ ಬಳಿಕ ಮೊದಲು ಸುತ್ತಿನ ಚರ್ಚೆ ಮುಗಿದಾಗ ಮಧ್ಯಾಹ್ನದ ಎರಡಾಗಿತ್ತು. ಅವರನ್ನೆಲ್ಲ ಊಟಕ್ಕೆ ಕರೆದೊಯ್ದು ವಾಪಸ್ ಬರುವಾಗ ಪರಮೇಶಿ ಫೋನ್ ರಿಂಗಣಿಸಿತು. ನೋಡಿದ ಯಾವದೋ ಹೊಸ ನಂಬರ್ ಇತ್ತು. ಆನ್ ಮಾಡಿ" ಹಲ್ಲೊ... ಎಂದ. ಆಗ ಆಬದಿಯಿಂದ "ಏನೋ ಪರಮೇಶಿ ಹೆಂಗಿದ್ದೀ..."ಎಂದು ಶಬ್ದ ತೂರಿಬಂದಾಗ ಪರಮೇಶಿ "ಕ್ಷಮಿಸಿ.. ತಾವು ಯಾರೆಂದು ಗೊತ್ತಾಗಲಿಲ್ಲ" ಎಂದ. ಪುನಃ ಆ ಕಡೆಯಿಂದ" ಯಾಕಪ್ಪಾ.. ಪರಮೇಶಿ ಇಷ್ಟ ಲಗೂ ನನ್ನ ಮರ್ತುಬಿಟ್ಯಾ..., ನಾನು ತ್ರಿವಿಕ್ರಮ ಪಟವರ್ಧನ್.. ನಿನ್ನ ತಾಯಿ ಸೊದರತ್ಯಾನ ಮಗಾ,.. ಎಲ್ಲಾರೂ ನನ್ನ ಬಾಂಬೆ ಮಾಮಾ ಅಂತಾರ, ಈಗ ಮತ್ ಹದಿನೈದು ವರ್ಷಾ ಆತು ನಿನ್ನ ನೋಡಿ, ಆಗ ಭಾಳ ಸಣ್ಣಾವ ಇದ್ದೀ.. ನಿನಗರಾ ಹೆಂಗ ನೆನಪಿರಬೇಕು ಬಿಡು, ನಿನ್ನ ಮದುವಿ ಟೈಂ ನ್ಯಾಗ...ನನಗ, ಯಾವ್ಯಾವುದೋ ಕೆಲ್ಸಾ ಬಂದಿತ್ತು ಹಂಗಾಗಿ ನಿನ್ನ ಮದುವಿಗಿ ಸರ್ತ ಬರ್ಲಿಕ್ಕೆ ಆಗ್ಲಿಲ್ಲ ನೋಡಪ್ಪಾ, ಇಂಥ ಒಂದ ದಿನದ ಮಟ್ಟಿಗೆ ಬೆಂಗಳೂರಾಗ ಕೆಲ್ಸ ಇತ್ತು, ಹಾಂಗ ನಿನ್ನ ನೋಡಿ ಮಾತಾಡ್ಸಕೊಂಡು ಹೋಗುಣಂತ ಬಂದೀನಿ,, ಅಂದ್ಹಾಂಗ ನೀ ಮನಿ ಎಲ್ಲಿ ಮಾಡಿದೀ ಅದರ ಅಡ್ರೆಸ್ ಕೊಡು ಸಂಜೀಮುಂದ ಕೆಲ್ಸಾ ಆದ ಮ್ಯಾಲೆ ಎಲ್ಲಾ ಕೂತ ಮಾತಾಡೋಣ, ಗೊತ್ತಾತಾ.. ಹಾಂ... ಪರಮೇಶ್ ಹಂಗ ನಿಮ್ಮ ಮನಿಯಾಕಿಗೂ ಫೋನ್ ಮಾಡಿ ಒಂದು ಮಾತು ಹೇಳಿರಪ್ಪಾ..ಯಾಕಂದ್ರ

ನಾ ಅಲ್ಲಿ ಹೋಗೂದು ಆಕೀ ಗಾಬರಿ ಬೀಳ್ಬಾರ್ದು ನೋಡು..... ಎಂದು ಕನಿಷ್ಠ ಹತ್ತು ನಿಮಿಷಗಳ ಕಾಲ ಕೊರೆದ ನಂತರ, ಗಡಿಬಿಡಿಯಲ್ಲಿದ್ದ ಪರಮೇಶಿ "ಆಯ್ತು ಮಾಮಾ.. ಸಧ್ಯಕ್ಕೆ ನಾನು ತುಂಬಾ ಬ್ಯುಸಿ ಆಗಿದ್ದೇನೆ, ನೀವೇನು ಚಿಂತೆ ಮಾಡಬೇಡಿ, ನನ್ನವಳಿಗೆ ಫೋನ್ ಮಾಡಿ ಹೇಳ್ತೀನಿ ನೀವು ಆರಾಮಾಗಿ ಹೋಗೀರಿ.. ನಾನು ಎಲ್ಲಾ ಕೆಲ್ಸಾ ಮುಗ್ದ ಮೇಲೆ ಸಂಜೆ ಮನೆಗೆ ಬರ್ತೇನೆ ಆಗ ಕೂತು ಮಾತಾಡೋಣ" ಎಂದು ಕಾಲ್ ಕಟ್ ಮಾಡಿದ.

ಹೊಸದಾಗಿ ಮದುವೆ ಆದವರ ಮನೆಗೆ ಬರಿ ಕೈಯಲ್ಲಿ ಹೋಗಬಾರದೆಂದು ಬಾಂಬೇ ಮಾಮಾ ಮಾರ್ಕೇಟ್‌ಗೆ ಬಂದವ ಸುಮಾರು ಐದಾರು ಸಾವಿರ ಬೆಲೆ ಬಾಳುವ ಆಕರ್ಷಕ ಮೂಗುತಿ ಖರೀದಿಸಿ, ರಿಕ್ಷಾ ಮೂಲಕ ಆತ ಪರಮೇಶಿ ಮನೆಗೆ ಬಂದಾಗ ಸಂಜೆ ನಾಲ್ಕು ಆಗಿತ್ತು. ಪರಮೇಶ್ ಮೊದಲೇ ತನ್ನ ಪತ್ನಿಗೆ ಫೋನ್ ಮಾಡಿದ್ದರಿಂದ ನಗುಗುತ್ತಲೇ ಪಮ್ಮೀ ಆತನನ್ನು ಬರಮಾಡಕೊಂಡಳು ಬಾಂಬೆ ಮಾಮಾ ಫ್ರೇಶಪ್ ಆಗಿ ಬಂದ ನಂತರ ಆತನಿಗೆ ಕಾಫಿ ತಿಂಡಿ ಕೊಟ್ಟು ಅದು ಇದೂ ಮಾತನಾಡುತ್ತ ಕುಳಿತಾಗ ಪಕ್ಕದ ಮನೆಯ ಐದು ವರ್ಷದ ಮಗು ಬಂದು "ಆಂಟೀ.. ಮತ್ತೆ..ಅಮ್ಮಾ ನಿಮ್ಮನ್ನ ಕುಂಕುಮ ಇಟ್ಟುಕೊಂಡು ಹೋಗೊಕೆ ಕೂಗುತ್ತಿದ್ದಾರೆ ಬರ್ಬೇಕಂತೆ "ಎಂದು ಹೇಳಿ ಓಡಿ ಹೋಯಿತು.ಕೆಲ ನಿಮಿಷಗಳ ನಂತರ ಪಮ್ಮೀ –"ಮಾಮಾ.. ನೀವು ರೆಸ್ಟ ಮಾಡ್ತಾ ಇರಿ.. ನಾನು ಪಕ್ಕದ ಮನೆಗೆ ಹೋಗಿ ಕುಂಕುಮ ಇಟ್ಟುಕೊಂಡು ಬರ್ತೇನೆ" ಎಂದು ಬಾಗಿಲು ಮುದೆಳೆದುಕೊಂಡು ಹೊರಟು ಹೋದಳು.ಸುಮಾರು ಇಪ್ಪತ್ತು ನಿಮಿಷಗಳ ನಂತರ ಆಕೆ ಬಂದಾಗ ಬಾಂಬೆ ಮಾಮ ತುಂಬಾ ಸಪ್ಪಗೆ ಕುಳಿತಿದ್ದನ್ನು ಕಂಡು ಕುತೂಹಲದಿಂದ ನಮ್ಮೀ "ಯಾಕೆ.. ಮಾಮಾ ಒಂಥರಾ ಇದ್ದೀರಲ್ಲ..? ಏನಾಯ್ತು?"ಎಂದು ಕೇಳಿದಾಗ ಆತ "ನೀ ಬಾಜೂ ಮನಿಗೆ  ಹೋದಮ್ಯಾಲೆ ನನ್ನ ಮಗ ಫೋನ್ ಮಾಡಿ ಅರ್ಜೆಂಟಾಗಿ ಬಾ..ಯಾಕಂದ್ರ ಅವನ ತಾಯಿ ಈಗ ಮಹಡಿ ಮೆಟ್ಟಿಲಿನಿಂದ ಜಾರಿ ಬಿದ್ದಾಳ, ಆಸ್ಪತ್ರೆಗೆ ಅಡ್ಮಿಟ್ ಮಾಡ್ತೀವಿ" ಅಂತ ಫೋನ್ ಮಾಡಿದ್ದ, ಅದಕ್ಕ ನಾನು ಆರು ಘಂಟೆ ಬಸ್ಸಿಗೆ ವಾಪಸ್ ಹೋಗ್ತಿದ್ದೀನಿ.. ಪರಮೇಶಿ ಗೆ ಹೇಳಿಬಿಡವ್ವಾ.., ಮತ್ಯಾವಾಗಾದ್ರೂ ಬಂಂದಾಗ ಬರ್ತೀನಿ" ಎನ್ನುತ್ತ ಅವಳ ಕೈಯಿಂದಲೇ ಆಟೋ ತರಿಸಿಕೊಂಡು ಹೊರಟು ಹೋದ.

ಆತ ಹೋಗಿ ಹತ್ತಾರು ನಿಮಿಷದಲ್ಲೆಲ್ಲ ಪರಮೇಶಿ ಆಗಮನವಾಯಿತು. "ಎಲ್ಲಿ ಮಾಮಾ.." ಎಂದು ಹೆಂಡತಿಗೆ ಕೇಳಿದಾಗ ಆಕೆ ಅರ್ಧ ಗಂಟೆ ಹಿಂದೆ ನಡೆದ ವಿಚಾರ ಆತನಿಗೆ ತಿಳಿಸಿದಾಗ ಆತನೂ" ಛೇ..ಪಾಪ "ಎಂದು ಕನಿಕರ ವ್ಯಕ್ತಪಡಿಸಿದ.

ಪರಮೇಶಿ ಫ್ರೇಶಪ್ ಆಗಿ ಬಂದ ನಂತರ ಆತನಿಗೆ ಕಾಫೀ ತಿಂಡಿ ಕೊಟ್ಟಾದ ಬಳಿಕ ಬಾಂಬೆ ಮಾಮಾ ತನಗೊಂದು ಮೂಗುತಿ ಉಡುಗೋರೆ ಕೊಟ್ಟಿದ್ದಾರೆ ಎಂದು ಹೇಳಿ ಅದನ್ನು ಆತನಿಗೆ ತೋರಿಸಲು ರೂಮಿಗೆ ಬಂದು ಬೀರು ತೆಗೆದು ನೋಡುತ್ತಾಳೆ..ಆತ ಕೊಟ್ಟ ಉಡುಗೋರೆ ಜೊತೆಗೆ ಅಲ್ಲಿನ ಲಾಕರ್ ನೊಳಗೆ ಇಟ್ಟಿದ್ದ ಸುಮಾರು ಐದಾರು ಲಕ್ಷ ಬೆಲೆ ಬಾಳುವ ಚಿನ್ನಾಭರಣಗಳಲ್ಲವಲದೇ ನಗದು ಮೂವತ್ತು ಸಾವಿರ ರೂಪಾಯಿ ಕೂಡ ಮಾಯವಾಗಿತ್ತು. ಗಾಬರಿಗೊಂಡು ಓಡಿ ಬಂದು ಪಮ್ಮೀ ಪರಮೇಶಿಗೆ ತಿಳಿಸಿದಾಗ ಆತನಿಗೂ ಎಲ್ಲಿಲ್ಲದ ಶಾಕ್ ಆಯಿತು. ತಕ್ಷಣ ಆತ ಪರ ಊರಲ್ಲಿದ್ದ ಅಣ್ಣನಿಗೆ ಫೋನಾಯಿಸಿ ಈ ಬಾಂಬೆ ಮಾಮಾ ನಾ ಬಗ್ಗೆ ವಿಚಾರಿಸಿದಾಗ "ಅಲ್ವೋ... ಆತ ಸತ್ತು ಆಗಲೇ ಐದಾರು ವರ್ಷ ಕಳೀತಾ ಬಂತೂ" ಎಂಬ ಉತ್ತರ ಕೇಳಿಸಿಕೊಂಡ ಪರಮೇಶಿ "ಬಿದ್ದೆ ನಾ ಹಳ್ಳಕ್ಕೆ"

ಎಂದು ಹತಾಶನಾಗಿ ಕೂಗಾಡತೊಡಗಿದ.

■

# ‘ವಿವಿ’ ಕೊಟ್ಟರೂ ‘ವಿನಿ’ ಕೊಡ–ವಿಘ್ನೇಶ್ವರನ ಪರದಾಟ!

✍ ಡಾ. ಗಣೇಶ ಎಸ್. ಹೆಗಡೆ

‘ವಿಘ್ನೇಶ್ವರ’ ಹಲವಾರು ವರ್ಷಗಳಕಾಲ ಕಷ್ಟಪಟ್ಟು ಅಂತೂ ಪಿ.ಎಚ್ಡಿ. ಮುಗಿಸಿದಾಗ– ‘ಮದುವೆ ಮಾಡಿ ನೋಡು, ಮನೆ ಕಟ್ಟಿನೋಡು’ ಗಾದೆಗೆ, “ಪಿ.ಎಚ್ಡಿ. ಮಾಡಿನೋಡು” ಎಂಬುದೊಂದನ್ನು ಸೇರಿಸಲೇಬೇಕಿತ್ತು ಅಂತ ಅಂದುಕೊಂಡ. ಪಿಎಚ್ಡಿಯ ವೈವಾ (Viva) ಪರೀಕ್ಷೆಯೂ ಮುಗಿದಮೇಲೆ, ಆ ಪದವಿ–ಪ್ರಮಾಣಪತ್ರ ಇನ್ನೇನು ಸಿಕ್ಕೇಬಿಟ್ಟಿತು ಅಂದುಕೊಂಡಿದ್ದ. ತಿಂಗಳಾದರೂ ಯಾವ ಪತ್ರವೂ ಬಾರದಿದ್ದಾಗ, ಯುನಿವರ್ಸಿಟಿಯ ತನ್ನ ವಿಭಾಗದ ಸಹಚರರಲ್ಲಿ ವಿಚಾರಿಸಿದಾಗ– ‘ಹೆಚ್ಚೇನು ತಡವಾಗೋದಿಲ್ಲ, ಆದರೆ ಅಭ್ಯರ್ಥಿಯೇ ಬಂದು ತೆಗೆದುಕೊಂಡು ಹೋಗಬೇಕು’ ಎಂದು ಆ ವಿಭಾಗದ ಕಚೇರಿಯಲ್ಲಿ ಹೇಳುತ್ತಿದ್ದಾರೆಂಬ ಮಾಹಿತಿ ಸಿಕ್ಕಿತು.

ಸರಿ ಹಾಗಾದ್ರೆ ಅಂತ ಕಾಲೇಜಿಗೆ ಒಂದು ದಿನದ ಸಿಎಲ್ಲು ಹಾಕಿ ವಿಶ್ವವಿದ್ಯಾಲಯಕ್ಕೆ ಹೊರಟ. ಬೆಳಿಗ್ಗೆ ಬೇಗ ಹೊರಟಿದ್ದರಿಂದ ನೂರಾರು ಕಿಮೀ ಪಯಣಿಸಿಯೂ ಬೆಳಿಗ್ಗೆ 10.30ಕ್ಕೆ ಸರಿಯಾಗಿ ವಿವಿಯ ಕಚೇರಿಯಲ್ಲಿದ್ದ. ಆದರೆ ತನ್ನ ಕಡತದ ವಿಷಯ ನಿರ್ವಾಹಕನಿಗೆ (ಕೇಸ್ವರ್ಕರ್) ದಿನಾ ಬೆಳ್ಗಾಗೋದೇ ಮಧ್ಯಾಹ್ನ 12ರ ಅನಂತರ ಅಂತ ತಿಳಿದು ಕಂಗಾಲಾದ! ವಿಚಾರಿಸಲಾಗಿ ಪಕ್ಕದ ಟೇಬಲ್ಲಿನ ಗುಮಾಸ್ತೆ ಆತನ ಸಹಾಯಕ್ಕೆ ಮುಂದಾದರು. ಆದರೆ ಎಲ್ಲಕ್ಕೂ ಮೊದಲು ಕಂಪ್ಯೂಟರ್ ಆಪರೇಟ್ ಮಾಡುವಾಕೆಯ ಹತ್ತಿರ ಪದವಿ ಪ್ರಮಾಣಪತ್ರದ ಕರಡುಪ್ರತಿಯ ತಿದ್ದುಪಡಿ ಮಾಡಿಸಿಕೊಳ್ಳಬೇಕೆಂದು ತಿಳಿಯಿತು. ಆದರೆ ಆ ‘ಕಂಪ್ಯೂಟರಿಣಿ’ ಬಂದಿಲ್ಲದಿರೋದು ಆಕೆಗೂ ಆಗ಼್ೇ ಗೊತ್ತಾಗಿ ಪಕ್ಕದ ಇನ್ನೊಬ್ಬಳ ಬಳಿ ವಿಚಾರಿಸಿದಾಗ ‘ಏ ಬರ್ತಾರ್ರೀ..... ಹನ್ನೆಲ್ಡೂವರಿ ಆಕೈತಂತ್ ಹೇಳಾರ್ರೀ’ ಅಂತ ಉಲಿದಾಗ– ವರಿ ಮತ್ತು ಉರಿ ಶುರುವಾಗಿದ್ದು ಮಾತ್ರ ವಿಘ್ನೇಶ್ವರನಿಗಾಗಿತ್ತು.

ಇನ್ನಲ್ಲಿ ಕೆಲಸ ಶುರುವಾಗೋದೇ ಅಪರಾಹ್ನದಲ್ಲಿ ಅಂತ ತಿಳಿದ ವಿಘ್ನೇಶ್ವರ ಬೇರೆ ಕೆಲಸವನ್ನಾದ್ರೂ ಮಾಡಿಕೊಂಡ್ರಾಯ್ತು ಅಂತ ಕಾನ್ವೋಕೇಷನ್ ಬಗ್ಗೆ ವಿಚಾರಿಸಲು ಪರೀಕ್ಷಾವಿಭಾಗಕ್ಕೆ ಹೋದ. ರಸಗವಳದ ಆಸ್ವಾದನೆಯಲ್ಲಿದ್ದ ‘ವಿಚಾರಣಾಧೀನ ವ್ಯಕ್ತಿ’ ಅಂದ್ರೆ ‘ವಿಚಾರಣೆ’ ಎಂಬ ಬೋರ್ಡಿಗೆ ಸಂಬಂಧಿಸಿದ ಗಾಜಿನ ಕೋಣೆಯಲ್ಲಿ ತಣ್ಣಗೆ ಕೂತಾತ! ಎರಡು ಬಾರಿ ಕರೆದಾಗಲೇ ಇವನತ್ತ ಪ್ರಯಾಸದಿಂದ ತಿರುಗಿ ಯಾಕಾದ್ರೂ ಬಂದ್ನಪ್ಪ ಈ ಗಿರಾಕಿ ಎಂಬ ಭಾವದಿಂದ, ಕಣ್ಣಲ್ಲೇ ಏನೆಂದು ಹುಬ್ಬನ್ನೇರಿಸಿ ಪ್ರಶ್ನಿಸಿದ? ‘ಕಾನ್ವೋಕೇಷನ್ ಫಾರ್ಮ್ ಎಲ್ಲಿ ಸಿಗ್ತಾವ್ರೀ?’ ಕೇಳಿದ ವಿಘ್ನೇಶ್ವರ. ಸುಂಡಿ ಮೇಲೆತ್ತಿ–‘ಬ್ಯಾಂಕ್ ಬಾಜೂಕ್ರೀ’ ಅಂದು, ತಕ್ಷಣ ಬಾಯಿ ಮುಚ್ಚಿದ, ಆದರೂ ಬಾಯಿಮೂಲೆಯಲ್ಲಿ ಅಸರಿದ ಕೆಂಪುರಸವನ್ನು ಹಾಗೇ ಕೈಯಲ್ಲಿ ಒರೆಸಿಕೊಂಡು ಮತ್ತೆ (ಎಮ್ಮೆಯಂತೆ) ನಿರಾಳವಾಗಿ ಮೆಲುಕಲು ಹಿಡಿದ– ಆ ವಿಚಾರಣಾಧೀನ ವ್ಯಕ್ತಿ!

ಕೆಲಸದ ಗಡಿಬಿಡಿ ಮಧ್ಯೆಯೂ ಕವಳದವನನ್ನು ಕಂಡ ವಿಘ್ನೇಶ್ವರನಿಗೆ ಊರನೆನಪಾಗಿ ಕವಳದ ಕುರಿತೇ ಮನವು ಮೆಲುಕತೊಡಗಿತು: ಕವಳದ ರಸದೊಂದಿಗೆ ಮಾತನಾಡುವುದೇ ಒಂದು ವಿಶಿಷ್ಟ ಕಲೆ, ಅದೊಂದು ಕಠಿಣವಾದ ತ್ರಿಶಂಕು ಯೋಗಸ್ಥಿತಿ– ರಸಗವಳ ಪೂರ್ಣ ರಸಹೀನವಾಗುವವರೆಗೆ ಅದನ್ನು ತುಪ್ಪಲು ಯಾರೂ ಒಪ್ಪರು. ಆದರೆ ಆಗಲೇ ಮಾತನಾಡುವ ಸಂದಿಗ್ಧ ಪರಿಸ್ಥಿತಿ ಎದುರಾದರೆ,

ಸಾಧ್ಯವಾದಷ್ಟು ಕಣ್ಣು–ಕೈಸನ್ನೆಗಳಲ್ಲೇ ಸಂವಹಿಸಿ ಸಾಗಹಾಕಿ ಕವಳಾಸ್ವಾದಿಯು ರಸಯೋಗದಲ್ಲೇ ಇರಬಯಸುತ್ತಾನೆ. ಪರಿಸ್ಥಿತಿ ಅನಿವಾರ್ಯವಾಗಿದ್ದಲ್ಲಿ ಮಾತ್ರ ಈ 'ತ್ರಿಶಂಕು–ರಸಯೋಗಾಸನ'ಕ್ಕೆ ಕೈ ಹಾಕುತ್ತಾನೆ– ಅಲ್ಲ ಬಾಯಿ ಹಾಕುತ್ತಾನೆ. ಕವಳದ ರಸ ನುಂಗದಂತೆ, ಅದು ಬಾಯಿಂದ ಹೊರ ಸೋರದಂತೆ, ಜೊತೆಗೆ ಅದು ಶ್ವಾಸನಾಳಕ್ಕೆ ನುಗ್ಗಿ ಶ್ವಾಸ ಕಸಿಯದಂತೆಯೂ ಎಚ್ಚರವಹಿಸಿ, ಒಂದು ವಿಶಿಷ್ಟವಾದ ಬ್ಯಾಲೆನ್ಸ್ ಸಾಧಿಸಿ, ತನ್ನ ಸುಂಡಿಯನ್ನು ಸ್ವಲ್ಪವೇ ಮೇಲೆತ್ತಿ– ಮೂಗಿನಲ್ಲಿ ಮಾತನಾಡಲು ತೊಡಗುತ್ತಾನೆ! ಕೊಂಚ ಎಚ್ಚರ ತಪ್ಪಿದರೂ ಈ ತ್ರಿವೇಣಿ ಸಂಗಮದಲ್ಲಿ ತ್ರಿಶಂಕುವಾಗಿ ನಿಂತರಸವು ಮೂರರಲ್ಲಿ ಯಾವುದಾದರೊಂದು ಅಥವಾ ಎಲ್ಲಾ ದ್ವಾರಗಳಲ್ಲೂ ಬಸಿಯುವ ಸಾಧ್ಯತೆ ಇರುತ್ತದೆ. ರಸಗವಳವು; ಅನ್ನನಾಳಕ್ಕಿಳಿದರೆ–ರಸಭಂಗ, ಬಾಯಿ ಮೂಲೆಯಿಂದ ಹೊರಬಿದ್ದರೆ– ಮರ್ಯಾದೆ ಭಂಗ, ಶ್ವಾಸನಾಳಕ್ಕಿಳಿದರೆ– ಜೀವವೇಭಂಗ! ಉತ್ತರ ಕನ್ನಡದ ಅಡಿಕೆ ಬೆಳೆಗಾರರ ಹಾಗೂ ಉತ್ತರ ಕರ್ನಾಟಕದ ಮಂದಿಗಳ ಬಹುತೇಕರ ಮನೆಗಳಲ್ಲಿ ಮೂಗಿನಲ್ಲಿ ಮಾತನಾಡುವ ಇಂಥಹ ಅನೇಕ ರಸಯೋಗಿಗಳು ಕಾಣಬರುತ್ತಾರೆ. –ಓಹ್ ತಾನು 'ಕವಳ'ದ ಕುರಿತು ಉಪನ್ಯಾಸ ನೀಡಬೇಕಿಲ್ಲವಷ್ಟೇ, ಎಂದು ಎಚ್ಚೆತ್ತು ಮತ್ತೆ ಯೋಚನೆಗೆ ಬಿದ್ದ– ಯುನಿವರ್ಸಿಟಿ ಕ್ಯಾಂಪಸ್‌ನಲ್ಲಿ ಎರಡು ಬ್ಯಾಂಕ್‌ಗಳಿದ್ದು, ಇಂವ ಹೇಳಿದ್ದು ಯಾವ ಬ್ಯಾಂಕ್ ಬಾಜೂಕಿ? ಅಂತ ಕೇಳಿ ಖಾತ್ರಿಪಡಿಸಿಕೊಳ್ಳುವ ಮನಸ್ಸಾದ್ರೂ, ಆತನ ರಸಾಸ್ವಾದಕ್ಕೆ ಮತ್ತೆ ಭಂಗ ತರುವುದೇಕೆ ಎಂದು ಬಗೆದು ಹೊರಟ. ಎಸ್ಬಿಐ, ಸಿಂಡಿಕೇಟು ಎರಡೂ ಬ್ಯಾಂಕ್‌ಗಳ ಪಕ್ಕ ಅಲೆದ, ಗೊತ್ತಾಗ್ಲಿಲ್ಲ, ಬ್ಯಾಂಕ್ ಒಳಗೆ ಹೋಗಿ ವಿಚಾರಿಸಿದ. ಸಿಗಲ್ಲ ಅಂದ್ರು. ಮತ್ತೆ ಅಲ್ಲಿಗೇ ಬಂದು ಕೇಳಿದ್ರೆ 'ಏ ಅಲ್ಲೇ ಝೆರಾಕ್ಸ್ ಅಂಗ್ಡ್ಯಾಗ ಕೇಳ್ರೀ' ಅಂದ. ಎಲಾ ಇಂವ್ನಾ! ಇದನ್ನ ಮೊದಲೇ ಹೇಳಿದ್ರೆ ಇವ್ನಿಗೇನು ಧಾಡಿಯಾಗಿತ್ತು?! ಅಂದುಕೊಂಡು ಮತ್ತೆ ಬ್ಯಾಂಕ ಬಾಜೂದ ಝೆರಾಕ್ಸ್ ಅಂಗಡಿಗೆ ಹೋಗಿ ಫಾರಂ ತಗೊಂಡ.

ಅಷ್ಟೊತ್ತಿಗೆ ಕಂಪ್ಯೂಟರಿಣಿ ಬಂದಿರಬಹುದೆಂದು ಬಗೆದು, ತಡಮಾಡಿದ್ರೆ ಇನ್ನೆಲ್ಲಿಗಾದ್ರೂ ಓಡಿ ಬಿಟ್ಟಾಳೆಂದು ಮೊದಲಿನ ಕಚೇರಿಗೆ ಹೋಗಿ ಮತ್ತೆ ವಿಚಾರಿಸಲಾಗಿ– ಆಕೆ 'ಒಂದಕ್ ಬರ್ತಾರ್ರೀ' ಎಂಬ ಅಪ್ಡೇಟ್ ಸಿಕ್ತು!. ಮಟಮಟ ಬಿಸಿಲಲ್ಲಿ ಅತ್ತಿಂದಿತ್ತ ತಿರುಗಿದ್ದಿಂದ್ರ ಪಾಪ ವಿಘ್ನೇಶ್ವರನ ಹೊಟ್ಟೆ ಚುರುಗುಡಹತ್ತಿತ್ತು, ಸಿದ್ದೇಶ್ವರ ಖಾನಾವಳಿಗೆ ನಡೆದು ಹೋಗಿ ಉಂಡಾಗ ಒಂದೂ ಇಪ್ಪತ್ತು ಆಗೋಗಿತ್ತು. ಓಡೋಡಿ ಹೋದಾಗ ಕಂಪ್ಯೂಟರಿಣಿಯ ಆಗಮನವಾಗಿತ್ತು. ಮೊದಲೇ ಎರಡು ಬಾರಿ ಮತ್ತೆ ಮತ್ತೆ ಈತ ಬಂದು ವಿಚಾರಿಸಿದ್ದನ್ನು ಪಕ್ಕದವಳಿಂದ ತಿಳಿದಿದ್ದರಿಂದ ಕೊಂಚ ಪಾಪ ಪ್ರಜ್ಞೆಯಿಂದಲೋ ಏನೊ ವಿಘ್ನೇಶ್ವರನ ಫೈಲನ್ನೇ ಹಿಡಿದು ಕೆಲಸ ಪ್ರಾರಂಭಿಸಿದ್ದಳು!

'ಹತ್ತು ನಿಮಿಷಾ ಕೂಡ್ರಿ' ಅಂತೇಳಿ ಅನಂತರ ಅವಾರ್ಡ್ ಸರ್ಟಿಫಿಕೇಟಿನ ಒಂದು ಕರಡು ಪ್ರತಿಯನ್ನ ಪ್ರಿಂಟ್ ತೆಗೆದು 'ಇದ್ರಾಗ ಒಟ್ಟಾ ಏನೂ ಇರಬಾರ್ದ್ರೀ...... ಹಂಗ ಕರೆಕ್ಷನ್ ಮಾಡ್ರೀ!' ಅಂತ ಆತನ ಕೈಗಿಟ್ಟು! ಬಹುಬೇಗ ಅವಲೋಕಿಸಿ ಇದ್ದ ಒಂದೆರಡು ಬಹುಮುಖ್ಯ ತಪ್ಪುಗಳನ್ನ ತೋರಿಸಿದ, ಆಗವಳು 'ಆತ್ರೀ...ಇನ್ನೂ ಏನಾರ ಇರಬೋದು ಸರ್ಯಾಗಿ ನೋಡ್ರಿ', 'ಈಗ್ ಎರಡಾತ್ರೀ... ಲಂಚ್ ಬ್ರೇಕ್ ಐತ್ರೀ ಮೂರೂವರೀ ಮ್ಯಾಗೆ ಬರ್ರೀ', ಅಂದ್ಲು. ಮೂಗಿನಮೇಲೆ ಬೆರಳಿಟ್ಟ ವಿಘ್ನೇಶ್ವರ, ಆಗತಾನೇ ಬಂದಿದ್ರೂ ಲಂಚ್ ಬ್ರೇಕನ್ನ ಚೂರೂ ಬ್ರೇಕ್ ಮಾಡದ ಎಂಥಾ ಅಮೋಘ ಕಮಿಟ್ಮೆಂಟಪ್ಪಾ ಈಕೆಯದು? ಅಂತ! ನೋಡ್ತಿದ್ದ ಹಾಗೇ ಇಡೀ ಕಚೇರಿಯ ಎಲ್ಲರೂ ಒಬ್ಬೊಬ್ಬರಾಗಿ ಕಾಣೆಯಾದ್ರು.

ಇನ್ನೇನ್ಮಾಡೋದು ಅಂತ ಎದುರಿಗಿನ ಪಾರ್ಕಿಗೆ ಹೋದ, ಗಿಡ–ಮರಗಳು, ಕಾರಂಜಿ–ಕೊಳಗಳಿದ್ದರಿಂದ ಬಿರುಬಿಸಿಲ ಬಯಲ ಮಧ್ಯದ ಓಯಾಸಿಸ್ ಪ್ರದೇಶವಿದ್ದಹಾಗಿತ್ತು, ಆದ್ರೆ ಪರೀಕ್ಷಾರ್ಥಿ ಪಿಜಿ ವಿದ್ಯಾರ್ಥಿಗಳಿಂದ ಗಿಜಿ ಬಿಜಿಯಾಗಿತ್ತು. ಅಲ್ಲಲ್ಲೇ ಮರದ ನೆರಳಲ್ಲಿ ನಿಂತು, ಕುಂತು, ಅಡ್ಡಬಿದ್ದು ಹೀಗೆ ವಿವಿಧ ಭಂಗಿಗಳಲ್ಲಿ ಓದುವವರ ಭರಾಟೆ ಜೋರಿತ್ತು. ಅಲ್ಲೇ ಒಂದು ಸೂಕ್ತ ಜಾಗ ನೋಡಿ ಕೂತ. ಊಟವೂ ಆಗಿದ್ದರಿಂದ ಕಣ್ಣೆಳೆಯಲು ಶುರುವಾಯ್ತು. ಅಕ್ಕಪಕ್ಕ ಪರಿಚಯದವರ್ಯಾರೂ (ತನ್ನ ಹಳೆಯ ವಿದ್ಯಾರ್ಥಿಗಳು...) ಇಲ್ಲದ್ದನ್ನ ಖಾತ್ರಿಪಡಿಸಿಕೊಂಡು ಹಸಿರಹುಲ್ಲಿನ ಹಾಸಿಗೆಯಮೇಲೆ ಅಡ್ಡಾಗಿ ನಿದ್ದೆಗೆ ಜಾರಿದ! ಇರುವೆ ಕಚ್ಚಿದಾಗಲೆ ಅರಿವಾಗಿ ಎದ್ದು ಕೂತ, ಎದುರಿಗಿನ ಕಚೇರಿಯಲ್ಲಿ ಮನುಷ್ಯ ಸಂಚಾರವಾಗುತ್ತಿರುವ ಹಾಗೆ ಕಾಣಿಸಿತು, ಕೂಡಲೆ ಧಾವಿಸಿದ.

ಸಂಜೆಯೊಳಗೆ ಪ್ರ.ಪ. (ಪ್ರಮಾಣ ಪತ್ರ) ಸಿಕ್ಕಿದರೆ ಊರಿಗೆ ಹೋಗಿಬಿಡಬಹುದು ಎಂಬ ಹಂಬಲ ಮನದಲ್ಲಿ ಓಡುತ್ತಿತ್ತು. ಕಂಪ್ಯೂಟರಿಣಿ ಅಂತೂ ತನ್ನ ಕೆಲಸ ಮುಗಿಸಿ, ಇನ್ನು ನಿಮ್ಮ ವಿಷಯ ನಿರ್ವಾಹಕರ(ವಿ.ನಿ./ಕೇಸ್ವರ್ಕರ್) ಕೆಲಸ– ಅಂದ್ಲು. 'ಆಗ್ಲಿ ಅಂತೂ ಒಂದು ಹಂತ ಗೆದ್ದೆ, ಅರ್ಧ ಪಿಎಚ್ಡಿ ಆದಹಾಗಾಯ್ತು' ಅಂದುಕೊಂಡು ಮುಗುಳ್ನಕ್ಕ ವಿಘ್ನೇಶ್ವರ.

ಅಂತೂ 3.45ಕ್ಕೆ ವಿಘ್ನೇಶ್ವರನ ವಿ.ನಿ.ನ ಆಗಮನವಾಯ್ತು. ನಿಮ್ದೇನ್ರೀ ಕಥೀ...? ಅಂದ ವಿನಿ. ತನ್ನ ಕಥೆಯನ್ನ ಹೇಳಿದ. 'ನಾಳ್‌ನಾಕೂವರೀಗೆ ಬರ್ರೀ' ಅಂದ 'ವಿನಿ'! ತಲೆಕೆಟ್ಟ ವಿಘ್ನೇಶ್ವರ– ಅಲ್ರೀ ರಜಾ ಹಾಕ್ಕೊಂಡು ದೂರದಿಂದ ಬಂದೇನ್ರೀ, ಮಾಡಿಕೊಡ್ರೀ' ಅಂತ 'ವಿನಿ' ಮುಂದೆ ವಿನಂತಿಸಿದ. 'ಇಲ್ರೀ ಸಾಯೇಬ್ರು ರೆಸ್ಪನ್ಸ್ಯಾಗದಾರ್ರೀ ನಾಳೆ ಹನ್ನೆಲ್ಡೂವರೀಗೆ ಬರ್ರೀ' ಅಂತ ಸಮಯದ ರಿಬೇಟು ಕೊಟ್ಟು, 'ವಿನಿ' ಮುಂದೆ ಮಾತನಾಡದಾದ.

ವಿಘ್ನೇಶ್ವರನಿಗೆ ವಿ.ವಿ. ಕೆಲಸಗಳ ಇಂಥಹ ಅನೇಕ ಅನುಭವವಿದ್ರೂ ಎಚ್ಚರತಪ್ಪಿ ಒಂದೆ ದಿನದ ಕೆಲಸವೆಂದು ಉಳಿಯುವ ತಯಾರಿ ಇಲ್ಲದೆಯೆ ಹೋಗಿದ್ದ. ಆದರೆ ಊರಿಗೆ 120 ಕಿಲೋಮೀಟರು ಹೋಗಿ ಮತ್ತೆ ಮರುದಿನ ಪಯಣಿಸಿಬರೋದು ಕಷ್ಟವೆನಿಸಿ ಹೊಟೆಲಿನಲ್ಲಿ ತಂಗಿದ. ಮರುದಿನಕ್ಕೂ ಸಿಎಲ್ಲನ್ನು ಮುಂದುವರಿಸಲು ಕೋರಿ ಪ್ರಾಚಾರ್ಯರಿಗೆ ಫೋನಾಯಿಸಿದ.

ಮರುದಿನ ಬೇಗ ಹೋಗಿ ಕೂತು ಪಿ.ಎಚ್ಡಿ.–ಅವಾರ್ಡ್ ಪತ್ರವನ್ನು ಬೇಗ ಪಡೆದು ಹೋಗಿ ಬಿಡೋದೆಂಬ ಕನಸು ವಿಘ್ನೇಶ್ವರನದು. ಆದರೆ ಬರಲು ಹೇಳಿರುವುದೇ ಆತ ಹಣ್ಣಾದ ಮೇಲೆ, ಅಂದ್ರೆ ಹನ್ನೆಲ್ಡೂವರೀಗೆ! ಪಿಎಚ್ಡಿ ಕೆಲಸದಲ್ಲಿ ಅನೇಕ ವರ್ಷಗಳನ್ನೇ ತೇಯ್ದಿರುವಾಗ ಇದೇನು ಹೆಚ್ಚೇ ಎಂದು ಸ್ವಯಂ ಸಮಾಧಾನ ಮಾಡಿಕೊಂಡು, ಹೇಗೊ ಸಮಯ ಕಳೆದು– ಹನ್ನೆಳ್ಡಕ್ಕೆ ಕಚೇರಿಯಲ್ಲಿದ್ದ. ವಿಚಾರಿಸಲಾಗಿ 'ಯೆ ಬರೋ ಟೈಮಾತ್ರೀ....ಇನ್ನೇನ್ ಬರ್ತಾರ್ರೀ' ಎಂಬ ಉತ್ತರ! ಝುರಾಕ್ಸ್ ಮಾಡಿಸೋದಿದ್ದರಿಂದ್ರ ಹೊರಗೆ ಹೋಗಿ ಹದಿನೈದು ನಿಮಿಷಕ್ಕೆ ಬಂದ. ಮತ್ತೆ ಕೇಳಿದಾಗ– 'ಯೇ ಆಗಲ್ಲೆ ಬಂದು, ಚಾ ಗೆ ಹೋಗ್ಯಾರ, ಹೊರಗೆ ಕೂಡ್ರೀ' ಎಂಬ ರೆಕಾರ್ಡ್ ಪ್ಲೇ ಆಯ್ತು! ಈ ಊರಿನವರ 'ಚಾ' ಕುಡಿಯೋ ಅತಿ ಚಟದಮೇಲೆ ತನ್ನ ಲ್ಯಾಬಮೇಟ್ ಗೆಳೆಯ 'ಚಾ ರೀ...' ಎಂಬ ಪುಸ್ತಕವನ್ನೇ ಬರೆದಿದ್ದು ವಿಘ್ನೇಶ್ವರನಿಗೆ ನೆನಪಾಯ್ತು. ಅಂತೂ ಕೆಲಕಾಲ ಕುತ್ತಿಗೆ ಉದ್ದಮಾಡಿ ನೊಡ್ತಾ ಕೂತಾದ ಮೇಲೆ ಆತನ 'ವಿನಿ' ಸಾಯೇಬರ ಆಗಮನವಾಯ್ತು. 'ಆತ್ರಿ ನಾ ಎಲ್ಲಾ ಮಾಡಿ ಮ್ಯಾಲೆ ರೆಜಿಸ್ಟ್ರಾರ್ ಸಾಹೇಬ್ರಿಗೆ ಕಳಿಸ್ತೀನ್ರೀ, ಅವ್ರದ್ದು ಸಹಿ ಬಿದ್ದರೆ ನಿಮ್ಮ ಕೆಲಸ ಆದಹಾಗೆ,

ಆದರೆ ಸಾರ್ ಇದಾರೊ ಎನೊ ನೀವೆ ನೋಡ್ಕೋರೀ' ಎಂಬ ಉತ್ತರ ಬಂತು.

ಆಗ ಆತನ ಚೆಂಡು (ಕೆಲಸ) ಕಚೇರಿಯ ಎರಡನೇ ಮಹಡಿಯ ರೆಜಿಸ್ಟ್ರಾರ್‌ರವರ ಕೋಣೆಗೆ ಸ್ಥಳಾಂತರವಾಯ್ತು. ಕೆಲಹೊತ್ತು ಬಿಟ್ಟು ಅಲ್ಲಿಹೋಗಿ ವಿಚಾರಿಸಿದ. 'ನಿಮ್ಮ ಫೈಲಿನ್ನೂ ಬಂದಿಲ್ಲ' ಎಂಬ ಉತ್ತರ ಬಂತು. ಮತ್ತೆ ಸ್ವಲ್ಪ ಹೊತ್ತಾದರೂ ಬಾರದಿದ್ದಾಗ ಕೆಳಗೆ ಹೋದ. ಆದರೆ ಅಷ್ಟರಲ್ಲಾಗಲೆ ಯುನಿವರ್ಸಿಟಿಯು ತಣ್ಣಗಾಗಿ ಖಡಕ್–ರೊಟ್ಟಿಯ ಮೊರೆಹೊಕ್ಕಾಗಿತ್ತು. ತಾನೂ ಬೇಗ ಹೋಗಿ ಉಂಡು ಬಂದ. ಮತ್ತೆ ರೆಜಿಸ್ಟ್ರಾರ್–ಪಿಎ (ರೆ.ಪಿಎ) ಬಳಿ ಕೇಳಿದಾಗ– ಸ್ವಲ್ಪ ರೇಗುತ್ತಲೆ 'ನಿಮ್ಮ ಫೈಲೇ ಬಂದಿಲ್ವಲ್ರೀ' ಅಂದ್ರು. ಕೂಡಲೆ ಕೆಳಗೆ ಓಡಿ ಹೋಗಿ 'ವಿನಿ' ಹತ್ರ ಕೇಳಿದ್ರೆ– 'ನಾನು ಊಟಕ್ಕೆ ಮುಂಚೆನೇ ಮಾಡಿ ಕಳ್ಸಿನಲ್ರೀ...' ಎಂಬ ಉತ್ತರ! ಅರೆ ಮೇಲೂ ಇಲ್ಲ–ಕೆಳಗೂ ಇಲ್ಲದ ತನ್ನ ಫೈಲು ಎಲ್ಲಿ ಅಂತರ್ಧಾನವಾಯ್ತು? ಇದೊಳ್ಳೆ ಕಥೆ ಆಯ್ತಲ್ಲಾ ಅಂತ, ಮತ್ತೆ ಮೇಲೆ ಹೋಗಿ ಕೇಳಿ ಬೈಸಿಕೊಂಡ, ಜೊತೆಗೆ 'ರೆಜಿಸ್ಟ್ರಾರ್ ಸಾರು 4.30ಗೆ ಮೀಟಿಂಗ್‌ಗೆ ಹೋಕ್ತಾರೆ. ನೀವು ಸುಮ್ನೆ ನಾಳೆ ಬಂದುಬಿಡಿ' ಎಂಬ ಸಲಹೆ! ವಿಘ್ನೇಶ್ವರನಿಗೆ ಕೂಡಲೆ ಪಿತ್ತ ನೆತ್ತಿಗೆ ಏರಿದರೂ ದೀರ್ಘಕಾಲದ ಪಿಎಚ್ಡಿ–ಕೈಂಕರ್ಯವು ಆತನಿಗೆ ಕಲಿಸಿ ಮೈಗೂಡಿಸಿಬಿಟ್ಟಿದ್ದ– 'ತಾಳ್ಮೆ'ಯು ಏರಿದ 'ಪಿತ್ತ'ವನ್ನು ಕಾರದಂತೆ ತಡೆದು, ಕೇವಲ ಆತನ 'ಚಿತ್ತ'ವನ್ನಷ್ಟೇ ಕಲುಕಲು ಯಶಸ್ವಿಯಾಯ್ತು! ಆಗ ಯಾರೊ 'ಕೆಳಗಿನ ಪ್ಯೂನ್ ಹತ್ರ ವಿಚಾರಿಸಿ' ಎಂಬ ಸಲಹೆ ನೀಡಿದ್ರು. ಕೂಡಲೆ ಕೆಳಗೋಡಿ ಪ್ಯೂನ್‌ಅನ್ನು ಹುಡುಕಿದ– ನಿವೃತ್ತಿಯಂಚಿನಲ್ಲಿದ್ದ ನೀಲಿಸೀರೆಯುಟ್ಟ ಹಡಗಿನಗಲದ ಹಣ್ಣು ಹೆಂಗಸಿನ ಪ್ರವೇಶ ಆಯ್ತು. ವಿಚಾರಿಸಲಾಗಿ 'ಹೌದ್ರೀ, ಮ್ಯಾಲೆ ಕಳ್ಸಾಕಂತ ಆಗಲ್ಲೇ ಫೈಲು ಕೊಟ್ಟಾರ' ಅಂದ್ಲು. ಮತ್ಯಾಕಿನ್ನೂ ಕೊಟ್ಟಿಲ್ರೀ? ಅಂದ. ಅದಕ್ಕಾಕೆ– ಹೌದ್ರಿ...ನಿಮಿಸಾಕ್ ಒಂದೊಂದ್ ಫೈಲ್ ಕೊಡ್ತಾರ್ರೀ, ಮ್ಯಾಲೆ ಕೊಟ್ ಬಾ ಅಂತಾರ.. ನಂಗೂ ಮೆಟ್ಲು ಹತ್ತಿಳಿದ್ ಹತ್ತಿಳ್ದು ಸಾಕಾಗ್ಯಾತ್ರೀ, ಇನ್ನೂ ಒಂದೆರಡ್ ಕೊಡ್ಲಿರೀ ಸಂಜೀ ಮುಂದೆ ಎಲ್ಲಾ ಒಮ್ಗೆ ತಗೊಂಡ್ ಹೊಕೇನ್ರೀ' ಅಂದ್ಲು......ಕೂಲಾಗಿ! 'ಯಪ್ಪಾ ದ್ಯಾವರೇ.....' ಎಂದ ವಿಘ್ನೇಶ್ವರನಿಗೆ ಆ ಕ್ಷಣದಲ್ಲಿ ಕರ್ಮಸಿದ್ಧಾಂತವೆಲ್ಲ ನೆನಪಾಯ್ತು, 'ಇನ್ನೂ ಏನೇನು ಕರ್ಮ ಕಳೀಬೇಕಿದೆಯೊ ಏನೋ' ಅಂದುಕೊಂಡ. ಆದ್ರೂ ಸುಮ್ನೆ ಕೂತ್ರೆ ಆಗಲ್ಲ ಎಂದು– 'ಅಮ್ಮಾ ತಾಯೀ ಆ ಫೈಲ್‌ಗಳನ್ನು ಕೊಡಮ್ಮಾ, ನಾನೇ ಮೇಲುಗಡೆ ಕೊಡ್ತೀನಿ' ಅಂದ ('ನಾನೇ ಮ್ಯಾಲೆ ಸೇರಿ ಬಿಡುವಷ್ಟು ಈಗಾಗಲೆ ಮೇಲೆ–ಕೆಳಗೆ ತಿರುಗಿದೀನಿ' ಅಂದುಕೊಂಡ). 'ಏ ಆಗಲ್ರೀ, ಹಾಂಗೆಲ್ಲ ಯಾರ್‍ಯಾರ ಕೈಯ್ಯಾಗೆಲ್ಲ ಕೊಡಾಕ್ ನಾವಲ್ರೀ...ಕಾನ್ಫಿಡೆನ್ಸಿಲ್ ಇರ್‍ತಾವ್ರೀ ಅವೂ...' ಅಂತ ತನ್ನ ಜವಾಬ್ದಾರಿತನ ತೋರಿದ್ಲು! ಸರೀ ತನ್ನ ಫೈಲನ್ನಾದ್ರೂ ಕೊಡು ಎಂದು ಅಂಗಲಾಚಿದ, ಆಮೇಲೆ ತನ್ನ 'ವಿನಿ' ಹತ್ರ ಹೇಳಿಸಿದ ಮೇಲೆ ಕೊಟ್ಲು. ಮೇಲೋಡಿದ, ಆಗ್ಲೆ 4.10 ಆಗಿತ್ತು. ಫೈಲನ್ನು ರೆ.ಪಿಎ ಹತ್ರ ಕೊಟ್ಟು ಕೂತ. ಕೆಲಸ ಮುಗಿಯುವ ಯಾವ ಆಸೆಯೂ ವಿಘ್ನೇಶ್ವರನಿಗೆ ಉಳಿದಿರಲಿಲ್ಲ. "ಅದ್ಯಾವ ಗಳಿಗೆಯಲ್ಲಿ 'ವಿಘ್ನೇಶ್ವರ' ಎಂಬ ನಾಮಕರಣ ಮಾಡಿದರೋ ಏನೊ, ನೂರೆಂಟು ವಿಘ್ನಗಳಿಲ್ದೆ ನನ್ನ ಯಾವ ಕೆಲಸವೂ ಆಗದಲ್ಲ! ಬಹುಶಃ ವಿಘ್ನಗಳನ್ನೆ ಹಾಸು ಹೊದ್ದಿದ್ದಕ್ಕೆ 'ವಿಘ್ನೇಶ್ವರ'ನಿರಬೇಕು" ಅಂತೆಲ್ಲಾ ಚಿಂತಿಸುತ್ತ ಹೆಪ್ಪು ಮೋರೆ ಹಾಕಿ ಕೂತಿದ್ದ ಆ ಬಡಕಲು ಮಾಸ್ತರ– 'ವಿಘ್ನೇಶ್ವರ'!

ಅಷ್ಟರಲ್ಲಿ ಬೆಳಗಿಂದಲೂ ಈತನ ಅಲೆದಾಟವನ್ನು ಗಮನಿಸಿದ್ದ ರೆಜಿಸ್ಟ್ರಾರ್ ಕಚೇರಿಯ ಗುಮಾಸ್ತೆಯಾಗಿದ್ದ ಮಧ್ಯವಯಸ್ಸಿನ ಒಬ್ಬಾಕೆ "'ಹೆಗಡೆ' ನೀವು ಶಿರಸಿಯವರಾ?" ಅಂತ ವಿಚಾರಿಸಿದರು. 'ಹೂಂ ಹೌದು ಮೇಡಂ', ಅಂದ. ಮಬ್ಬಾಗಿ ಕೂತಿದ್ದ ವಿಘ್ನೇಶ್ವರನಿಗೆ ಒಂದೆರಡು ಕ್ಷಣಗಳ ಅನಂತರ ಆ ಮಾತು

ಯಾಕೂ ತನ್ನೂರಿನ ಭಾಷೆ ಇದ್ದಹಾಗಿದೆಯಲ್ಲಾ? ಅಂತ ಅನಿಸಿ, ತಕ್ಷಣ ನಿಮ್ಮೂರು ಯಾವ್ದು ಮೇಡಂ? ಅಂದ. 'ಶಿರಸಿ ಹತ್ತಿರದ....... ಹಳ್ಳಿ' ಅಂದ್ರು. ಓಹೋ.... ಆ ಕ್ಷಣ ವಿಘ್ನೇಶ್ವರನಲ್ಲಿ ಮಿಂಚಿನ ಸಂಚಾರವಾಯ್ತು– ಇವ್ರೂ ನಮ್ಮೂರಕಡೆಯವರು ಅಂತ ತಿಳಿದು–ಕೂಡಲೆ ತನ್ನ ಎರಡುದಿನದ ಪರದಾಟಗಳನ್ನು ಚುಟುಕಾಗಿ ಅವರಿಗೆ ಅರುಹಿದ. ಆಮೇಲೆ ನೋಡಿದರೆ ರೆಜಿಸ್ಟ್ರಾರ್ ಬಳಿ ಫೈಲ್ ಒಯ್ದು ಸಹಿ ಮಾಡಿಸುವ ಕೆಲಸ ಮಾಡ್ತಿರೋದು ಅವರೇ ಆಗಿತ್ತು. ಕೂಡಲೆ ಆಕೆ ರೆ.ಪಿಎ ಬಳಿ ವಿಘ್ನೇಶ್ವರನ ಫೈಲ್ ಕೇಳಿ ಪಡೆದು ಒಳಗೆ ಹೋದರು. ಅಂತೂ ಸ್ವಲ್ಪ ಆಶಾದಾಯಕವಾಗಿ, ಬೆವರು ಒರೆಸುತ್ತಾ ಅಲ್ಲಿದ್ದ ಮೆತ್ತನ ಸೋಫಾದಮೇಲೆ ಚೂಪಗೆ ಕೂತ ವಿಘ್ನೇಶ್ವರ. ಅಲ್ಲೀವರೆಗೆ ಈತನಿಗೆ ಕೊಂಚ ರೇಗುತ್ತಿದ್ದ ರೆ.ಪಿಎ ವಿಘ್ನೇಶ್ವರನ ಬಳಿ– 'ಓಹೋ .... ಮೇಡಂ ಬಳಿ ನಿಮ್ಮ ಫೈಲ್ ಹೋಯ್ತುಲ್ಲಾ....ಇನ್ನು ಬಿಡಿ ನಿಮ್ಮ ಕೆಲಸ ಆಯ್ತು' ಅಂದ್ರು. ಆಗಲಿ ಗುರ್ತು–ಪರಿಚಯ ಇರದಿದ್ದರೂ ತಮ್ಮೂರಕಡೆಯವರು ಎಂಬ ಅವರ ಅಭಿಮಾನದಿಂದಾಗಿ ಅಂತೂ ಕಡೇಯ ಕ್ಷಣದಲ್ಲಾದ್ರೂ ತನ್ನ ಕಡತಕ್ಕೆ (ಫೈಲ್) ಕೊಂಚ ವೇಗ ದೊರೆಯಿತು, ಅಂದುಕೊಂಡ. ಆದರೂ ಕೆಲಸ ಪೂರ್ಣ ಮುಗಿದಂತೂ ಆಯ್ತೆಂದು ಬೀಗಬಾರದೆಂಬ ಪಿ.ಎಚ್ಡಿ. ಕಲಿಸಿದ ಮತ್ತೊಂದು ಪಾಠವನ್ನು ನೆನಪಿಸಿಕೊಂಡು ಕೂತ.

ಅಂತೂ ವಿಘ್ನೇಶ್ವರನ ಪುಣ್ಯಕ್ಕೆ– ಮತ್ತಾವ ವಿಘ್ನವೂ ಇದಿರಾಗದೆ, ಕಥೆ ಸುಖಾಂತ್ಯವಾಯ್ತು. ಆ ಮೇಡಂ ಹತ್ತು ನಿಮಿಷದಲ್ಲೆ ಹೊರ ಬಂದು ವಿಘ್ನೇಶ್ವರನ ಪಿ.ಎಚ್ಡಿ. ಅವಾರ್ಡ್ ಆದ ನೋಟಿಫಿಕೇಷನ್ ಪ್ರತಿಯನ್ನು ಕೈಗಿತ್ತು, 'ಕೆಳಗೆ ಔಟ್‌ವರ್ಡ್ ವಿಭಾಗಕ್ಕೆ ಹೋಗಿ ಅಲ್ಲಿ ನಮೂದಿಸಿ ನಿಮ್ಮ ಪ್ರತಿಯನ್ನು ತಗೊಂಡು ಹೋಗಬಹುದು', ಅಂದ್ರು.

'ಅಂತೂ ಎರಡು ದಿನದ ಸಿಎಲ್ ಅನ್ನು ಬಲಿಹಾಕಿದ ಮೇಲೇ ಈ ಕೆಲಸವಾಗಬೇಕೆಂದಿತ್ತಾದರೆ ಇನ್ನೇನು ಮಾಡಲು ಸಾಧ್ಯ?' ಎಂದು ನಿಟ್ಟುಸಿರು ಬಿಡುತ್ತಾ ಹೊರಬಿದ್ದ ವಿಘ್ನೇಶ್ವರ. ಆಗ, ಯುನಿವರ್ಸಿಟಿಯಲ್ಲಿ ಸಂಶೋಧನಾ ನಿರತನಾಗಿದ್ದ ಆತನ ಕಾಲೇಜಿನ ಹಳೆಯ ನೆಚ್ಚಿನ ವಿದ್ಯಾರ್ಥಿಯೊಬ್ಬ ಸಿಕ್ಕ. ಉಭಯಕುಶಲೋಪರಿಯ ಅನಂತರ ಆತ ತನ್ನ ಕಚೇರಿ ಕೆಲಸದ ಕುರಿತು ಹೇಳಿದ– 'ಸರ್, ಅಕ್ಷರಶಃ ಘುಟಬಾಲಿನಂತೆ ಆ(ಝಾ)ಡಿಸುತ್ತಿದ್ದಾರೆ' ಅಂದ! ಯಾಕಪ್ಪಾ ಏನಾಯ್ತೆಂದು ವಿಚಾರಿಸಿದಾಗ ತಿಳಿಯಿತು– ಆತನಿಗೆ ತನ್ನ ಸಂಶೋಧನಾ ಕಾರ್ಯನಿಮಿತ್ತ ಪೋಲೆಂಡ್ ದೇಶಕ್ಕೆ ಶಿಷ್ಯವೇತನದೊಂದಿಗೆ ಹೋಗುವ ಅವಕಾಶ ದೊರಕಿತ್ತು. ಆದರೆ ಯುನಿವರ್ಸಿಟಿ ಕಚೇರಿಯ ಒಂದು ವಿಭಾಗದ ತಾಂತ್ರಿಕ ಅಡಚಣೆಯಿಂದಾಗಿ ಅದು ಕೈ ತಪ್ಪುವ ಹಂತಕ್ಕೆ ಬಂದಿತ್ತು! ಸರ್, ಪೂರ್ಣ ಆರ್ಥಿಕ ಸಹಾಯಮಾಡಲಿರುವ ಪೋಲೆಂಡ್‌ದ ಆ ಸಂಸ್ಥೆಯವರನ್ನಾದರೂ ನನ್ನ ಕೆಲವು ತೊಂದರೆಗೆ ಮನವಿಮಾಡಿ ಒಪ್ಪಿಸಿದೆ, ಆದರೆ ಇಲ್ಲಿನ ಕೇಸ್ವರ್ಕರ್ ಬಳಿ ನನ್ನ ಕೆಲಸ ಮಾಡಿಸಲು ಆಗುತ್ತಿಲ್ಲ. ಎಂದು ಮಾರ್ಮಿಕವಾಗಿ ನಗುತ್ತಾ ಹೇಳಿದ! ಆ ನಗುವಿನ ಹಿಂದಿನ ನೋವು ವಿಘ್ನೇಶ್ವರನಿಗಲ್ಲದೆ ಇನ್ನಾರಿಗೆ ತಿಳಿಯಬೇಕು?! 'ನೇರವಾಗಿ ಹಿರಿಯ ಅಧಿಕಾರಿಗಳನ್ನು ಭೇಟ್ಟಿಯಾಗಿ ಮನವಿ ಮಾಡಿನೋಡು' ಎಂಬ ಸಲಹೆ, ಸಾಂತ್ವನವನ್ನು ತನ್ನ ವಿದ್ಯಾರ್ಥಿಗೆ ನೀಡಿ, ನಿಧಾನವಾಗಿ ಊರದಾರಿ ಹಿಡಿದ; ವಿಘ್ನರಾಜ –'ವಿಘ್ನೇಶ್ವರ'.

■

# ದೀಪ ಮತ್ತು ಲಂಚಾವತಾರ

**✍ ವಾಣಿ ಭಂಡಾರಿ**

ಹಿಂದಿನ ಕಾಲದಲ್ಲಿ ಒಂದು ಗಾದೆ ಮಾತನ್ನು ಹೀಗೆ ಹೇಳ್ತಾ ಇದ್ರಂತೆ "ಎಣ್ಣೆ ಕಂಡಲ್ಲಿ ಮಕ್ಳ ಹಡಿತಾರೆ.ನೀರು ಕಂಡಲ್ಲಿ ಸ್ನಾನ ಮಾಡ್ತಾರೆ" ಅಂತ ನಮ್ಮಮ್ಮ ಯಾವಾಗಲೂ ಹೇಳ್ತಾ ಇರೋಳು. ಎಣ್ಣೆ ಇದ್ದಾಗ ಬಸಿರಿಯರಿಗೆ ಬೇನೆ ಬರುತ್ತೋ ಬಿಡುತ್ತೋ ಗೊತ್ತಿಲ್ಲ. ಆಗೆಲ್ಲ ಮನೆಗೆ ಸೂಲಗಿತ್ತಿಯರು ಬಂದು ಹೆರಿಗೆ ಮಾಡಿಸಿ ಹೋಗ್ತಾ ಇರ್ತಿದ್ರು. ಆದರೆ ಕೆಲವರಿಗೆ ನೀರು ಕಂಡಲ್ಲಿ ಸ್ನಾನ ಮಾಡುವ ಚಟ ಇರುವುದಂತೂ ಸತ್ಯ. ಅದರಲ್ಲೂ ನಮ್ಮ ಮಲೆನಾಡಿನಲ್ಲಿ ಬೆಳಿಗ್ಗೆ ಪೂಜೆ ಪುನಸ್ಕಾರ ಅಂತ ಬೇಗನೆ ಸ್ನಾನ ಮುಗಿಸಿ ಪೂಜೆ ಮಾಡಿ ಕೆಲಸಕ್ಕೆ ಹೊರಟ್ರೆ ಗದ್ದೆ ತೋಟದ ಕೆಲಸ ಪೂರೈಸಿ ಮನೆಗೆ ಬಂದು ಹಂಡೆಯಲ್ಲಿ ಕಾದ ಬಿಸಿನೀರಿನ ಜಳಕ ಮಾಡಿದಾಗಲಂತೂ ದೇಹಕ್ಕೆ ಮನಸ್ಸಿಗೆ ಸಿಗುವ ಸಂತಸ ಮಾತ್ರ ವರ್ಣನೆಗೆ ನಿಲುಕದ್ದು ಬಿಡಿ. ಈ ತರಹದ ಪದ್ದತಿ ಈಗಲೂ ರೂಢಿಯಲ್ಲಿದೆ. ಆದರೆ ಇದು ದೊಡ್ಡವರ ಪಾಡು. ಸಣ್ಣವರ ಕೀಟಲೆ ಕಿತಾಪತಿಯೇ ಬೇರೆ.ಹೊಳೆ ಭಾಗದಲ್ಲಿ  ಇರುವವರಂತೂ ಈಜುಪಾಜು ಅಂತ ಭಾನುವಾರ ಬಂತೆಂದರೆ ಹೊಳೆಯ ದಂಡೆಯ ಮೇಲೆ ಮಣ್ಣಾಟ, ಈಜು ಆಡುವುದರೊಳಗೆ ಆ ದಿನ ಪೂರ್ತಿ ಕಳೆದು ಬಿಡುತ್ತಿತ್ತು.

ನಾನಂತೂ  ನಮ್ಮ ದೊಡ್ಡಮ್ಮನ ಮನೆಗೆ ರಜೆಗೆ ಹೋದಾಗಲೆಲ್ಲ ಹೊಳೆಯಲ್ಲಿ ಆಡುವ ನೀರಾಟ, ಮರಳಿನ ರಾಶಿಯ ಮೇಲೆ ಕಟ್ಟುವ ಗುಬ್ಬಚ್ಚಿ ಗೂಡು, ಗೂಡನ್ನು ಆಳಕ್ಕೆ ಮರಳಿನಿಂದ ಅಗೆದಾಗಲೆಲ್ಲಾ  ನೀರು ಸಿಗುತ್ತಿತ್ತು. ಅಗೆಲ್ಲ ಆ ಗೂಡಿನಲ್ಲಿ ಸಣ್ಣ ಪುಟ್ಟ ಮೀನು ಏಡಿನೆಲ್ಲಾ  ಹಿಡಿದು ಅದರೊಳಗೆ ಬಿಟ್ಕಂಡು ಅವುಗಳು ಇತ್ತ ಸಾಯದಂತೆ ನೋಡಿಕೊಳ್ತಿದ್ವಿ.

ನೀರಿನೊಳಗೆ ಇರಬೇಕಾದ ಜಲಚರಗಳನ್ನು ಮಣ್ಣಿನ ಪಸೆಯ ಜಿನುಗು ನೀರಿನಲ್ಲಿ ಬಿಟ್ರೆ ಸಾಯ್ತಾವಾ ಅಥವಾ ಬದುಕ್ತಾವಾ ಅನ್ನೋ  ಪರಿಕಲ್ಪನೆ ಇಲ್ದೆ ಆಟ ಆಡುತ್ತಿದ್ದ ಆ ಬಾಲ್ಯ ನಮಗೆ ಖುಷಿ ನೀಡಿದರೆ, ಪಾಪ ನಮಗೆ ಚಿನ್ನಾಟ ಆದರೆ ಆ ಬಡಪಾಯಿ ಮೀನುಗಳಿಗೆ ಪ್ರಾಣ ಸಂಕಟ ಆಗಿರುತ್ತಿತ್ತೋ ಏನೋ ಯಾರಿಗೆ ಗೊತ್ತು. ಅಷ್ಟು ತಿಳುವಳಿಕೆ ಇರದ ಆ ವಯಸಿನಲ್ಲಿ ಗುಬ್ಬಚ್ಚಿ ಗೂಡನ್ನು ಮರಳಿನಲ್ಲಿ ಕಟ್ಟುವುದೆಂದರೆ ಒಂದು ದೊಡ್ಡದಾದ ನಮ್ಮ ಕನಸಿನ ಅರಮನೆ ಕಟ್ಟಿದಂತೆಯೇ ಸರಿ.ಅ ನಮ್ಮ ಅರಮನೆಯನ್ನು ಇನ್ನೂ ಹೆಚ್ಚು ವಿಸ್ತರಿಸಿ, ಚೀನದ ಗೋಡೆಯಂತೆ ಬಲವಾಗಿ  ಅದೇ  ಮರಳಿನಲ್ಲಿ ಸುತ್ತಲು ಕಟ್ಟಿ, ಒಳಗೆಲ್ಲ ನಮಗೆ ಬೇಕಾದ ರೀತಿಯಲ್ಲಿ ಕೋಣೆಗಳನ್ನು ನಿರ್ಮಿಸಿಕೊಳ್ಳುತ್ತಿದ್ವಿ. ಆ ಕೋಣೆ ಒಳಗೆ ಎರಡು ಪುಟ್ಟದಾದ ಕಲ್ಲನ್ನು ತಂದಿಟ್ಟು ರಾಜ ರಾಣಿ ಎಂಬಂತೆ ಪ್ರತಿಮೆಗಳನ್ನು ಸೃಷ್ಟಿಸಿ ಕನಸಿನ ಮಹಲಿಗೊಂದು ಅರ್ಥ ನೀಡುತ್ತಿದ್ದ ಆ ಸಮಯದಲ್ಲೇ, ಈ ಶ್ರೀಮಂತರ ಮನೆಯಲ್ಲಿ ಕೊರಳಿಗೆ ಬೆಲ್ಟ್ ಕಟ್ಟಿ ಬೊಗುಳಲೆಂದೇ  ನಾಯಿಯನ್ನು ಕಟ್ಟುವುದು ಸರ್ವೇಸಾಮಾನ್ಯ ಸಂಗತಿ.ಹಾಗಂತ ನಮ್ಮ ಕನಸಿಗೆ ಗುಬ್ಬಚ್ಚಿ ಗೂಡಿಗೆ ನಾಯಿಯೇನು ಕಟ್ಟುವ ಅವಶ್ಯಕತೆ ಇರ್ಲಿಲ್ಲ. ಎಲ್ಲ ಹಾಳು ಮಾಡಲೆಂದೇ  ನರಿಯಂತೆ ಹೊಂಚುಹಾಕಿ ಕಾಯುತ್ತಿದ್ದ ನನ್ನ ದೊಡ್ಡಮ್ಮನ ಮಗ ಅಣ್ಣ ಬಂದು ನನ್ನ ಮತ್ತು ದೊಡ್ಡಮ್ಮನ ಮಗಳಾದ ನನ್ನ ಸ್ನೇಹಿತೆಯ ಗುಬ್ಬಚ್ಚಿ ಗೂಡನ್ನೆಲ್ಲ ಕಾಲಲ್ಲಿ ಒದ್ದು ನಮಗೂ ನಾಕು ಬಿಗಿದು ನೀರಲ್ಲಿ ಆಡಿದ್ದು ಸಾಕು,ನಾಳೆ ಜ್ವರ ಬಂದ್ರೆ ಏನು ಗತಿ ಅಂತ ಹೊಳೆಸಾಲಿನಿಂದ ದರದರ ಎಳ್ಕೊಂಡು ಹೋಗ್ತ ಇರ್ತಿದ್ದ.

ಹೀಗೆ ಒಂದು ಸಾರಿ ರಜೆಯ ಸಮಯದಲ್ಲಿ ನಾನು ಅವ್ವು (ನನ್ನ ದೊಡ್ಡಮ್ಮನ ಮಗಳು ಕಲಾವತಿ) ತೋಟದಲ್ಲಿ ಅಡಿಗೆ ಮಾಡ್ಕಂಡು ತಿನ್ನಲೆಂದು ಚೂರೇ ಚೂರು ಬೆಲ್ಲ ಅಕ್ಕಿ ಕಾಯಿ ಎಲ್ಲ ತಗೊಂಡು ಹೋಗಿ ಬೆಂಕಿ ಮಾಡಲೆಂದು ಒಯ್ದು ದೀಪವನ್ನು ಕಳ್ಕಂಡು ಬಂದಿದ್ವಿ.ಬಹುಶಃ ಅಗಿನ್ನು ನಾವು ಮೂರನೇ ತರಗತಿಯಲ್ಲಿ ಇದ್ವಿ ಅಷ್ಟೆ.ಮನೆಯಲ್ಲಿ ಹೇಳಿದ್ರೆ ಹೊಡಿತಾರೆ. ಅಪ್ಪ ದೇವ್ರೇ ಏನು ಮಾಡೊದು ಅಂತ ತಿಳಿಯದೆ ಹೊಳೆ ಪಕ್ಕದಲ್ಲೇ ಇದ್ದ ಈಶ್ವರನಿಗೆ ಉದ್ದಂಡ ನಮಸ್ಕಾರ ಹಾಕಿ. "ದೇವ್ರೆ ದೇವ್ರೆ ನೀನು ನಮಗೆ ದೀಪ ಸಿಗೋ ಹಾಗೆ ಮಾಡಿದರೆ ನಿಂಗೆ ನಾಕಾಣೆ ಕಾಣಿಕೆ ಹಾಕ್ತೀವಿ ಅಂತ ಶಿವನಿಗೆ ಲಂಚದ ಆಸೆ ತೋರಿಸಿದ್ವಿ.ಕೊನೆಗೆ ಅಲ್ಲಿ ಇಲ್ಲಿ ಅಂತ ಎಲ್ಲ ಕಡೆ ಹುಡುಕಿದ ಮೇಲೆ ಒಂದು ದಿನ ಕಳೆದ ನಂತರ ದರಗಲಿನ ಸಂದಿಯಲ್ಲೇ ಬೆಚ್ಚಗೆ ಮಲಗಿದ್ದ ದೀಪ ಸಿಕ್ಕಿದ ಖುಷಿಗೆ ತಿನ್ನಲೆಂದು ಕೊಟ್ಟ ನಾಕಾಣಿ ದುಡ್ಡು ಶಿವನಿಗೆ ಅರ್ಪಿಸಿ ಬಂದಿದ್ವಿ. "ದೀಪಕ್ಕೋಸ್ಕರ ಶಿವನಿಗೆ ಲಂಚ ಕೊಟ್ಟು ದೀಪ ಪಡೆದ ವೀರಾದಿ ವೀರವನಿತೆಯರು" ಅಂತ ನಮ್ಮಣ್ಣ ಈಗಲೂ ಹಂಗಿಸ್ತಾನೆ.ಅಲ್ಲಾರಿ ನಾವು ಮೊದಲೇ ಹೆದರ್ಕಂಡು ಸಾಯುವ ಹಾಗೆ ಇರಬೇಕಾದ್ರೆ ನಮ್ಮನ್ಯಾರು ಕಾಪಾಡುತ್ತಾರೆ ಹೇಳಿ ನೋಡೋಣ?. ಅದ್ಕೆ ಶಿವನ ಮೊರೆ ಹೋದ್ವಪ್ಪ.ಅದರಲ್ಲೇನು ತಪ್ಪು ಅಂತ. ಇವಾಗಿನವರ ತರಹ ತಮ್ಮದಲ್ಲದ ವಸ್ತು, ಭೂಮಿ, ಸೈಟ್, ಬಂಗಾರ ಇತ್ಯಾದಿ ಇತ್ಯಾದಿಗಳನ್ನು ಕಬಳಿಸಲೆಂದೇ ಲಂಚ ಕೊಟ್ವ? ಇಲ್ವಲ್ಲ ಸ್ವಾಮಿ, ನಮ್ಮ ವಸ್ತುವನ್ನು ಕಳೆದುಕೊಂಡ ಪರಿತಾಪದಿಂದ ಕಂಗೆಟ್ಟು ಬಸವಳಿದು ಶಿವನ ಮೊರೆ ಹೋದ್ವಿ. ವಿಷವನ್ನು ಕುಡಿದ ನಂಜುಂಡೇಶ್ವರನಿಗಾದ್ರು ನಮ್ಮ ವಿಷಮ ಪರಿಸ್ಥಿತಿ ಅರ್ಥ ಆಗ್ಲಿ ಅಂತ ಬೇಡಿಕೊಂಡಿದ್ದನ್ನ ಮರೆಯಲ್ಲೇ ನಿಂತು ಆಲಿಸುತ್ತಿದ್ದ ನಮ್ಮಣ್ಣನಿಂದಾಗಿ ಅವತ್ತು ನಮ್ಮ ಲಂಚಾವತಾರ ಗೊತ್ತಾಯ್ತು ನೋಡ್ರಿ.ನಾವು ಕೊಟ್ಟ ಕಾಣಿಕೆಯನ್ನ ಲಂಚ ಅಂತ ತಿರುಚಿ ನಮಗೆ ಟಾಂಗ್ ಕೊಡ್ತಾನಲ್ಲ ಅಸಾಮಿ. ಅವನಿರದಿದ್ದರೆ ನಮ್ಮ ಶಿವ ಖಂಡಿತವಾಗಿ ಬಾಯ್ಬಿಡ್ತ ಇರ್ಲಿಲ್ಲ ಬಿಡಿ..ಅಲ್ಲ ಇಷ್ಟು ದೊಡ್ಡ ಅನಾಹುತಗಳನ್ನು ಲಂಚ ಹಗರಣಗಳನ್ನ ನೋಡಿಯೇ ಕಣ್ಮುಚ್ಚಿ ಕುಳಿತ ಆ ಭಗವಂತ ಇನ್ನೂ ನಮ್ಮ ಜುಜುಬಿ ದೀಪಕ್ಕೆ ನೀಡಿದ ನಾಕಾಣಿ ವಿಚಾರ ಹೇಳ್ತಿದ್ನಾ ಮಾರ್ರೆ, ನೆವರ್. ಅದು ಕಳೆದುಕೊಂಡ ದೀಪ ಕೂಡ ನಮ್ಮದೇ ಆಗಿರುವಾಗ.

ಅಂದಿನ ಆ ತಪ್ಪಿಗೆ ಇಂದಿಗೂ ಲಂಚಕೊಟ್ಟು ಪಡೆದ ದೀಪಮಲ್ಲೆಯರು, ಶೂರಣೆಯರು, ವನಿತೆಯರು, ಕಾರಿಣಿಯರು, ಎಷ್ಟೆಲ್ಲ ರಣಿಯರು" ಅಂತ ಕೊನೆಗೆ ಸೇರಿಸಿ ಹೇಳಲು ಸಾಧ್ಯವೋ ಅಷ್ಟೆಲ್ಲ ಒಂದೇ ಉಸಿರಿಗೆ ಹೇಳಿ ಬಿಡ್ತಾನೆ ಪುಣ್ಯಾತ್ಮ. ಆದ್ರು ಒಂದು ಡೌಟ್ ನಂಗೆ ಈಗಲೂ ಇದೆ.ಆ ದೀಪವನ್ನು ಆ ಕ್ಷಣಕ್ಕೆ ಕಾಣದಂತೆ ಮಾಯಾ ಮಾಡಿದ ಕಳ್ಳ ನಮ್ಮಣ್ಣನೇ ಇರಬಹುದಾ ಅಂತ. ನಾವು ದೇವರಿಗೆಂದು ಹಾಕಿದ ನಾಕಾಣೆ ಕೂಡ ಇವನ ಕಿಸೆಯೊಳಗೆ ಹೋಗಿರಬಹುದಾ ಎಂದೇ ಎಂದೇ ನನ್ನ ಅನುಮಾನ. ಅದೇನೆ ಇರ್ಲಿ ಬಿಡಿ. ಅದು ಒಂಥರಾ ಖುಷಿನೇ ನಮಗೆ . ಹಾಗೆಲ್ಲ ಬಿರುದು ಬಾವಲಿ ಪ್ರಶಸ್ತಿ ಪುರಸ್ಕಾರಗಳೆಲ್ಲ ಸುಮ್ನೆ ಸುಮ್ನೆ ಬರ್ತಾವೆ ಅನ್ಕಂಡ್ರಾ? ಆದ್ರೆ ಈಗೆಲ್ಲ ಬರ್ತಾವೆ ಬಿಡಿ. ನೀವು ಹೆಚ್ಚು ಹೆಚ್ಚು ಬಕೆಟ್ ಬ್ಯಾರಲ್ ಹಿಡಿದ್ರೆ ಸಾಕು.ನಿಮಗೆ ಎಲ್ಲ ತರದ ಹಾರ ತುರಾಯಿಗಳು ಸಿಕ್ತಾವೆ ಕಣ್ರಿ. ಆದ್ರೆ ನಮಗೆ ಸಿಕ್ಕಿರೋ ಬಿರುದು ಮಾತ್ರ ಪ್ರೀತಿಯಿಂದ ಪ್ರೀತಿಗಾಗಿ ಪ್ರೀತಿಸೋರು ಕೊಟ್ಟ ಪಟ್ಟ ನೋಡಿ. ಇದು.ಕೊನೆಗೂ ದೀಪ ಸಿಕ್ಕ ಖುಷಿಗೆ ಮನೆಲೇ ಬೆಲ್ಲದಂಟು ಮಾಡಿ ತಿಂದಿದ್ವಿ.

■

# ಅಕ್ಕ ಪಕ್ಕ, ನೆರೆ ಹೊರೆ

✍ ಆನಂದ

ಅಕ್ಕ ಪಕ್ಕ, ನೆರೆ ಹೊರೆ ಇಡ್ಲಿ ಸಾಂಬಾರ್, ಪೂರಿ ಸಾಗು ತರಹ ಕಂಬೈನ್ಡ್. ಆದರೆ ನನಗೆ ಬರೇ ಇಡ್ಲಿ ಅಥವಾ ಪೂರಿ. ನೊ ಸಾಂಬಾರ್ ಅಥವಾ ಸಾಗು. ಅಂದರೆ ನನಗೊಬ್ಬರೇ ನೈಬರ್. ಬರೀ ಪಕ್ಕ ಅಥವಾ ನೆರೆ. ಕಳೆದ 35 ವರ್ಷಗಳಿಂದ ಇದೇ ಪರಿಸ್ಥಿತಿ ಏಕೆಂದರೆ ಬಲಗಡೆ ಸೈಟ್ ಖಾಲಿ. ಎಡಗಡೆ ಮನೆ ಅವರೇ ನೆರೆ.

ಆದರೆ ಈಗಷ್ಟೇ ಬಲಗಡೆಯಲ್ಲೂ ಮನೆ ಎದ್ದಿದೆ. ಸದ್ಯಕ್ಕೆ ಖಾಲಿ.

'ಪಕ್ಕದ ಮನೆಗೆ ಯಾರೋ ಬರ್ತ್ತಾರೊ ಏನೋ' ಎಂದಳು ಮಡದಿ. ನಿಜವೇ. ಈಗಿರುವ ಪಕ್ಕದ ಮನೆಯಾತ ಜಂಟಲ್‌ಮನ್, ಮನೆಯಾಕೆ ಜಂಟಲ್‌ವುಮನ್. ನಾವು ಸಂಜೆ ಮನೆಗೆ ವಾಪಸಾಗುವುದ ತಡವಾದರೆ ನಮಗೆ ಫೋನ್: 'ಯಾಕೆ ಮನೆ ಲೈಟ್ ಹಾಕಿಲ್ಲ?' ಅಷ್ಟು ಕಾಳಜಿ ನಮ್ಮ ಬಗ್ಗೆ. ಸಹಾಯ ಮಾಡಲು ಬಾಯ್ ಸ್ಕೌಟ್ ತರಹ ಎವೆರ್‌ರೆಡಿ.

ಈಗ ಬಲಗಡೆ ಟೆನೆಂಟಾಗಿ ಯಾರು ಬರಬಹುದು ಎಂಬ ಕುತೂಹಲ ನಮಗೆ. 'ಕನ್ನಡ್ ಗೊತ್ತಿಲ್ಲ' ಎನ್ನುವ ವ್ಯಕ್ತಿ ಬಂದರೆ ವ್ಯವಹಾರ ಅನಧಿಕೃತ ರಾಷ್ಟ್ರಭಾಷೆಯಲ್ಲೇ ನಡೆಸಬೇಕು. ಅಥವಾ ನೆರೆ ರಾಜ್ಯದವರು ಎಂದರೆ ತೆಲುಗು ಬಿಡ್ಡ? ತಮಿಳ್‌ಕಾರನ್? ಮಲೆಯಾಳಂ ಕುಟ್ಟಿ? ಒಂದು ಕಡೆ ಕುತೂಹಲ, ಇನ್ನೊಂದೆಡೆ ತುಸು ಆತಂಕ.

'ಯು ಕೆನಾಟ್ ಚೂಸ್ ಯುವರ್ ನೇಬರ್' ಎಂಬ ಮಾತಿದೆ. ಅದು ಬಲ್ಲವರೋ ಅಥವಾ ಅನುಭವಿಸಿದವರೋ ಹೇಳಿರುವ ಉಕ್ತಿ. ಒಳ್ಳೆ ಮನೆ ಬಾಡಿಗೆಗೆ ಸಿಗಬಹುದು ಆದರೆ ನೆರೆಹೊರೆಯೂ ಒಳ್ಳೆಯದಿರುತ್ತದೆ ಎಂಬ ಗ್ಯಾರಂಟಿ ಅದರ ಮಾಲೀಕ ಕೊಡುವನೆ?

ಈ ಸಂಕಟವನ್ನು ನನ್ನ ಗೆಳೆಯನ ಮುಂದೆ ಹೇಳಿಕೊಂಡೆ. ಅವನು ತುಸು ಯೋಚಿಸಿ 'ಅಲ್ಲಯ್ಯ, ನಿನಗಿರುವ ಆತಂಕ ನಿನ್ನ ಪಕ್ಕದ ಮನೆಗೆ ಮುಂದೆ ಬರಲಿರುವ ಟೆನೆಂಟಿಗೂ ಇರುವುದಿಲ್ಲವೆ?' ಎಂದು ಕೇಳಿದ.

ಅರೆ! ಹೌದಲ್ಲವೆ?

ಅವರೂ ದೆ ಕೆನಾಟ್ ಚೂಸ್ ದೇರ್ ನೇಬರ್. ಏಕೆಂದರೆ ನಾನಾಗಲೇ ಈ ಕಡೆ ಪ್ರತಿಷ್ಠಾಪನೆಗೊಂಡಿದ್ದೀನಲ್ಲ! ನಾನು ಹೇಗೋ ಏನೋ?

■

# ಥೈಲ್ಯಾಂಡ್ ಪ್ರವಾಸ ಹಾಗು  ಮೂಳೆ ವೈದ್ಯರು

ಆರತಿ ಘಟಕಾರ್

ಕೆಲ ವರ್ಷಗಳ ಹಿಂದೆ ಕುಟುಂಬ ಸಮೇತ ಹತ್ತು ದಿನಗಳ ಮಟ್ಟಿಗೆ ಮಲೇಶಿಯಾ, ಥೈಲ್ಯಾಂಡ ದೇಶಗಳ ಪ್ರವಾಸಕ್ಕೆ ಹೋಗಿದ್ದೆವು. ಥೈಲ್ಯಾಂಡ್ ರಾಜಧಾನಿ ಬ್ಯಾಂಕಾಕಿನಲ್ಲಿ ಹಲವಾರು ಆಕರ್ಷಣೀಯ ಪ್ರವಾಸಿ ತಾಣಗಳು, ಚಾವೋ ಪ್ರಾಯೋ ನದಿಯಲ್ಲಿ ದೋಣಿ ವಿಹಾರ, ಅದ್ಭುತ ವಾಸ್ತು ಶಿಲ್ಪವಿದ್ದ ಅರಮನೆ, ಸುಂದರವಾದ ಬೌದ್ದ  ದೇವಾಲಯಗಳು ಅದರಲ್ಲೂ ಬೆಟ್ಟ ಪ್ರದೇಶದಲ್ಲಿ ನೆಲೆಸಿರುವ  ಭವ್ಯವಾದ ಸ್ಲೀಪಿಂಗ್ ಬುದ್ಧನ ಮೂರ್ತಿ, ಇವೆಲ್ಲವನ್ನು  ಬೆರಗಿನಿಂದ  ಕಣ್ಣು ತುಂಬಿಕೊಳ್ಳುತ್ತಿದ್ದರೆ ನಮ್ಮ ಡಿಜಿಟಲ್ ಕ್ಯಾಮರಾ ಕಣ್ಣುಗಳು ಸಹ ರಾಶಿ ಫೋಟೋಗಳನ್ನು ಸೆರೆ ಹಿಡಿದವು. ಈ ಮೂರ್ನಾಲ್ಕು ದಿನಗಳ ನಿರಂತರ ಸುತ್ತಾಟದಿಂದ ಯಜಮಾನರು ಸುಸ್ತು ಹೊಡೆದು ಮಾರನೆ ದಿನವಿಡೀ ಹೋಟೆಲ್ ರೂಮಿನಲ್ಲಿ ಸ್ಲೀಪಿಂಗ್ ಬುದ್ಧನಂತೆಯೇ ಪವಡಿಸಿಕೊಂಡು ಬಿಟ್ಟಿದ್ದರು! ಇವರ ಶಯನೋತ್ಸವ  ಮುಗಿದು ನಂತರ ಇವರ ಕೈ ಕಾಲುಗಳಲ್ಲಿ ನವ ಚೈತನ್ಯ ತುಂಬಿಕೊಂಡು ಬ್ಯಾಂಕಾಕ್ ನಗರ ಪ್ರದಕ್ಷಿಣೆಗೆ ಅಸ್ತು ಎಂದರು. ಸರಿ ರಾಜಧಾನಿ ಬ್ಯಾಂಕಾಕ್ ನಗರಕ್ಕೆ ಹತ್ತಿರವೇ ಇರುವ ಜನಪ್ರಿಯ ಫ್ಲೋಟಿಂಗ್ ಮಾರ್ಕೆಟ್ ನೋಡಲು ಉತ್ಸಾಹದಿಂದ ಹೊರೆಟೆವು. ಉದ್ದವಾದ ಕಾಲುವೆಯಲ್ಲಿ (ಬ್ಯಾಕ್ ವಾಟರ್) ಅಲಂಕಾರಿಕ ಸಾಮಾನುಗಳಿಂದ ಹಿಡಿದು ಹಣ್ಣು ಎಳನೀರು ತಿಂಡಿ ತಿನಸುಗಳನ್ನು ಥೈ ದೇಶದ ವ್ಯಾಪಾರಿಗಳು ದೋಣಿಯಲ್ಲೇ ಮಾರುತ್ತ  ನಾವೆಯಲ್ಲಿ ಕುಳಿತ ಪ್ರಾವಾಸಿಗರನ್ನು ಸೆಳೆಯುವ ದೃಶ್ಯ ಮನ-ಮೋಹಕವಾಗಿತ್ತು. ಮುಖದಲ್ಲಿ xl ನಗು ತುಂಬಿಸಿಕೊಂಡೆ ವ್ಯಾಪಾರಿಗಳ ಕೈಯಲ್ಲೊಂದು ಕ್ಯಾಲ್ಕುಲೇಟರ್ ಹಿಡಿದು ವಸ್ತುಗಳ  ಬೆಲೆಯನ್ನು  ಆಂಗ್ಲ ಭಾಷೆಯಲ್ಲಿ ಟೈಪಿಸಿ ನಮ್ಮ ಮುಖಕ್ಕೇ ಹಿಡಿಯುತ್ತಿದ್ದರು. ಯಜಮಾನರಿಗೂ ಚೌಕಾಸಿಗೂ ಎಣ್ಣೆ ಸಿಗೇಕಾಯಿ ಸಂಬಂಧವಾದ್ದರಿಂದ, ನಾನೇ ರಂಗ ಪ್ರವೇಶ ಮಾಡಿದೆ. ಭರ್ಜರಿ ಚೌಕಾಸಿ ಮಾಡಿ  ಮಕ್ಕಳು ಆಸೆ ಪಟ್ಟ ಆಟಿಗೆಗಳು, ಸಣ್ಣ ಪುಟ್ಟ ಬುದ್ಧನ ಮೂರ್ತಿಗಳು, ಶೋ ಕೇಸ್ ಸಾಮನುಗಳನ್ನು ಖರೀದಿಸಿ ಹೊರ ಬಂದರೆ ಅದೇ ವಸ್ತುಗಳು  ಬೀದಿ ಬದಿಯ ಅಂಗಡಿಗಳಲ್ಲಿ  ಅರ್ಧ ಬೆಲೆಗೆ ಸಿಗುತ್ತಿದ್ದದನ್ನು ಕಂಡು  ಹೊಟ್ಟೆ ಉರಿದು ಎರೆಡೆರಡು ಐಸ್ಕ್ರೀಮ್ ಹೊಟ್ಟೆಗಿಳಿಸಿದ್ದಾಯಿತು! ಮುಂದೆ ನಮ್ಮ ಕ್ಯಾಬ್ ಚಾಲಕ ಕಂ ಮಾರ್ಗದರ್ಶಿ "ಐ ವಿಲ್ ಷೋ ಯೂ ಬ್ಯುತಿಫುಲ್ ರೊಚ್ ಗಾರ್ಡನ್" ಹುರುಪಿನಲ್ಲಿ ಹೇಳಿದ. ಮಕ್ಕಳು ಗಾರ್ಡನ್ ಬೇಡವೆಂದು ರಾಗವೆಳೆದಾಗ "ಡೋಂಟ್ ಮಿಚ್, ಇತ್ ಈಚ ವೆರಿ ಗುದ್ "ಎಂದು ಒತ್ತಾಯಿಸಿದ".

"ಹೀಗೆ 'ಸ' ಅಕ್ಷರಕ್ಕೆ ಬದಲು "ಚ" ಹಾಕುತ್ತಲೇ ಮಾತಾಡಿದರೂ ನಾವು ಚಕಾರ ಎತ್ತದೆ ನಕ್ಕು ಸುಮ್ಮನಾದೆವು! ಮುಂದೆ ನಮ್ಮ ಬೆಂಗಳೂರಿನ ಆಟೋ ರಿಕ್ಷಾಗಳನ್ನೇ ಹೋಲುವ ಮೂರು ಚಕ್ರದ ಟುಕ್ ಟುಕ್ ವಾಹನದಲ್ಲಿ ಮತ್ತಷ್ಟು ಪ್ರೇಕ್ಷಣೀಯ ಸ್ಥಳಗಳನ್ನೆಲ್ಲ ಸುತ್ತಾಡಿ ಗಲ್ಲಿಯೊಂದರಲ್ಲಿ ಪಂಜಾಬಿ ಹೋಟೆಲ್ ಕಂಡಾಗ ನಿಧಿ ಸಿಕ್ಕಂತಾಗಿ ಸಂಜೆ ಐದಕ್ಕೇ ರಾತ್ರಿ ಊಟವನ್ನೂ ಮರು ಭೂಮಿಯ ಒಂಟೆಯಂತೆ (ನಾವು ಸಹ ಅದರಂತೆ ಸಸ್ಯಾಹಾರಿಯಾದರಿಂದ) ಉದರಗಳಲ್ಲಿ ಸ್ಟಾಕ್ ಮಾಡಿಕೊಂಡು, ಅಲ್ಲಿಂದ ನೈಟ್ ಮಾರುಕಟ್ಟೆ ಕಡೆ ನಮ್ಮ ಸವಾರಿ ಸಾಗಿದಾಗ ರಾತ್ರಿ ಹನ್ನೆರಡು ಗಂಟೆ! ಹೆಸರೇ ಸೂಚಿಸುವಂತೆ ಅದು ನೈಟ್ ಮಾರುಕಟ್ಟೆ! ಏನೇ ಅನ್ನಿ ಗೂಬೆಗಳಂತೆ ರಾತ್ರಿ ಹೊತ್ತು ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು ನಿದ್ದೆಗೆಟ್ಟು ಓದಿದ್ದಂತೂ ನೆನಪಿಲ್ಲ, ಆದರೆ ಇಂಥ ಸರಿ ರಾತ್ರಿಯಲ್ಲಿ ಜನ ಜಂಗುಳಿಯಿಂದ ಕೂಡಿದ ಬೆಳಕಿನ ಹಬ್ಬದಂತೆ ಹೊಳೆಯುತ್ತಿದ್ದ ನೂರಾರು ಮಳಿಗೆಗಳಲ್ಲಿ  ಕಡಿಮೆ ದರದಲ್ಲಿ ಒಳ್ಳೊಳ್ಳೆ ಗುಣಮಟ್ಟದ ಬ್ರಾಂಡ್ ಬಟ್ಟೆಗಳು, ವ್ಯಾನಿಟಿ ಬ್ಯಾಗು, ನೂರೆಂಟು ಅಲಂಕಾರಿಕ, ಹಾಗು ಎಲೆಕ್ಟ್ರಾನಿಕ್ ಸಾಮಾನುಗಳು ಇವೆಲ್ಲ ನನ್ನ ಕಣ್ಣುಗಳಲ್ಲಿ ಗಿರಗಿಟ್ಟಲೆ ಆಡಿದ ಪರಿಣಾಮ ಹೋಟೆಲ್ ರೂಮಿಗೆ ವಾಪಸ್ಸಾಗಿ ಖರೀದಿಸಿದ ಸಾಮಾನುಗಳನ್ನು

ನಮ್ಮ ಸೂಟು ಕೇಸ್ಗಳಲ್ಲಿ ತುಂಬಿಸಿ ಅವುಗಳ ಬಾಯನ್ನು ಮುಚ್ಚಲು ಹರ ಸಾಹಸ ಪಡಬೇಕಾಯಿತು ಬಿಡಿ,

ಮುಂದೆ ಎರಡು ದಿನದ ಮಟ್ಟಿಗೆ ಕ್ರೂಸ್ ಶಿಪ್ನಲ್ಲಿ ಫುಕೆಟ್ ಎಂಬ ಜನಪ್ರಿಯ ಐಲ್ಯಾಂಡಿಗೆ ಬಂದಿಳಿದೆವು. ಯಜಮಾನರಿಗೆ ಅಂತರಾಷ್ಟ್ರೀಯ ಡ್ರೈವಿಂಗ್ ಲೈಸೆನ್ಸ್ ಇದ್ದ ಕಾರಣ ಕಾರೊಂದನ್ನು ಬಾಡಿಗೆಗೆ ಪಡೆದು ಪುಟ್ಟ ದ್ವೀಪ ಫುಕೆಟ್ ಸುತ್ತಾಡಲು ಹೊರಟೆವು. ಒಂದು ರಸ್ತೆ ಇಳಿಜಾರಿನಲ್ಲಿ ಬೀಚಿನ ಕಡೆ ಸಾಗುವಾಗ ನನ್ನ ಕಾಲು ಸ್ಲಿಪ್ ಆಗಿ ಜಾರಿ ಬಿದ್ದು ಬಿಟ್ಟೆ, ಇದೆ ನೆವಕ್ಕೆ ನನ್ನ ಪಾದ ಊದಿಕೊಂಡು ನೋವಾಗಿ ಹೆಜ್ಜೆಯಿಡಲು ಕಷ್ಟವಾಗತೊಡಗಿತು. ಹಾಗೆ ನೋಡಿದರೆ ನಾವು ಯಾವುದಾದರೂ ಟೂರು ಟ್ರಿಪ್ಗಳಿಗೆ ಹೋದಾಗ ನನ್ನ ಪಾದಗಳು ನನ್ನ ಮೇಲೆಯೇ ಸಿಟ್ಟು ತೋರಿಸುವಂತೆ ನನ್ನನ್ನು ಎಡವಿ ಬೀಳಿಸಿದ್ದ ಅನುಭವ ನನಗಿತ್ತು ಬಿಡಿ! ಹಿಂದೆ ನಾವುಗಳು ಸಿಂಗಪೂರ್ ಹಾಗು ಶ್ರೀಲಂಕಾ ಪ್ರವಾಸಕ್ಕೆ ಹೋದಾಗಲೂ ಕಾಲು ಉಳುಕಿ ನೋವು ಮಾಡಿಕೊಂಡಿದ್ದು ನೋಡಿದರೆ ಅದೇಕೋ ವಿದೇಶಿ ನೆಲ ಕಂಡಾಕ್ಷಣ ನನ್ನ ಕಾಲುಗಳು (ಸ್ಲೋ ಮೋಷನ್ನಲ್ಲಿ ಬೀಳಿಸಿಯಾದರೂ) ದೀರ್ಘ ದಂಡ ನಮಸ್ಕಾರ ಹಾಕಿಸಿಯೇ ಬಿಡುತ್ತವೆ ಅನಿಸುತ್ತದೆ! ನನ್ನ ಮಗರಾಯನಂತೂ "ಅಮ್ಮ! ನೀನು ಚಿಕ್ಕವಳಿದ್ದಾಗ ಸರಿಯಾಗಿ ನಡೆಯುವುದು ಕಲಿತೆ ಇಲ್ಲ ನೋಡು "ಎಂದು ರೇಗಿಸುವುದು ಬಿಡುವುದಿಲ್ಲ! ಹಾಗಾಗಿ ಜೀವನದಲ್ಲಿ ಕ್ಷಣ ಕ್ಷಣಕ್ಕೂ ವಿಪತ್ತುಗಳನ್ನು ಎದುರಿಸಬೇಕು ಎಂದು ತಿಳಿಸುವ "ಪದಂ ಪದಂ ವಿಪದಂ" ಎನ್ನುವ ತತ್ವನುಡಿಯನ್ನು ನನ್ನ ಪಾಲಿಗೆ "ಪಾದಂ ಪಾದಂ ವಿಪದಂ" ಎಂದು ಬದಲಾಯಿಸಬಹುದು!

ಸರಿ ಅಂದು ಬೆಂಗಳೂರಿನಲ್ಲಾಗಿದರೆ ನಾನು ತಕ್ಷಣ ಮೂಳೆ ವೈದ್ಯರ ಬಳಿಯೇ ಹೋಗಿಬಿಡುತ್ತಿದ್ದೆ. ಹತ್ತಿರದಲ್ಲಿ ಯಾರಾದರು ವೈದ್ಯರು ಸಿಕ್ಕರೆ ತೋರಿಸೋಣವೆಂದು ಥೈಲ್ಯಾಂಡ್ ದೇಶದವರೆ ಆದ ಒಂದಿಬ್ಬರು ದಾರಿ ಹೋಕರನ್ನು ವಿಚರಿಸಿದೆವು. ನನ್ನ ನೋವು ಅರ್ಥವಾದರೂ ವೈದ್ಯರು ಬಗ್ಗೆ ಮಾಹಿತಿ ಹೇಳಲು ಅವರಿಗೆ ಇಂಗ್ಲಿಷ್ ಬರುತ್ತಿರಲಿಲ್ಲ. ಮೊಬೈಲಿನಲ್ಲಿ ಇಂಟರ್ನೆಟ್ ಜೀಪೀಎಸ್ ಇಲ್ಲದ ಕಾಲವದು. ಅಷ್ಟರಲ್ಲಿ ಥೈಲ್ಯಾಂಡ್ನವನಂತೆಯೆ ಕಾಣುವ ಟೋಪಿವಾಲ ದಾಂಡಿಗ ಸ್ಕೂಟಿ ನಿಲ್ಲಿಸಿ "ಏನಾಯಿತು" ಎಂದು ಹರಕು ಮುರುಕು ಇಂಗ್ಲಿಷ್ನಲ್ಲಿ ಮಾತನಾಡಿಸಿದ. ನಾನು ನನ್ನ ನೋವಿನ ಪರಿಯನ್ನು ವಿವರಿಸುತ್ತ ಅಭಿನಯ ತರಬೇತಿ ಶುರುವಿಟ್ಟುಕೊಂಡೆ. "ಡಾಕ್ಟರ್ ವೇರ್" ಎಂದು ನಾವು ಕೈ ಸನ್ನೆ ಮಾಡಿದಾಗ ಅವನಿಗೆ ವೈದ್ಯರು ಇರುವ ಜಾಗ ಹೇಳವುದಿಕ್ಕಿಂತ ಇದೆ ಸಲೀಸು ಎನಿಸಿ "ಕಮ್" ಎಂದು ಗಾಡಿ ಸ್ಟಾರ್ಟ್ ಮಾಡಿದ . ನಮ್ಮ ಕಾರಿನಲ್ಲಿ ಅವನ ಹಿಂದೆ ಅರ್ಧ ಮುಕ್ಕಾಲು ಗಂಟೆ ಗಲ್ಲಿಯಿಂದ ಹಿಡಿದು ನಿರ್ಜನ ಪ್ರದೇಶಗಳನ್ನೆಲ್ಲ ಸುತ್ತಾಡಿಸುತ್ತ ಹೋದಂತೆ ನಮಗೆ ಆತಂಕ ಹೆಚ್ಚಾಗತೊಡಗಿತು. ಇವ ಮಾರಾಯ ಎಲ್ಲಿ ಕರೆದುಕೊಂಡು ಹೋಗುತ್ತಿದ್ದಾನೋ ಏನೋ, ಅಕಸ್ಮಾತ ನಮ್ಮನ್ನು ಲೂಟಿ ಮಾಡುವ ಪ್ಲಾನ್ ಹಾಕಿರಬಹುದೇ ಎಂದೆಲ್ಲ ಸಣ್ಣ ಭಯದಲ್ಲೆ ಅವನ ಹಿಂದೆ ಕಾರಿನಲ್ಲೇ ಕುರಿಯಂತೆ ಹಿಂಬಾಲಿಸಿದೆವು . ಅಂತೂ ದೇವರ ದಯೆಯಿಂದ ಒಂದು ದೊಡ್ಡ ಹಾಸ್ಪಿಟಲ್ ಮುಂದೆ ತಂದು ನಿಲ್ಲಿಸಿ "ಗೋ ಡಾಕ್ಟರ್" ಎಂದ ! ಬದುಕಿದೆಯಾ ಬಡ ಜೀವವೇ ಎಂದು ಅವನಿಗೆ ಮನಸಾರೆ ವಂದಿಸಿ ಒಳ ನಡೆದೆವು. ನನ್ನ ಅದೃಷ್ಟಕ್ಕೆ ಅದೊಂದು ಮಲ್ಟಿ ಸ್ಪೆಶಾಲಿಟಿ ಆಸ್ಪತ್ರೆಯಾಗಿದ್ದು ಅಲ್ಲಿನ ಆರತೋಪೆಡಿಕ್ ವೈದ್ಯರು ನಮ್ಮನ್ನು ಭಾರತೀಯ ಪ್ರವಾಸಿಗರು ಎಂದು ಆತ್ಮೀಯವಾಗಿ ಮಾತನಾಡಿಸಿ ನನ್ನ ಅಂಗಾಲಿನ ಎಕ್ಸ್ರೇ ಮಾಡಿಸಿ ಮೂಳೆಗೇನೂ ಪೆಟ್ಟಾಗಿಲ್ಲ ಬರೀ ಮಸಲ್ ಸ್ಪ್ರೈನ್ ಎಂದು ನೋವು ನಿವಾರಕಗಳನ್ನು ಕೊಟ್ಟರು. ಅವರ ಅದ್ಭುತವಾದ ಕೈ ಗುಣದಿಂದ ನಿಜಕ್ಕೂ ಮಾರನೆಯ ದಿನವೇ ನನ್ನ ಪಾದದ ನೋವು ಕಡಿಮೆಯಾಗಿ ಫುಕೆಟ್ ಬೀಚುಗಳನ್ನೆಲ್ಲ ಆರಾಮಾಗಿ ಸುತ್ತಿ ಬಂದೆ!

■

# ಮರೆಯಬಾರದ್ದು.....

ಪ್ರಭಾ

ಸ್ನೇಹಿತರು ನಮ್ಮನ್ನು ಎಷ್ಟು ಗಂಭೀರವಾಗಿ ಎಣಿಸುತ್ತಾರೆ ಮತ್ತು ನಮ್ಮ ಒಂದು ಒಳ್ಳೆಯ ಹಾರೈಕೆಗಾಗಿ ಹೇಗೆ ಕಾಯುತ್ತಾರೆ ಎನ್ನುವ ಒಂದು ಒಳ್ಳೆಯ ಚೇತೋಹಾರಿ ಮತ್ತು ಇಡೀ ಜೀವಮಾನ ನೆನಪಿನಲ್ಲಿ ಉಳಿಯುವ ಅಪೂರ್ವ ಅನುಭವ ನನಗಾಯಿತು. ಅದನ್ನು ತಮ್ಮೊಂದಿಗೆ ಹಂಚಿಕೊಳ್ಳುವ ಹಂಬಲ ನನಗೆ.

ರಾತ್ರಿ ಹನ್ನೊಂದರ ಸುಮಾರಿಗೆ ಫೇಸ್ ಬುಕ್‌ನಲ್ಲಿ ಮಾರನೇ ದಿವಸ ಯಾರ ಹುಟ್ಟು ಹಬ್ಬ ಎಂದು ತಿಳಿಯುವುದು ಮತ್ತು ರಾತ್ರಿ ಹನ್ನೆರಡಕ್ಕೆ ಸರಿಯಾಗಿ ಅವರ ವಾಟ್ಸಪ್ಪೊ ಅವರ ಫೋನಿಗೋ ಮೆಸೇಜ್ ಮೂಲಕ ಮತ್ತು ಅವರ ಗುಂಪಿನಲ್ಲಿ ಶುಭ ಹಾರೈಸುವುದು ಈಗೊಂದು ದಶಕದ ನನ್ನ ಅಭ್ಯಾಸ. ಇದು ಒಂದು ರೀತಿ ರೂಟೀನ್ ಆಗಿ ನಡೆದು ಬಂದಿದೆ. ಇದರಿಂದ ಆಗುವ ಸಂತೋಷ ವ್ಯಕ್ತ ಪಡಿಸಲು ಆಗದ್ದು. ಸರಿ ರಾತ್ರಿ ಇಡೀ ಪ್ರಪಂಚ ಮಲಗಿರಬೇಕಾದರೆ ಈ ಮನುಷ್ಯ ವಿಷ್ ಮಾಡಲು ಎದ್ದಿರುತ್ತೆ ಮತ್ತು ವಿಷ್ ಮಾಡ್ತಾನಲ್ಲಾ ಅಂತ ನನ್ನ ಬಗ್ಗೆ ವಿಶೇಷ ಅಭಿಮಾನ ಕೆಲವರು ವ್ಯಕ್ತ ಪಡಿಸುತ್ತಾರೆ. ಅವರ ನಂಟರು ಇಷ್ಟರಿಗೆ ಹೇಳಿಕೊಂಡು ನನ್ನ ಸೌಜನ್ಯಕ್ಕೂ ಉಘೇ ಅನ್ನುತ್ತಾರೆ! ನಾನು ಮಲಗೋದೇ ಹನ್ನೆರಡರ ಮೇಲೆ ಅಂತ ಅವರಿಗೆ ತಿಳಿಯದು. ಫ್ಯಾಕ್ಟರಿಲಿ ಕೆಲಸ ಮಾಡ್ತಿದ್ದ ನನಗೆ ಸೆಕೆಂಡ್ ಶಿಫ್ಟ್ ಮುಗಿಸಿಕೊಂಡು ಮನೆ ಸೇರಬೇಕಾದರೇನೆ ಹನ್ನೆರೆಡು ಆಗಿ ಅರ್ಧ ಗಂಟೆ ಆಗಿರ್ತಿತ್ತು. ಮಲಗೋದು ಒಂದಾಗುತ್ತಿತ್ತು. ಅಂದಿನ ಆ ಕಾಲದ ಅಭ್ಯಾಸ ಹಾಗೇ ರಿಟೈರ್ ಆದಮೇಲೆ ಸಹ ಮುಂದುವರೆದಿದೆ.

ಫೇಸ್ ಬುಕ್‌ನಲ್ಲಿ ಇಲ್ಲದ ಗೆಳೆಯರ ಹುಟ್ಟಿದ ಹಬ್ಬ ನೆನಪಿಸಿಕೊಂಡು ಹಾರೈಸುತ್ತೇನೆ. ಕೆಲವರದ್ದು ಮರೆಯಬಾರದು ಎಂದು ಡೈರಿಯಲ್ಲಿ ಬರೆದು ಇಟ್ಟು ಕೊಳ್ಳುತ್ತಿದ್ದೆ ಮೊದಮೊದಲು. ಡೈರಿ ಸಂಪ್ರದಾಯ ನಿಲ್ಲಿಸಿ ಸುಮಾರು ವರ್ಷ ಕಳೆದಿರಬೇಕು... ಡೈರಿ ಸಂಪ್ರದಾಯ ನಿಲ್ಲಿಸಿದ ನಂತರ ಸುಮಾರು ಬಂಧುಗಳಿಗೆ ಈ ವಿಶ್ ಮಾಡುವುದು ತಪ್ಪಿದೆ. ಪಾಪ ಗೋಪಿಗೆ ವಯಸ್ಸಾಯಿತು, ಹುಟ್ಟಿದ ಹಬ್ಬಕ್ಕೆ ವಿಷ್ ಮಾಡುವುದು ಮರೆತ ಅಂತ ಕಾಣುತ್ತೆ ಅಂತ ಅವರೇ ಸಮಾಧಾನ ಪಟ್ಕೊಳ್ತಾರೆ; ಕೆಲವರು ಖುಷಿ ಸಹ ಪಡಬಹುದು ವಯಸ್ಸಾಗುತ್ತಾ ಇದೆ ಅನ್ನೋದು ನೆನಪಿಸೋದು ತಪ್ಪಿಸಿದ ಪುಣ್ಯಾತ್ಮ ಅಂತ!

ತುಂಬಾ ಅಂದರೆ ತುಂಬಾ ಅಪರೂಪಕ್ಕೆ ವರ್ಷಕ್ಕೆ ಒಂದು ಸಲ ಎರಡು ಸಲ ಫೇಸ್ ಬುಕ್ ನೋಡುವುದು ಮರೆಯುತ್ತೆ. ಕೆಲಸದ ಒತ್ತಡ ಅಂತ ಅಲ್ಲ, ನನ್ನ ಸೊಂಬೇರಿ ತನ ಹಾಗೂ ಮರೆವು ಅಷ್ಟೆ..

ನಿನ್ನೆ ರಾತ್ರಿ ಫೇಸ್ ಬುಕ್ ನೋಡುವುದು ಅದ್ಯಾವುದೋ ಜ್ಞಾನದಲ್ಲಿ ಮರೆಯಿತು. ಅದ್ಯಾವುದೋ ಜ್ಞಾನ ಅಲ್ಲ, ವಯಸ್ಸಾಯಿತು, ನೆನಪಿನ ಶಕ್ತಿ ಕುಂದಿದೆ ಅಷ್ಟೇ.

ಬೆಳಿಗ್ಗೆ ಎದ್ದು ಫೇಸ್ ಬುಕ್ ನಲ್ಲಿ ಬೇರೆ ಸಂಗತಿ ನೋಡುವಾಗಲೂ ಸಹ ಕೆಲವರಿಗೆ ಹುಟ್ಟಿದ ದಿವಸದ ಶುಭ ಕೋರಿಲ್ಲ ಎನ್ನುವುದು ನೆನಪೇ ಆಗಲಿಲ್ಲ.

ಸೂರ್ಯ ಹುಟ್ಟಿದ್ದಾನೆ, ಬೆಳಿಗ್ಗೆ ಬಿಸಿ ಕಾಫಿ ಕುಡಿದೆ, ವಾಕಿಂಗ್ ಹೋಗಿದ್ದೆ,

ನಿನ್ನೆ ಚಂದ್ರ ಇತ್ತು, ಇವತ್ತು ಗಾಳಿ ಬೀಸುತ್ತಿದೆ, ಎಂದಿನ ಹಾಗೇ ರಾಜಕಾರಣಿಗಳು ಕೆಸರು ಎರಚುತ್ತಾ ಇದ್ದಾರೆ, ಪ್ರಧಾನಿಗಳು ಫಾರಿನ್ ಟೂರ್ ಹೋಗಿದ್ದಾರೆ,

ಜಗತ್ತು ಸಲೀಸಾಗಿ ನಡೆಯುತ್ತಿದೆ, ಎಲ್ಲೂ ಏನೂ ತೊಂದರೆ ಇಲ್ಲ.....ಅನಿಸಿದಾಗ ನನ್ನ ತುಂಬಾ ಆಪ್ತ ಮಿತ್ರರ ಸಂದೇಶ ವಾಟ್ಸಪ್ನಲ್ಲಿ ಕಂಡಿತು. ನನ್ನ ಆಪ್ತ ಮಿತ್ರರಿಗೆ ಈಗಾಗಲೇ ಎಪ್ಪತ್ತು ದಾಟಿದೆ ಮತ್ತು ಕೆಲ ಸಮಯ ಆರೋಗ್ಯ ಕೆಟ್ಟಿದ್ದು ಈಗ ಚೇತರಿಸಿಕೊಂಡಿದ್ದಾರೆ. ಎರಡು ವರ್ಷದ ಹಿಂದೆ ತುಂಬಾ ಆಪ್ತರನ್ನು ಕಳೆದುಕೊಂಡಿದ್ದರು. ಅವರು ಸಾಹಿತ್ಯ ಪ್ರೇಮಿ . ಹೀಗಾಗಿ ನನ್ನ ಅವರ ನಡುವೆ ಸಾಹಿತ್ಯ ಕುರಿತಾದ ಬಿಸಿ ಬಿಸಿ ಚರ್ಚೆ ತುಸು ಓವರ್ ಅನಿಸುವಷ್ಟು ಹೆಚ್ಚೇ.


"ನಾನಿನ್ನು ಬದುಕಿದ್ದೀನಿ. ಇವತ್ತು ತಮ್ಮಿಂದ birthday wish ನಿರೀಕ್ಷಿಸಿದ್ದೆ...." ಎನ್ನುವ ಸಂದೇಶ ನನ್ನ ವಾಟ್ಸಾಪ್ ನಲ್ಲಿ ಕಾಣಿಸಬೇಕೇ....? ಈ ಸಂದೇಶ ಎಂತಹ ಶಾಕ್ ಕೊಟ್ಟಿತು ಎಂದರೆ ಕಣ್ಣಿನಲ್ಲಿ ನನ್ನ ಅರಿವಿಗೆ ಬಾರದ ಹಾಗೆ ಕೆಲವು ಹನಿಗಳು ಮಡುಗಟ್ಟಿದವು.

ಇಂತಹ ಗೆಳೆಯರನ್ನು ಮರೆಯುವುದು ಅಂದರೆ ಅದು ನನ್ನ ಜೀವನದ ಅತ್ಯಂತ ಬಾರೀ ತಪ್ಪೇ ಸರಿ..

ಛೇ ಪಾಪ ರಾತ್ರಿ ಹನ್ನೆರಡು ಗಂಟೆಯಿಂದ ನನ್ನ ಹಾರೈಕೆಗೆ ಕಾದು ಕಾದು ಈಗ ಈ ಮೆಸೇಜ್ ಹಾಕಿದ್ದಾರೆ ಅನಿಸಿತು.

ಪಾಪ, ರಾತ್ರಿ ಸರಿ ಹೊತ್ತಿನಿಂದ ಹಾರೈಕೆಗೆ ಕಾದಿದ್ದಾರೋ, ಎಂತಹ ಮರೆವು ನನ್ನದು ಎಂದು ಬೇಸರಿಸಿಕೊಂಡೇ ಆಗಿರುವ ತಪ್ಪನ್ನು ಕೊಂಚ ತೇಪೆ ಹಾಕಿ ಸರಿಪಡಿಸುವ ನಿಟ್ಟಿನಲ್ಲಿ ಪ್ರಯತ್ನಿಸಿದೆ. ......

ಕೊನೆಗೂ ಆಪ್ತ ಮಿತ್ರರ ನಿರೀಕ್ಷೆ ಹುಸಿ ಗೊಳಿಸಲಿಲ್ಲವಲ್ಲ ಎನ್ನುವ ಅಲ್ಪ ಸಮಾಧಾನ ಮೂಡಿದರೂ ಇನ್ನೂ guilt ತಪ್ಪು ಮಾಡಿದ ಮನೋಭಾವ ಕಾಡುತ್ತಿದೆ..... ಮುಂದಿನ ವರ್ಷವಾದರೂ ಅವರಿಗೆ ಮರೆಯದೇ ರಾತ್ರಿ ಹನ್ನೆರಡಕ್ಕೆ ಶುಭ ಕೋರಲೇ ಬೇಕು ಎಂದು ತಲೆಯಲ್ಲಿ ಗುರುತು ಹಾಕಿಕೊಂಡೆ.....! ■



# ಹೆಸರೇನ ನಾ ಹೇಳಲೀ

ಮೂರ್ತಿ ಬಿ.ಎಲ್.ಆರ್

ಸರ್ವದೇವ ನಮಸ್ಕಾರ: ಕೇಶವಂ ಪ್ರತಿಗಚ್ಛತಿ ಎನ್ನುತ್ತಾರೆ. ಒಬ್ಬ ದೇವರಿಗೆ ಒಂದೊಂದು ಅವತಾರದಲ್ಲಿ ಒಂದೊಂದು ಹೆಸರು. ದೇವರು ಸೃಷ್ಟಿಸಿದ ಮಾನವನಿಗೂ ಹತ್ತಾರು ಹೆಸರುಗಳು ಇರಬಾರದೇಕೆ ಅಂದರೆ ಈಗೀಗ ನಾಮಕರಣ ಮಾಡಿದ ಹೆಸರೇ ಸರಿಯಾಗಿ ಉಪಯೋಗವಾಗುತ್ತಿಲ್ಲ ಇನ್ನು ಹತ್ತಾರು ಹೆಸರುಗಳಿಂದೇನು ಪ್ರಯೋಜನ ಅಲ್ವೆ. ಮಗುವಿನ ಐಡೆಂಟಿಟಿಗೆ ಇಟ್ಟ ಹೆಸರು ವ್ಯಾವಹಾರಿಕವಾಗಿರುತ್ತೆ. ಮಗುಗೆ ಅವರೇ ನಾಮಕರಣ ಮಾಡಿದ ಹೆಸರನ್ನೇ ತಂದೆ ತಾಯಿಯರು ಮೊಟಕುಗೊಳಿಸಿ ಯಾರಿಗೂ ಅರ್ಥವಾಗದ ಏನೂ ಅರ್ಥವಿರದ ಹೆಸರಿನಿಂದ ಮಗುವನ್ನು ಕರೆಯುತ್ತಾರೆ. ಎಷ್ಟೋ ಮಕ್ಕಳ ಹೆಸರು ಕೇಳಿದರೆ ಇದು ಮಗು ಹೆಸರೋ ಇಲ್ಲಾ ಪ್ರಾಣಿಗಳ ಹೆಸರೋ ಅಂತ ಗೊಂದಲವಾಗುತ್ತೆ.

ಗುಂಪಿನಲ್ಲಿ ಗೋವಿಂದ ಆಗಿಬಿಟ್ಟರೆ ಹುಡುಕೋಕೆ ಇಟ್ಟ ಹೆಸರು ಉಪಯೋಗವಾಗುತ್ತೆ. ದೊಡ್ಡ ಜಾತ್ರೆಯೊಂದರಲ್ಲಿ ಗಂಡ ನಾಪತ್ತೆ. ಹೆಂಡತಿ ಏನೂಂದ್ರೇ, ಏನೂಂದ್ರೇ ಅಂತ ಮೂರ್‍ನಾಲ್ಕು ಸಾರಿ ಕೂಗಿದರೂ ಗಂಡ ಕಾಣಿಸಲಿಲ್ಲ. ಗುಂಪಲ್ಲಿ ಕಾಣುತ್ತಿದ್ದ ತಲೆಗಳಿಂದಲೇ ಗಂಡನನ್ನು ಹುಡುಕಲು ಪ್ರಯತ್ನಿಸಿದಳು. ಇವಳ ಫಜೀತಿಯನ್ನು ಗಮನಿಸಿದ ಪಕ್ಕದಲ್ಲಿದ್ದಾಕೆ "ಕೂಗಿದ್ರೆ ನಿಮ್ಮ ಧ್ವನಿ ಅವರಿಗೆ ಕೇಳಬೇಕು ಹಾಗೆ ಕೂಗಿ. ಬರೀ ತಲೆ ಹುಡುಕಿದರೆ ಪ್ರಯೋಜನವಿಲ್ಲ. ಅಷ್ಟಕ್ಕೂ ಗಂಡಸರಿಗೆ ತಲೆ ಎಲ್ಲಿರುತ್ತೆ." ಅಂದಳು. ಹೆಂಡತಿ "ರೀ ರೀ ರೀ" ಅಂತ ಅರಚಿದಳು. ಪಕ್ಕದಲ್ಲಿದ್ದವಳು "ರೀ ಅಂದ್ರೆ ಯಾರ್‍ಯಾರೋ ತಿರುಗಿ ನೋಡಬಹುದು. ನಿಮ್ಮ ಗಂಡನ ಹೆಸರು ಕೂಗಿ "ಅಂದಳು. ಆಗ ಇವಳು" ಕೇಶವಮೂರ್ತಿ, ಕೇಶವಮೂರ್ತಿ "ಅಂತ ಕೂಗಿದಳು. ಗಂಡ ಬರಲಿಲ್ಲ. ಇನ್ಯಾರೋ ಒಬ್ಬರು ಬಂದು" ಮೇಡಂ ಕೂಗಿದ್ರಾ ನಾನೇ ಕೇಶವಮೂರ್ತಿ" ಅಂದು ಅವಳಿಗೆ ಸಿಟ್ಟು ತರಿಸಿದರು. ಕೂಗೋರದ್ದು, ಕೂಗಿಸಿಕೊಳ್ಳೋರದ್ದು ಯಾವುದೇ ಹೆಸರಿರಬಹುದು. ಜನಜಂಗುಳಿಯಲ್ಲಿ ಹೆಸರು ಕೂಗಿದ ಧ್ವನಿಯನ್ನು ಅನುಸರಿಸಿ ದೂರದಲ್ಲೆಲ್ಲೋ ತಳ್ಳಲ್ಪಟ್ಟಿರುವವರು ಹತ್ತಿರ ಬರಬಹುದೆನ್ನುವ ಆಸೆಯಿಂದ ಗಂಡ ಹೆಂಡತಿಯನ್ನು ಎತ್ತರದ ಧ್ವನಿಯಿಂದ ಲೇ ಎಂತಲೋ ಹೆಂಡತಿ ಗಂಡನನ್ನು ರೀ ಎಂದೋ ಕೂಗಿದರೆ ಪ್ರತಿಕ್ರಿಯೆ ಸಿಗಬಹುದೇನೋ. ಕನ್ನಡದವರ ಕಥೆ ಇದಾದರೆ ಇಂಗ್ಲಿಷಿನವರ ಕಥೆಯೇನು ಎನ್ನುವ ಕುತೂಹಲಕ್ಕೆ ತಮಾಷೆಯಾಗಿ ಕನ್ನಡದವರು ಹೆಂಡತಿಯನ್ನು ಕೂಗುತ್ತಾರೆ ಲೇ ಎಂದು, ತಮಿಳಿನವರು ಹೆಂಡತಿಯನ್ನು ಕೂಗುತ್ತಾರೆ ಡೀ ಎಂದು ಅವೆರಡನ್ನೂ ಸೇರಿಸಿ ಇಂಗ್ಲಿಷಿನವರು ಕೂಗುತ್ತಾರೆ ಹೆಂಡತಿಯನ್ನು ಲೇಡಿ ಎಂದು ಅಂತ ಹೇಳಬಹುದು.

ಓದಿನ ದಿನಗಳಲ್ಲಿ ನಂತರ ಕೆಲಸಕ್ಕೆ ಸೇರಿದ ಮೊದಲ ದಿನಗಳಲ್ಲಿ ಹೆಸರು ಚನ್ನಾಗಿ ಬಳಕೆಯಾಗುತ್ತೆ. ಆಮೇಲೆ ಅದು ಸರ್ ಆಗಿಬಿಡುತ್ತೆ. ಸಾಹೇಬರೂ ಕೂಡಾ ಹೆಸರು ಕೂಗದೇ ಅಕೌಂಟೆಂಟ್ ಕರೀರಿ, ಮ್ಯಾನೇಜರ್ ಕರೀರಿ, ಟೈಪಿಸ್ಟ್ ಕರೀರಿ ಅಂತಾರೆ. ಉದ್ಯೋಗಿಗಳೂ ಸಾಹೇಬರು ಅಂತಾರ್‍ಯೇ ಹೊರತು ಸಾಹೇಬರ ಹೆಸರು ಹೇಳೋಲ್ಲ. ಸಹೋದ್ಯೋಗಿಗಳಲ್ಲಿ ಅತ್ಯಾಪ್ತರಾದ ಕೆಲವರು ಅವರೇ ಅಡ್ಡಹೆಸರಿಡುತ್ತಾರೆ. ಕೆಲವರು ಹೆತ್ತವರಿಗೆ ಹೆಗ್ಗಣ ಮುದ್ದು ಎನ್ನುವಂತೆ ಟೆಲಿಫೋನ್ ಸಂಭಾಷಣೆಗಳಲ್ಲಿ ಹಲೋ ಕೇಶವಮೂರ್ತಿ ಹಿಯರ್ ಅಂತ, ಕೇಶವಮೂರ್ತಿ ಅಂದ್ರೆ ಏನಂದ್ಕೊಂಡಿದೀಯ, ಕೇಶವಮೂರ್ತಿ ಅಂಥೋನಲ್ಲ, ಕೇಶವಮೂರ್ತಿ ಹತ್ರ ಜೋಕೆ ಅಂತ ಪದೇ ಪದೇ ತಮ್ಮ ಹೆಸರನ್ನು ತಾವೇ ಹೇಳಿಕೊಂಡು ಆನಂದಿಸುತ್ತಾರೆ

ಕೆಲವರು ಹೆಸರು ಕೂಗುವಾಗ ಅಪಭ್ರಂಶ ಮಾಡೋದು ಗಮನಿಸಿದರೆ ಹೆಸರು ಕರೆಯದೇ ಇರೋದೇ ವಾಸಿ ಅನಿಸಿಬಿಡುತ್ತೆ. ಒಂದು ದಿನ ಯಜಮಾನರು

ವರಾಂಡದಲ್ಲಿ ಕಾಲು ಚಾಚಿದ್ದಾಗ ಹೊರಗಡೆ ಯಾರೋ ಗಟ್ಟಿಯಾಗಿ ಕೇ ಶವಮೂರ್ತಿ, ಕೇ ಶವಮೂರ್ತಿ ಅಂತ ಕೂಗುತ್ತಿದ್ದರು. ಯಾರಪ್ಪಾ ಅದು ಅಂತ ಎದ್ದು ಹೋದರೆ "ನೀ ನೀವೇನಾ, ಕೇ ಶವಮೂರ್ತಿ" ಅಂತ ಕೇಳಿದರು. ಇವರಿಗೆ ಸಿಟ್ಟು ಬಂದು "ಲೇಯ್ ನಾನು ಕೇ ಶವಮೂರ್ತಿ ಅಲ್ಲ ಕೇಶವಮೂರ್ತಿ ನನ್ನ ಹೆಸರು ಸರಿಯಾಗಿ ಉಚ್ಚರಿಸು" ಅಂದರು. ಅದಕ್ಕೆ ಅವರು "ಸರ್. ನನಗೆ ಉ ಉ ಉ ಉಗ್ಗು. ಕೇ ಶವ ಮೂರ್ತಿ ಒಟ್ಟಿಗೇ ಹೇ ಹೇಳೋ ಕೆ ಬರಲ್ಲ" ಅಂದು ಕೊರಿಯರ್ ಕೊಟ್ಟು ಹೋದರು. ಬದುಕಿರುವಾಗಲೇ ಶವ ಮಾಡುವ ಹೆಸರು ಇದು.

ಸಂಬಂಧಗಳು ಬೆಳೆದಂತೆಲ್ಲಾ ಇಟ್ಟ ಹೆಸರು ಮರೆಯಾಗೋದು ಸ್ವಾಭಾವಿಕ. ಮನೆ ಯಜಮಾನ ಅಂದರೆ ಗಂಡನನ್ನು ಹೊರಗೆ ಹೆಸರಿನಿಂದ ಗುರುತಿಸಿದರೂ ಮನೇಲಿ ಹೆಂಡತಿ ರೀ ಅಂತ ಕರೆಯುವುದರಿಂದ ಹೆಸರು ಬೇಕಾಗಿಲ್ಲ. ಹೆಸರು ಗೋಡೆಯ ಮೇಲಿನ ಬೋರ್ಡಿಗಷ್ಟೇ. ಎಷ್ಟೋ ಮನೆಗಳಲ್ಲಿ ಹೆಂಡತಿಯರು ಗಂಡನನ್ನು ಹೆಸರಿನಿಂದಲೂ ಕರೆಯದೇ, ರೀ ಎಂತಲೂ ಕರೆಯದೇ ಚಿನ್ನೂ, ಗುಡ್ಡೂ, ಪಡ್ಡೂ ಅಂತ ಕರೀತಾರೆ. ಶ್ರೀನಿವಾಸ ಶೀನೂವಾಗಿ, ನಾರಾಯಣ ನಾಣಿಯಾಗಿ, ಮಧುಸೂದನ ಮದ್ದು ಆಗಿ ಬದಲಾಗಿರುತ್ತಾರೆ. ಹೆಂಡತಿ ಕರೆಯೇ ಆಪ್ಯಾಯಮಾನ. ಅದಕ್ಕೇ ಇಂಥಾ ಅಡ್ಡ ಹೆಸರುಗಳಿಗೆ ಗಂಡಸರ ಸಹಮತವಿರುತ್ತದೆ. ಕಣ್ಣಿಂದ ಮರೆಯಾದದ್ದು ಮನಸಿನಿಂದಲೂ ಮರೆಯಾಗುತ್ತೆ ಎನ್ನೋ ಇಂಗ್ಲಿಷ್ ಗಾದೆಯಂತೆ ಬಹಳ ಕಾಲ ಹೆಸರು ಕಿವಿಗೇ ಬೀಳದಿದ್ದರೆ ಅದು ಮೆದುಳಿನಿಂದ ಮರೆಯಾಗುತ್ತೆ ಅಂತ ಗಾದೆ ಸೃಷ್ಟಿಮಾಡಬಹುದು.

ಯಜಮಾನರು ಜಗಲಿಯಲ್ಲಿ ಬೆಂಕಿ ಕಡ್ಡಿಯಿಂದ ಕಿವಿ ತೊಳಸಿಕೊಂಡು ಪೇಪರ್ ಓದುತ್ತಿದ್ದರು. ಪೋಸ್‌ಮ್ಯಾನ್ ಬಂದು "ಸರ್ ಕೇಶವಮೂರ್ತಿ ಅಂದರೆ ನೀವೇನಾ "ಅಂತ ಕೇಳಿದರು. ಯಜಮಾನರ ಪ್ರತಿಕ್ರಿಯೆ ಇಲ್ಲ."ಇಲ್ಲಿ ಕೇಶವಮೂರ್ತಿ ಅನ್ನೋರ ಮನೆ ಯಾವುದು "ಅಂತ ಕೇಳಿದರು. ಗೊತ್ತಿಲ್ಲ ಅಂತ ಪೇಪರ್‌ನಿಂದ ದೃಷ್ಟಿ ಬದಲಿಸದೇ ತಲೆಯಾಡಿಸಿದರು. ಮತ್ತೆ ಪೋಸ್ಟ್‌ಮ್ಯಾನ್ "ಹೋಗ್ಲಿ ನಿಮ್ಮ ಹೆಸರೇನು ಸರ್. ಯಾಕೆಂದರೆ ಕೊರಿಯರಲ್ಲಿ ನಿಮ್ಮನೆ ಅಡ್ರೆಸ್ಸಿದೆ "ಅಂದರು. ನನ್ನ ಹೆಸರು ಅಲ್ಲಿದೆ ಅಂತ ಬೋರ್ಡ್ ತೋರಿಸಿದರು. ಅದರಲ್ಲಿ ಕೇಶವಮೂರ್ತಿ ಅಂತಲೇ ಇತ್ತು. ಆಗ ಪೋಸ್ಟ್‌ಮ್ಯಾನ್ "ರೀ ಸ್ವಾಮಿ ನಿಮಗೆ ರಿಜಿಸ್ಟರ್ ಪತ್ರ ಬಂದಿದೆ. ಸೈನ್ ಮಾಡಿ ತಗೊಳಿ" ಅಂದರು ಅಸಹನೆಯಿಂದ. ಆಗ ಅವರು ಪೋಸ್ಟ್‌ಮ್ಯಾನ್ ನೋಡಿ ಕಿರುನಗೆ ಬೀರಿ ಸಹಿ ಮಾಡಿ ಪತ್ರ ಪಡೆದರು. ಪೋಸ್ಟ್‌ಮ್ಯಾನ್ ಹೊರಡುವಾಗ ಮೊದಲು "ನಾನು ಕೇಶವಮೂರ್ತಿ ಅಂದ್ರೆ ನೀವೇನಾ ಅಂತ ಕೇಳಿದರೆ ಅಲ್ಲ ಅಂತ ಯಾಕೆ ತಲೆ ಅಲ್ಲಾಡಿಸಿದಿರಿ" ಅಂತ ಕೇಳಿದರು. ಯಜಮಾನರು ನಕ್ಕು "ಈಗೀಗ ನನಗೇ ನನ್ನ ಹೆಸರು ಮರೆತೇಹೋಗಿದೆ. ಸರ್ವಿಸಲ್ಲಿದ್ದಾಗ ದಿನಕ್ಕೆ ಐವತ್ತು ಸಾರಿಯಾದರೂ ನನ್ನ ಹೆಸರು ನನ್ನ ಕಿವಿಗೆ ಬೀಳುತ್ತಿತ್ತು. ರಿಟೈರ್ ಆಗಿ ಆರು ತಿಂಗಳಾಯಿತು. ಪೆನ್‌ಷನ್ ತಗೊಳೋಕೆ ಚೆಕ್ಕಿಗೆ ಸಹಿ ಮಾಡುವಾಗ ಮಾತ್ರ ನನಗೆ ನನ್ನ ಹೆಸರು ನೆನಪಾಗುತ್ತೆ. ಮಿಕ್ಕಂತೆ ನನ್ನ ಹೆಸರು ನನ್ನ ಕಿವಿಗೇ ಬೀಳೋದು ಕಡಿಮೆ. ಹೊರಗಡೆ ಯಾರಾದರೂ ನನ್ನ ಹೆಸರು ಕೂಗಿದರೆ ಅವತ್ತು ಪಾಯಸ ಕುಡಿದಷ್ಟು ಸಂಭ್ರಮ "ಅಂದರು. ಪೋಸ್ಟ್‌ಮ್ಯಾನ್ ಇವರನ್ನು ವಿಚಿತ್ರವಾಗಿ ನೋಡಿ "ಆದಷ್ಟು ಬೇಗ ಯಾರಾದರೂ ಒಳ್ಳೇ ಡಾಕ್ಟರ್ ಹತ್ರ ತೋರಿಸ್ಕೊಳಿ" ಅಂದು ಹೊರಟುಹೋದರು.

ಎಲ್ಲಿಯೂ ತಮ್ಮ ಹೆಸರು ಉಪಯೋಗವಾಗಲ್ಲ ಅಂತ ಒದ್ದಾಡೋರು ಆಗಾಗ ದೇವಸ್ಥಾನಗಳಿಗೆ ಹೋಗಿ ಸಂತೋಷಪಟ್ಕೊತಾರೆ. ಏಕೆಂದರೆ ಅಲ್ಲಿ ಹೋಗಿ ಅಷ್ಟೋತ್ತರ ಮಾಡಿಸಿದರೆ ತಮ್ಮ ಹೆಸರನ್ನು ತಾವೂ ಹೇಳಿಕೊಳ್ಳಬಹುದು, ಅದನ್ನು

ಭಟ್ಟರೂ ರಿಪೀಟ್ ಮಾಡಿದಾಗ ಇನ್ನೂ ಸಂತೋಷವಾಗುತ್ತೆ. ಒಂದೇ ದೇವರು ಒಂದೊಂದು ಅವತಾರದಲ್ಲಿ ಬೇರೆ ಬೇರೆ ಹೆಸರು ಪಡೆದು ಅವತಾರ ಮುಗಿಸಿ ಎಷ್ಟೋ ಸಾವಿರ ವರ್ಷಗಳಾದರೂ ಇಂದಿಗೂ ಜನರು ಆಯಾ ಅವತಾರದ ಹೆಸರುಗಳನ್ನೇ ಹೇಳುತ್ತಾರೆ. ಯಾವುದೇ ಅವತಾರದ ದೇವರ ಹೆಸರನ್ನು ಮೊಟಕುಮಾಡುವ ಧೈರ್ಯ ಯಾರಿಗೂ ಇಲ್ಲ.

ಉಸಿರು ಹೋದರೂ ಹೆಸರಿರಬೇಕು ಎಂದು ಜನ, ಸರ್ಕಾರ ಕಷ್ಟಪಟ್ಟು ಪ್ರಸಿದ್ಧರಾದವರ ಹೆಸರುಗಳನ್ನು ರಸ್ತೆಗಳಿಗೆ, ಕಟ್ಟಡಗಳಿಗೆ ಇಟ್ಟು ಅವರ ಹೆಸರು ಅಜರಾಮರ ಮಾಡಿದೀವಿ ಅಂದ್ಕೊತಾರೆ. ಆದರೆ ಒಂದಿಷ್ಟು ವರ್ಷ ಕಳೆದ ಮೇಲೆ ಆ ಹೆಸರುಗಳೂ ತಮ್ಮ ಸ್ವರೂಪವನ್ನು ಕಳೆದುಕೊಳ್ಳುತ್ತವೆ. ಮಹಾತ್ಮಾಗಾಂಧಿ ಎಂ.ಜಿ ಆಗಿಹೋಗಿದ್ದಾರೆ. ಕೆಲವು ಕಡೆ ಮೋ.ಕ ಆಗಿದ್ದಾರೆ. ಇನ್ನು ಕುವೆಂಪು ಹೆಸರು ಇಟ್ಟ ರಸ್ತೆಗಳು ಎಂ.ಕೆ. ಕೆ. ರಸ್ತೆ ಆಗಿದೆ (ಮಹಾಕವಿ ಕುವೆಂಪು ರಸ್ತೆ) ದತ್ತಾತ್ರೇಯ ರಾಮಚಂದ್ರ ಬೇಂದ್ರೆ, ದ.ರಾ.ಬೇಂದ್ರೆ ಆದರೆ ತಪ್ಪಿಲ್ಲ ಆದರೆ ಅದು ಡಿ.ಆರ್. ಬೇಂದ್ರೆ ಆದರೆ ಹೇಗೆ. ಇದು ಕೇವಲ ಉದಾಹರಣೆ. ರಸ್ತೆಯ ಹೆಸರುಗಳಲ್ಲಿ ಅಪಭ್ರಂಶವಾಗೋಷ್ಟು ಇನ್ನೆಲ್ಲೂ ಆಗೋಲ್ಲ. ಕೆಲವು ವರ್ಷಗಳ ಹಿಂದೆ ರಂಗರಾವ್ ರಸ್ತೆಯನ್ನು ಕಿಡಿಗೇಡಿಗಳು ಠಠಠಠಾವ್ ರಸ್ತೆ ಎಂದು ಬದಲಿಸಿದ್ದರು.

ಆರ್ಮಿಯಲ್ಲಿ, ನೇವಿಯಲ್ಲಿ, ಏರ್ ಫೋರ್ಸ್‌ಗಳಲ್ಲಿ ಸೇವೆ ಸಲ್ಲಿಸಿದವರ ಹೆಸರಿಗೆ ಅಧಿಕಾರದಲ್ಲಿದ್ದಾಗ ಕೊಟ್ಟಿದ್ದ ಹುದ್ದೆಯ ಹೆಸರೂ ಸೇರಿಕೊಂಡು ಅವರು ನಿವೃತ್ತರಾದರೂ ಹುದ್ದೆಯೇ ಹೆಸರಾಗಿ ಅಸಲಿ ಹೆಸರು ಮರೆತಿರುತ್ತೆ. ವಿಂಗ್ ಕಮಾಂಡರ್, ಸ್ಕ್ವಾಡ್ರನ್ ಲೀಡರ್, ಲೆಫ್ಟಿನೆಂಟ್ ಕರ್ನಲ್ ಇತ್ಯಾದಿ ಹೆಸರುಗಳೇ ಪ್ರಮುಖವಾಗಿರುತ್ತವೆ. ಆಸ್ಪತ್ರೆಗಳಲ್ಲಿ ಸಿಬ್ಬಂದಿಗಳೂ ರೋಗಿಗಳೂ ಡಾಕ್ಟರ್, ಸಿಸ್ಟರ್ ಅಂತ ಕೂಗೋದರಿಂದ ಅವರ ನಿಜವಾದ ಹೆಸರು ಯಾರಿಗೂ ಬೇಕಾಗಿರೋಲ್ಲ.

ವಯಸ್ಸಾಗಿ ಜನಸಂಪರ್ಕ ಕಡಿಮೆಯಾದಾಗ ಈ ಸಮಸ್ಯೆ ಎಲ್ಲರನ್ನೂ ಕಾಡಬಹುದು. ಈಗೀಗ ಮನುಷ್ಯನಿಗೇ ಬೆಲೆ ಇಲ್ಲ ಎನ್ನುವಂತಾಗಿರುವಾಗ ಇನ್ನು ಅವನ ಹೆಸರಿಗೇನು ಬೆಲೆ. ಎಷ್ಟೋ ಜನರಿಗೆ ಅವರಿರುವಾಗಲೇ ಹೆಸರು ಉಳಿದಿರುವುದಿಲ್ಲ. ಇರುವ ತನಕ ಅಪರೂಪಕ್ಕೊಮ್ಮೆ ಹೆಸರು ಕೂಗಿದರೂ ಉಸಿರು ಹೋದ ಮರುಕ್ಷಣವೇ ಅವರು ಬಾಡಿ, ಹೆಣ ಅಂತ ಅನಿಸಿಕೊಳ್ಳುತ್ತಾರೆ. ಅದಕ್ಕೇ Body ಹೋದ ಮೇಲೂ Bodyಗೆ ಬೆಲೆ ಇರುವಂಥ ಬಾಡಿ ಹೋಗದಂಥಾ ಕೆಲಸ ಮಾಡಿರಬೇಕು ಅಂತ ನಮ್ಮ ಹಿರಿಯರು ಹೇಳುತ್ತಿದ್ದರು. ಹೊರಗಡೆ ವಿಚಾರ ಹಾಳಾಯ್ತು, ಮನೇಲೇ ಅವರ ಹೆಸರು ಯಾರಿಗೂ ಬೇಡ. ಆದರೂ ಹೆಣ್ ಮಕ್ಳೇ ಸ್ಟ್ರಾಂಗು ಗುರು ಎನ್ನುವಂತೆ ಗಂಡನ ಹೆಸರನ್ನು ಕೆಲವು ಮನೆಗಳ ಹೆಂಗಸರು ಅಷ್ಟಿಷ್ಟಾದರೂ ಉಪಯೋಗ ಮಾಡಿಕೊಂಡು ಮಿಸೆಸ್ ಗುಂಡಣ್ಣ ಮಿಸೆಸ್ ಪರಮೇಶ್ ಅಂತ ತಮ್ಮನ್ನು ಗುರುತಿಸ್ಕೊಳ್ತಾರೆ.

ಹೆಂಡತಿ ಮನೆಯಲ್ಲಿ ಗಂಡನನ್ನು ರೀ, ಗುಡ್ಡೂ, ಚಿನ್ನೂ, ಮನ್ನೂ ಅಂತೆಲ್ಲಾ ಕರೆದರೆ ಮಗ ಅಣ್ಣಾ ಅಂತಾನೆ, ಮಗಳು ಅಪ್ಪಾ ಅಂತಾಳೆ, ಹೆಂಡತಿ ತಮ್ಮನೋ, ತಂಗಿಯೋ ಭಾವ ಅಂದರೆ, ಮಾವ ಅಳಿಯಂದಿರೇ ಅಂತಾರೆ, ತಮ್ಮನ ಮಕ್ಕಳು ದೊಡ್ಡಪ್ಪಾ, ಅಣ್ಣನ ಮಕ್ಕಳು ಚಿಕ್ಕಪ್ಪಾ ಅಂತಾರೆ. ಮನೆಕೆಲಸದವಳು ಅಪ್ಪಾವ್ರೇ ಅಂತಾಳೆ. ತರಕಾರಿಯವನು ರೀ ಸ್ವಾಮಿ ಅಂತಾನೆ. ಪೇಪರಿನವನು ಯಜಮಾನ್ರೇ ಅಂತಾನೆ. ಪರಿಚಯದ ಹೆಣ್ಣು ಮಕ್ಕಳು ಅಂಕಲ್ ಅಂತಾರೆ. ರಸ್ತೆಯಲ್ಲಿ ಅಡ್ಡ ಬಂದರೆ ಯೂ ಓಲ್ಡ್ ಮ್ಯಾನ್, ರಸ್ತೆಯ ಭಿಕ್ಷುಕ ಅಯ್ಯಾ ಅಂತಾನೆ. ಹೀಗೆಲ್ಲಾ ಇರಬೇಕಾದರೆ ಹೆಸರು ಯಾವೋನಿಗೆ ಬೇಕು ಅನಿಸೋದಿಲ್ವೇ. ಪಕ್ಕದ ಮನೆಯಾಕೆ ಬಂದು ನೆನ್ನೆ ನಿಮ್ಮ ಮನೆಯಲ್ಲಿ ಯಾರೋ ಗಂಡಸರು ಓಡಾಡ್ತಾ ಇದ್ದ ಹಾಗಿತ್ತು

ಅಂದರೆ ಈಕೆ ಅವರು ಗಂಡಸರಲ್ಲ ರೀ ನಮ್ಮ ಯಜಮಾನರು ಅಂದ್ಲಂತೆ.

ಕೂಗಬಾರದವರು ತಮ್ಮ ಹೆಸರು ಕೂಗಿದರೆ ನಖಶಿಖಾಂತ ಕೋಪ ಬರುತ್ತೆ. ಇಂಥವರ ಪಟ್ಟಿಯಲ್ಲಿ ಭಿಕ್ಷುಕರು ಸೇರುತ್ತಾರೆ. ಒಂದು ದಿನ ಒಬ್ಬ ಭಿಕ್ಷುಕ ಗೋವಿಂದಸ್ವಾಮಿಯವರೇ ಭಿಕ್ಷೆ ಹಾಕ್ತೀರಾ ಅಂತ ಮೂರು ನಾಲ್ಕು ಸಾರಿ ಕೂಗಿದಾಗ ಸಿಟ್ಟಿನಿಂದಲೇ ಆಚೆ ಬಂದು "ಲೋ ಯಾವೋನೋ ನನ್ನನ್ನು ಹೆಸರಿಂದ ಕೂಗೋನು "ಅಂದರು. ಭಿಕ್ಷುಕ ಮೆಲ್ಲಗೆ "ನಿಮ್ಮ ಹೆಸರು ಗೋವಿಂದಸ್ವಾಮಿ ತಾನೇ, ನನಗೆ ಭಿಕ್ಷೆ ಬೇಕು ಅದಕ್ಕೆ ನಿಮ್ಮ ಹೆಸರಿಗೆ ಅವರೇ ಸೇರಿಸಿ ಗೋವಿಂದಸ್ವಾಮಿಯವರೇ ಮರ್ಯಾದೆಯಿಂದ ಭಿಕ್ಷೆ ಹಾಕಿ ಅಂತ ಕೂಗಿದೆ" ಅಂದ. ಯಜಮಾನರು ಸಿಟ್ಟಾಗಿ "ಝಾಡಿಸಿ ಒದ್ದುಬಿಡ್ತೀನಿ, ಭಿಕ್ಷೆ ಬೇಡೋನು ಅಮ್ಮಾ, ತಾಯಿ, ಅಣ್ಣಾ, ಅಪ್ಪಾ, ಯಜಮಾನರೇ ಅಂತಾರೆ. ನಿನ್ನ ಹಾಗೆ ಯಾರೂ ಹೆಸರು ಕೂಗೋದಿಲ್ಲ" ಅಂದರು. ಅದಕ್ಕೆ ಭಿಕ್ಷುಕದವನು "ನಾನೂ ಹಾಗೇ ಕೂಗ್ತಿದ್ದೆ. ತಾಯಿ ಅಂತ ಕೂಗಿದ ಮನೇಲಿ ಹೆಂಗಸು ನಿನ್ನಂಥವನಿಗೆ ನಾನು ತಾಯಿನೇನೋ ಬಾಯಿ ಮುಚ್ಕೊಂಡು ಭಿಕ್ಷೇ ಅಂತ ಕೂಗು ಅಂದರು. ಇನ್ನೊಬ್ಬರು ಅಮ್ಮಾ ಅಂದ್ರೆ ನಿನ್ನ ನಾಲಿಗೆ ಸೀಳೀಬಿಡ್ತೀನಿ ನಾನ್ಯಾಕೋ ನಿನ್ನಮ್ಮ ಆಗ್ಲಿ ಅಂದರು. ಅಣ್ಣಾ ಅಂತ ಕೂಗಿದರೆ ನೀನು ನನಗೆ ತಮ್ಮನೇನೋ ಅಂದರು. ಯಜಮಾನರೇ ಅಂತ ಕೂಗಿದಾಗ ನಾನು ನಿನ್ನಂಥ ಭಿಕ್ಷುಕರಿಗೆಲ್ಲಾ ಯಜಮಾನನನೇನೊ ಅಂದರು. ಅದಕ್ಕೆ ಈ ತಾಪತ್ರಯಗಳೇ ಬೇಡ ಅಂತ ಹೆಸರು ಕೂಗಿ ಮರ್ಯಾದೆಯಿಂದ ಭಿಕ್ಷೆ ಹಾಕಿ ಅನ್ತೀನಿ. "ಅಂದ. ಈ ಸಮಜಾಯಿಷಿ ಅವರಿಗೆ ಸರಿಹೋಗಲಿಲ್ಲ. ಭಿಕ್ಷೆ ಬೇಡೋನ ಜೊತೆ ಮಾತೇನು ಅಂತ ಒಂದಿಷ್ಟು ದುಡ್ಡು ಕೊಟ್ಟು ಇನ್ಮುಂದೆ ನನ್ನ ಮನೆ ಕಡೆ ಬರಬೇಡ ಅಂದರು.

ನೀವು ಯಾವುದೇ ಹೆಸರಿನಿಂದ ಕರೆಯಿರಿ ಗುಲಾಬಿ ಗುಲಾಬಿಯೇ ಎಂದು ಷೇಕ್ಸ್‌ಪಿಯರ್ ಹೇಳಿದ್ದಾನೆ. ನೈಸರ್ಗಿಕವಾಗಿ ಇರುವ ಹೂವು ಹಣ್ಣುಗಳ ಹೆಸರುಗಳನ್ನು ಯಾರೂ ಅಪಭ್ರಂಶ ಮಾಡಿಲ್ಲ. ಮಲ್ಲಿಗೆ, ದಾಸವಾಳ, ಕಾಕಡ, ಸಂಪಿಗೆ ಇವುಗಳೆಲ್ಲಾ ಕಾಲಾನುಕಾಲದಿಂದ ಅದೇ ಹೆಸರಿನಿಂದ ಗುರುತಿಸಿಕೊಂಡು ಬಂದಿವೆ. ಮಲ್ಲಿಗೆಗೆ ಕಾಕಡಕ್ಕೆ ಬಿಳಿ ಹೂವು, ಸಂಪಿಗೆಗೆ ಹಳದಿ ಹೂವು, ದಾಸವಾಳಕ್ಕೆ ಪಿಂಕು ಹೂವು ಅಂತ ಗುರುತಿಸಿದರೂ ಅವುಗಳನ್ನು ಕೊಳ್ಳುವಾಗ ಸರಿಯಾದ ಹೆಸರನ್ನು ಹೇಳದಿದ್ದರೆ ನಿಮಗೆ ಬೇಕಾದ ಹೂವು ಸಿಗೋದಿಲ್ಲ. ಹಣ್ಣುಗಳಿಗೂ ಇದೇ ಅನ್ವಯವಾಗುತ್ತದೆ. ಆದರೆ ಈಗೀಗ ಕಾಲ ಬದಲಾಗಿ ಕನ್ನಡದ ಹಣ್ಣುಗಳು ಇಂಗ್ಲಿಷ್ ಹೆಸರಿನಿಂದ ಆರೆಂಜ್ ಆಪಲ್ ಅಂತ ಗುರುತಿಸಿಕೊಳ್ಳುತ್ತಿವೆ. ಆದರೆ ಅವುಗಳ ಹೆಸರನ್ನೂ ತುಂಡರಿಸಿ ಆಪ್, ಆರ್ ಅನ್ನೋಲ್ಲ. ಹೂವುಗಳಿಗೂ ಹಣ್ಣುಗಳಿಗೂ ಅವುಗಳಿಗೇ ಆದ ಪ್ರತ್ಯೇಕ ಹೆಸರುಗಳಿದ್ದರೂ ಒಂದೊಂದು ಪ್ರಾಂತೀಯ ಭಾಷೆಯಲ್ಲಿ ಬೇರೆ ಬೇರೆ ಹೆಸರುಗಳನ್ನು ಪಡೆದುಕೊಳ್ಳುತ್ತವೆ.

ಹಿಂದಿನ ಕಾಲದ ಮಧ್ಯಮ ವರ್ಗದ ಕುಟುಂಬಗಳಲ್ಲಿ ಮನೆಗೆ ಬಂದ ಸೊಸೆಗೆ ಅತ್ತೆ ಹೊಸ ಹೆಸರಿಡುತ್ತಿದ್ದರು. ಆಮೇಲೆ ಸೊಸೇನ ಯಾರಾದರೂ ನಿಮ್ಮ ಹೆಸರೇನೂಂತ ಕೇಳಿದರೆ ತಾಯಿ ಮನೇಲಿ ಇದು ಅತ್ತೆ ಮನೇಲಿ ಇದು ಅಂತ ಎರಡೂ ಹೆಸರುಗಳನ್ನು ಹೇಳೋರು. ಯಾರೋ ಹಿರಿಯರನ್ನು ಇದ್ಯಾಕೆ ಹೀಗೆ ಅಂತ ಕೇಳಿದ್ದಕ್ಕೆ ಅವರು ತಮಾಷೆಯಾಗಿ ನಮ್ಮ ಮನೆಯ ಸೊಸೆ ಅವಳ ತಾಯಿ ಮನೆಯ ಯಾವ ಬುದ್ಧಿಯನ್ನೂ ತರೋದು ಬೇಡ. ಇಲ್ಲಿ ಹೊಸದಾಗಿ ಎಲ್ಲವನ್ನೂ ಕಲಿಯಲಿ. ಇದು ಅವಳ ಹೆಸರಿನಿಂದ ಪ್ರಾರಂಭವಾಗಲಿ ಅಂತ ಇರಬಹುದು ಅಂದಿದ್ರಂತೆ.

ನಮಗೆ ಆಪ್ತರಾದವರನ್ನು ಲೋ, ಲೇ ಗುಗ್ಗೂ, ಢಡಿಯಾ, ತರ್ಲೆ, ಬೇಕೂಫ ಅಂತ ಕರೀತೀವಿ. ಅವರ ನಿಜವಾದ ಹೆಸರು ಮರೆತೇಹೋಗಿರುತ್ತೆ. ಸ್ನೇಹಿತರಿಗೆ

ಅವರ ಗುಣಸ್ವಭಾವಗಳಿಗೆ ಅನುಗುಣವಾಗಿ ಹೆಸರಿಟ್ಟಿರುತ್ತಾರೆ. ಕಾಸೇ ಬಿಚ್ಚದವನನ್ನು ಜಿಪುಣ ನನ್ನ ಮಗ, ಇನ್ನೊಬ್ಬರ ಮಾತನ್ನು ಕದ್ದು ಕೇಳಿಸಿಕೊಳ್ಳುವವನನ್ನು ಕೂತುಕಿವಿ, ಒಂದು ಕೇಳಿದರೆ ನೂರು ಆಡುವವನನ್ನು ಬಾಯಿಬಡುಕ, ಎತ್ತರ ಇರೋರನ್ನು ಅಡಕೆಮರ, ಕುಳ್ಳಗಿರೋರನ್ನು ತುಂಬೆಗಿಡ, ತುಂಬಾ ಕಪ್ಪಗಿರೋರನ್ನು ಭದ್ರಾವತಿ ಬಂಗಾರ, ತುಂಬಾ ಬೆಳ್ಳಗೆ ಇರೋರನ್ನು ಬಿಳೀ ಜಿರಳೆ ಎಂದು ಗುರುತಿಸುತ್ತಾರೆ. ಒಬ್ಬ ವ್ಯಕ್ತಿಯನ್ನು ಗುರುತಿಸುವುದಕ್ಕೆ ಅವನಿಗೊಂದು ಗುಣವಾಚಕ ಬೇಕು. ಆ ಗುಣವಾಚಕವನ್ನು ಅವನ ವ್ಯಕ್ತಿತ್ವಕ್ಕಾಗಲೀ, ನಡತೆಗಾಗಲೀ ಹೋಲಿಸಬಾರದು. ಉದಾಹರಣೆಗೆ ರಾಮಚಂದ್ರ ಅಂತ ಹೆಸರಿಟ್ಟುಕೊಂಡವರೆಲ್ಲಾ ಹೆಂಡತಿಯನ್ನು ಕಾಡಿಗೆ ಕಳಿಸಬೇಕಿಲ್ಲ. ಕೃಷ್ಣ ಅಂತ ಹೆಸರಿಟ್ಟುಕೊಂಡರೆ ಅಷ್ಟೇ ರಸಿಕತನ ಪ್ರದರ್ಶಿಸಬೇಕೇ, ಹನುಮಂತ ಅಂತ ಹೆಸರಿದ್ದವರು ವಾಹನ ಬಳಸದೇ ಊರಿಂದ ಊರಿಗೆ ಹಾರಿಕೊಂಡು ಹೋಗಬಹುದೇ. ಮೈಸೂರು ಪಾಕ್‌ನಲ್ಲಿ ಹೇಗೆ ಮೈಸೂರು ಇಲ್ಲವೋ ಹಾಗೆ ಇವರ ಹೆಸರುಗಳಲ್ಲಿ ಆ ಗುಣ ಯಾವುದೂ ಇರೋಕೆ ಸಾಧ್ಯವಿಲ್ಲ. ಆದರೂ ನಮ್ಮಲ್ಲಿ ಹೆಸರಿಡುವಾಗ ಯಾರೂ ರಾವಣ, ಕುಂಭಕರ್ಣ, ಮಾರೀಚ, ಸುಬಾಹು, ಕೈಕೇಯಿ, ಮಂಥರೆ, ಶೂರ್ಪಣಕಿ ಅನ್ನೋ ಹೆಸರುಗಳನ್ನು ಇಷ್ಟಪಡೋದಿಲ್ಲ. ಅಂಥಾ ಹೆಸರಿಟ್ಟರೂ ಅವರ ಗುಣಗಳು ಹಾಗೇ ಇರುವುದಿಲ್ಲ ಎನ್ನುವುದು ತಿಳಿದಿದ್ದರೂ ಆ ಹೆಸರುಗಳು ಅಷ್ಟು ಸಮಂಜಸವಲ್ಲ ಅಂದುಕೊಳ್ಳುತ್ತಾರೆ.

ಆದರೂ ಕೆಲವೊಮ್ಮೆ ಅವರಿಟ್ಟ ಹೆಸರಿಗೆ ಹೋಲಿಕೆಗಳನ್ನು ಮಾಡಿಕೊಂಡು ಬೇಜಾರಾಗುತ್ತಾರೆ. ಯಾರೋ ಒಬ್ಬರು "ನೋಡಯ್ಯ ನನ್ನ ಮಗನಿಗೆ ಶಿವಪ್ಪ ಅಂತ ಹೆಸರಿಟ್ಟೆ, ಅವನು ಆ ಶಿವಪ್ಪನಂತೆ ಇಬ್ಬರು ಹೆಂಡತಿಯರನ್ನು ಕಟ್ಟಿಕೊಂಡು ಇಲ್ಲೊಬ್ಬಳು ಅಲ್ಲೊಬ್ಬಳು ಅಂತ ಒದ್ದಾಡ್ತಿದಾನೆ "ಅಂದರು. ಮತ್ತೊಬ್ಬರು" ನನ್ನ ಮಗನಿಗೆ ಕೃಷ್ಣ ಅಂತ ಹೆಸರಿಟ್ಟಿದ್ದು ಮುಂದೆಂದಾದರೂ ಅವನೂ ಈ ರಾಜ್ಯದ ಮುಖ್ಯಮಂತ್ರಿಯಾಗಲಿ ಅಂತ. ದ್ವಾಪರಯುಗದ ಕೃಷ್ಣ ಗೋಕುಲದ ಮನೆಮನೆಗಳಲ್ಲಿ ಬೆಣ್ಣೆ ಕದ್ದಂತೆ ಇವನು ಇಲ್ಲಿ ಮನೆಮನೆಗಳಲ್ಲಿ ಸಿಕ್ಕಿಸಿಕ್ಕಿದ್ದನ್ನು ಕದಿಯುತ್ತಿದ್ದಾನೆ. ಜೊತೆಗೆ ಹುಡುಗಿಯರನ್ನು ಛೇಡಿಸುವುದೇನು, ಅವರನ್ನು ಗೋಳುಹುಯ್ದು–ಕೊಳ್ಳುವುದೇನು" ಅಂತ ನೊಂದುಕೊಂಡರು. ಇವೆಲ್ಲಾ ಕಾಕತಾಳೀಯ.

ನಮ್ಮ ಸರ್ಕಾರೀ ಖಾತೆಗಳಲ್ಲಿ ಇರುವ ಹೆಸರುಗಳನ್ನು ಕೇಳಿದರೆ ಅಚ್ಚರಿಯಾಗುತ್ತದೆ. ಸೋಮಪ್ಪ ಬಿನ್ನ ಗುಂಡಪ್ಪ ಬಿನ್ ಮರಿಯಪ್ಪ ಅಂದರೆ ಸೋಮಪ್ಪನ ಮಗ ಗುಂಡಪ್ಪನ ಮಗ ಮರಿಯಪ್ಪ ಎಂದು. ಹಾಗೆಯೇ ಕೆಲವರನ್ನು ನಿಮ್ಮ ಹೆಸರೇನು ಅಂತ ಕೇಳಿದರೆ ಇನಿಷಿಯಲ್‌ಗಳನ್ನೂ ವಿಸ್ತರಿಸಿ ಹೇಳುತ್ತಾರೆ. ನಂಜನಗೂಡು ನಾರಾಯಣಪ್ಪ ಸಂಪತ್ ಅಂದರೆ ಅದು ಎನ್. ಎಸ್. ಸಂಪತ್, ಬೀರೂರು ಪರಮಶಿವಯ್ಯ ಗುರುಮೂರ್ತಿ ಅಂದರೆ ಬಿ.ಪಿ. ಗುರುಮೂರ್ತಿ ಅಂತ. ಬಹಳ ವರ್ಷಗಳ ಹಿಂದೆ ನನ್ನನ್ನು ಯಾರಾದರೂ ನಿನ್ನ ಹೆಸರೇನು ಅಂತ ಕೇಳಿದಾಗ ತುರುವೇಕರೆ ಕೇಶವಮೂರ್ತಿ ರಾಮಮೂರ್ತಿ ಅಂತಿದ್ದೆ. ನಮ್ಮ ತಂದೆಯ ಊರು ತುರುವೇಕೆರೆ, ಅವರ ಹೆಸರು ಕೇಶವಮೂರ್ತಿ.

ಈಗೀಗ ಹೆಸರಿನ ಅವಶ್ಯಕತೆಯಿಲ್ಲ, ಹೊರಗೆ ಎಲ್ಲಾ ಕಡೆಯೂ ರೀ, ಮಿಸ್ಟರ್, ಹಲೋ, ಎಕ್ಸ್‌ಕ್ಯೂಸ್‌ಮಿ, ಇನ್ನೂ ಹೆಚ್ಚಾದರೆ ಏಯ್ ಓಲ್ಡ್ ಮ್ಯಾನ್, ಬ್ಲಡೀ ಫೆಲೋ ಮುಂತಾದ ನಾಮಧೇಯಗಳು ಬರುತ್ತವೆ. ದೇಹಕ್ಕೆ ನೂರಾರು ಹೆಸರು ಆದರೆ ಆತ್ಮಕ್ಕೆ ಯಾವ ಹೆಸರು. ಹೀಗಾಗಿ ಯಾರು ನಮ್ಮ ಹೆಸರು ಕೂಗಲೀ ಬಿಡಲೀ ಅದರಿಂದ ನಮಗೇನು. ಏನಂತೀರ?

■